

## ಶ್ರೀಸರ್ವಮೂಲ ಸಂದೇಶ

**ಸ್ಮರ್ತವ್ಯಃ ಸತತಂ ವಿಷ್ಣುಃ ವಿಸ್ಮರ್ತವ್ಯೋ ನ ಜಾತುಚಿತ್ ।**
**ಸರ್ವೇ ವಿಧಿ ನಿಷೇಧಾಸ್ಸ್ಯುರೇತಯೋರೇವ ಕಿಂಕರಾಃ ॥**

ಸರ್ವೋತ್ತಮನಾದ ಶ್ರೀವಿಷ್ಣುವಿನ ಸ್ಮರಣೆ ನಿರಂತರ ಮಾಡಬೇಕು. ಎಂದೂ ಅವನ ವಿಸ್ಮರಣೆ ಸಲ್ಲದು. ಶಾಸ್ತ್ರಗಳ ಎಲ್ಲಾ ವಿಧಿ ನಿಷೇಧಗಳು ಈ ಎರಡನ್ನು ತಿಳಿಸುವುದಕ್ಕಾಗಿಯೇ ಹೊರಟಿವೆ.

**–ತ್ರೈಲೋಕ್ಯಾಚಾರ್ಯ ಶ್ರೀಮದಾನಂದತೀರ್ಥ ಭಗವತ್ಪಾದರು**

**ಸಂಪುಟ–8 ಸಂಚಿಕೆ–8 ವಿರೋಧಿ ಸಂ.॥ ಆಷಾಢ–ಶ್ರಾವಣ ಅಗಸ್ಟ್ 2009**

ಸಂಸ್ಥಾಪಕರು:

**ಶ್ರೀ ಶ್ರೀ ವಿದ್ಯಾಧೀಶತೀರ್ಥ ಶ್ರೀಪಾದರು**

**ಶ್ರೀವಿದ್ಯಾಮಾನ್ಯ ಪ್ರಕಾಶನ**

ಶ್ರೀಮದ್ ಹೃಷೀಕೇಶತೀರ್ಥ ಸ್ವಾಮಿಯರ್ ಸ್ಮಾರಕ ಟ್ರಸ್ಟ್ (ರಿ.)

ಶ್ರೀ ಪಲಿಮಾರು ಹೃಷೀಕೇಶಮಠ, ಉಡುಪಿ.

www.palimarumatha.org

www.livepravachana.com

E-MAIL

sarvamoola@udupishripalimarumatha.org

## ವಿಷಯಾನುಕ್ರಮಣಿಕೆ


| | | |
|---|---|---|
| **ಗೀತಾಮೃತ** | ಶ್ರೀ ವಿದ್ಯಾಮಾನ್ಯತೀರ್ಥ ಶ್ರೀಪಾದರು | 1 |
| **ವಿದುರನೀತಿ** | ಶ್ರೀ ವಿಶ್ವಪ್ರಿಯತೀರ್ಥ ಶ್ರೀಪಾದರು | 3 |
| **ತೈತ್ತರೀಯೋಪನಿಷತ್** | ವಿ॥ ಬನ್ನಂಜೆ ಗೋವಿಂದಾಚಾರ್ಯ | 5 |
| **ಹರಿಭಕ್ತಿಸಾರ** | ವಿ॥ ಹಯವದನ ಪುರಾಣಿಕ | 7 |
| **ಅವಲೋಕನ** | ವಿ॥ ಸಗ್ರಿ ರಾಘವೇಂದ್ರ ಉಪಾಧ್ಯಾಯ | 10 |
| **ಭಾರತಭಾವದರ್ಪಣ** | ವಿ॥ ರಾಮವಿಟ್ಠಲಾಚಾರ್ಯ | 14 |
| **ಕಠೋಪನಿಷತ್** | ಡಾ॥ ಎನ್. ವೆಂಕಟೇಶ್ ಆಚಾರ್ಯ | 20 |
| **ನಾರಾಯಣವರ್ಮ** | ವಿ॥ ಬೆ.ನಾ. ವಿಜಯೀಂದ್ರಾಚಾರ್ಯ | 22 |
| **ಮಾರ್ಕಂಡೇಯಪುರಾಣ** | ವಿ॥ ಅಡ್ವೆ ಲಕ್ಷ್ಮೀಶಾಚಾರ್ಯ | 24 |
| **ಮುಖಪುಟ ಲೇಖನ** | ಶ್ರೀ ಬಿ. ಶ್ರೀನಿವಾಸಭಟ್ | 27 |
| **ಮಧ್ವ ಚರಿತ್ರೆ** | ವಿ॥ ಅನಂತಕೃಷ್ಣಾಚಾರ್ಯ | 29 |
| **ವಿಷ್ಣುಪುರಾಣ** | ಸ್ಫೂರ್ತಿ | 31 |
| **ವಿಶ್ವನ(ದ)ಲ್ಲಿ ವಿಶ್ವರೂಪದ(ನ) ದರ್ಶನ**–ಶ್ರೀ ಡಿ. ಗುರುಪ್ರಸಾದ್ ಭಟ್ | | 33 |
| **ಜ್ಯೌತಿಷ ಚಿಂತನೆ** | ವಿ॥ ಶ್ರೀ ಶ್ರೀಪತಿ ಉಪಾಧ್ಯಾಯ | 34 |
| **ನಭೋಮಂಡಲದ ವಿಸ್ಮಯಗಳು** | ಶ್ರೀ ಜಿ.ಹೆಚ್. ಜಗನ್ನಾಥ್ | 38 |
| **ನೆನಪಿನ ಅಂಗಳ** | ವಿ॥ ಶಂಕರನಾರಾಯಣಾಚಾರ್ಯ | 41 |



**ಪ್ರಕಾಶಕರು** — ಶ್ರೀ ಶಿಬರೂರು ವೇದವ್ಯಾಸ ತಂತ್ರಿ, ಉಡುಪಿ

**ಪ್ರಧಾನ ಸಂಪಾದಕರು** — ವಿಸಗ್ರಿ ರಾಘವೇಂದ್ರ ಉಪಾಧ್ಯಾಯ, ಉಡುಪಿ

**ಸಂಪಾದಕ ಮಂಡಳಿ:**

ವಿ॥ ಬಲರಾಮ ಭಟ್ಟ, ಉಡುಪಿ

ವಿ॥ ಮೋಹನಾಚಾರ್ಯ ಬೆಂಗಳೂರು

ವಿ॥ ಗಿರೀಶ ಉಪಾಧ್ಯಾಯ, ಕುತ್ಯಾರು

**ಸಲಹಾ ಮಂಡಳಿ**

ಶ್ರೀ ರಘುಪತಿ ತಂತ್ರಿ, ಬೆಂಗಳೂರು

ಶ್ರೀ ಲಕ್ಷ್ಮೀನಾರಾಯಣ ಶರ್ಮ ಉಡುಪಿ

ಶ್ರೀ ಹರ್ಷ ಬೆಂಗಳೂರು

ಮುಖಪುಟ ವಿನ್ಯಾಸ: ಕೆ. ಎಮ್. ಶೇಷಗಿರಿ ಬೆಂಗಳೂರು

ಅಕ್ಷರ ವಿನ್ಯಾಸ: ಸ್ವಾತಿ ಭಾಗವತ್ ಉಡುಪಿ

| | | | |
|---|---|---|---|
| **ಬಿಡಿ ಪ್ರತಿ** | **: ರೂ. 8.00** | **ವಾರ್ಷಿಕಚಂದಾ :** | ರೂ. 90.00 |
| **ಸದಸ್ಯರು** | : ರೂ. 2,250.00 | **15 ವರ್ಷಕ್ಕೆ** : | ರೂ. 1,250.00 |

**ಪೋಷಕರು :** ರೂ. 3,000.00



**ಅಯಾಯ ಲೇಖನಗಳಿಗೆ ಲೇಖಕರೇ ಜವಾಬ್ದಾರರು**



# ಗೀತಾಮೃತ

–ಶ್ರೀ ವಿದ್ಯಾಮಾನ್ಯತೀರ್ಥ ಶ್ರೀಪಾದರು

ಭಗವಾನ್ ಶ್ರೀ ಕೃಷ್ಣನು **"ನಾಸತೋ ವಿದ್ಯತೇ ಭಾವಃ ನಾಭಾವೋ ವಿದ್ಯತೇ ಸತಃ"** ಎಂಬ ಶ್ಲೋಕವನ್ನು ಉಪದೇಶವಮಾಡುವಾಗ ಎರಡು ಅರ್ಥವುಳ್ಳ ಶಬ್ದವನ್ನು ಪ್ರಯೋಗಮಾಡಿದ್ದಾನೆ. ಒಂದು ಅರ್ಥವನ್ನು ಇಲ್ಲಿಯವರೆಗೆ ವಿವರಿಸಿದ್ದಾಯಿತು. ಅರ್ಜುನನು ಯುದ್ಧದಿಂದ ಪಾಪವು ಪ್ರಾಪ್ತವಾಗುವುದು ಎಂದು ಶಂಕೆಯನ್ನು ಮಾಡಿದಾಗ ಈ ಶಂಕೆಯನ್ನು ಪರಿಹರಿಸಲೋಸುಗ ಇನ್ನೊಂದು ಅರ್ಥದಿಂದ ಈ ಶ್ಲೋಕವನ್ನು ಬಿಡಿಸುತ್ತಾನೆ. ಶಾಸ್ತ್ರನಿಷಿದ್ಧ ಕರ್ಮದಿಂದ ಅಂದರೆ ಅಸತ್‌ಕರ್ಮದಿಂದ ಹೇಗೆ ಸುಖವಿಲ್ಲವೋ ಅದೇ ರೀತಿ ಶಾಸ್ತ್ರವಿಹಿತ ಸತ್ಕರ್ಮಾನುಷ್ಠಾನದಿಂದ ಪಾಪವಾಗಲಿ–ದುಃಖವಾಗಲಿ ಪ್ರಾಪ್ತವಾಗಲಾರದು. ಪ್ರಕೃತದಲ್ಲಿ ದುಷ್ಟನಿಗ್ರಹರೂಪವಾದ ಯುದ್ಧವು ಕ್ಷತ್ರಿಯನಿಗೆ ಶಾಸ್ತ್ರವಿಹಿತ ಸತ್ಕರ್ಮವಾಗಿದೆ. ಸತ್ಕರ್ಮವಾದ ಕಾರಣ ಇದರಿಂದಾಗಿ ಪಾಪವು, ದುಃಖವು ಸಂಭವಿಸುವುದು ಎಂದು ಹೇಳುವುದು ಯುಕ್ತವಲ್ಲ.

ಲೋಕದಲ್ಲಿ ಧಾರ್ಮಿಕರಾದವರು ದುಃಖವನ್ನು ಅನುಭವಿಸಿ ಅಧಾರ್ಮಿಕರು ಸುಖವನ್ನು ಅನುಭವಿಸುವುದು ಪ್ರಾಯಶಃ ಕಂಡಿದೆ. ಉದಾಹರಣೆಗೆ ಧರ್ಮಮೂರ್ತಿಯಾದ ಧರ್ಮರಾಜನೇ ಅರಣ್ಯವಾಸದ ದುಃಖವನ್ನು ಆಚರಿಸಿದನು. ಪರಮನೀಚನಾದ ಅಧಾರ್ಮಿಕ ದುರ್ಯೋಧನನು ಹಸ್ತಿನಾಪುರದ ಸಂಪತ್ತನ್ನು ಭೋಗಿಸಿದನು. ಇಂತಹ ಉದಾಹರಣೆಗಳು ಬಹಳಷ್ಟು ಇವೆ. ಆದ್ದರಿಂದ ಶಾಸ್ತ್ರವಿಹಿತ ಕರ್ಮದಿಂದ ದುಃಖಪ್ರಾಪ್ತಿಯಾಗಲಾರದು ಎಂಬ ಶಾಸ್ತ್ರವಚನ ಹೇಗೆ ಯುಕ್ತವಾದೀತು? ಎಂಬ ಪ್ರಶ್ನೆಗೆ ಒಂದು ದೃಷ್ಟಿಯಿಂದ ವಿಚಾರಮಾಡಿದರೆ ಕಾಯೇನವಾಚಮನಸಾ ತ್ರಿಕರಣ ಶುದ್ಧಿಯಿಂದ ಧರ್ಮನಿಷ್ಠರಾಗಿರುವವರು ಬಹಳ ದುರ್ಲಭರು. ಹೊರಗೆ ಧಾರ್ಮಿಕರಂತೆ ಕಾಣುತ್ತಿದ್ದರೂ, ಒಳಗೆ ಮನಸ್ಸುಶುದ್ಧಿಯಿಲ್ಲದಿರುವುದರಿಂದಲೇ ಅವರ ಧರ್ಮಾನುಷ್ಠಾನವು ಯೋಗ್ಯ ಫಲವನ್ನು ಕೊಡದೇ ಇರಬಹುದು. ಆದರೆ ಧರ್ಮರಾಜನಂತಹವರಿಗೆ ಇದು ಕೂಡುವುದಿಲ್ಲ. ಅಂತಹವರು ಕಷ್ಟವನ್ನು ಅನುಭವಿಸಲು ಕಾರಣ ಏನೆಂದರೆ ಪ್ರಾರಬ್ಧಕರ್ಮ. **"ಅವಶ್ಯಮನುಭೋಕ್ತವ್ಯಂ ಕೃತಂ ಕರ್ಮ ಶುಭಾಶುಭಂ"** ಎಂಬ ಮಾತಿಗನುಗುಣವಾಗಿ ಜನ್ಮಾಂತರದ ಪ್ರಾರಬ್ಧ ಕರ್ಮದ ಫಲವಾಗಿ ಸುಖವನ್ನು ದುಃಖವನ್ನು ಅನುಭವಿಸಿಯೇ ತೀರಬೇಕು. ಇದು ಶಾಸ್ತ್ರದ ನಿರ್ಣಯ. ಇದಕ್ಕನುಗುಣವಾಗಿ

ಧಾರ್ಮಿಕರು ಪ್ರಾರಬ್ಧಕರ್ಮಕ್ಕನುಗುಣವಾಗಿ ದುಃಖವನ್ನು ಭೋಗಿಸುವ ಯೋಗವು ಬರಬಹುದು. ಸಂಸಾರದಲ್ಲಿ ವೈರಾಗ್ಯವುಂಟಾಗಿ ಅದರಿಂದ ನಿವೃತ್ತಿಯನ್ನು ಹೊಂದಿ ಮನಃಶುದ್ಧಿಯನ್ನು ಪಡೆದು ಬ್ರಹ್ಮನಿಷ್ಠರಾಗಬೇಕು ಎಂಬ ಉದ್ದೇಶದಿಂದ ಧಾರ್ಮಿಕರಿಗೆ ಪರಮಾತ್ಮನು ದುಃಖವನ್ನು ಕೊಡುತ್ತಾನೆ ಎಂದು ಇನ್ನೊಂದು ರೀತಿಯಿಂದ ಶಾಸ್ತ್ರಜ್ಞರು ತಿಳಿಸುತ್ತಾರೆ. ಆದರೆ ಸಂಸಾರದಲ್ಲಿ ಭಗವದ್ಭಕ್ತರಿಗೆ ವೈರಾಗ್ಯವನ್ನು ಉಂಟುಮಾಡುವುದು ಯುಕ್ತವಾದೀತೇ? ಎಂಬ ಜಿಜ್ಞಾಸೆ ಬಂದರೆ ಅದಕ್ಕೆ ಈ ರೀತಿಯಾಗಿ ಸಮಾಧಾನವನ್ನು ತಿಳಿಸುತ್ತಾರೆ. ಪರಮಾತ್ಮನು ಭಗವದ್ಭಕ್ತರಿಗೆ ದುಃಖವನ್ನು ಕೊಡುವುದು ತಾಯಿಯು ತನ್ನ ಪ್ರೀತಿಯ ಮಕ್ಕಳಿಗೆ ಕಹಿಯಾದ ಔಷಧವನ್ನು ಅವರ ಆರೋಗ್ಯಕ್ಕಾಗಿ ಕೊಡುವಂತೆ ಇಲ್ಲಿಯೂ ವೈರಾಗ್ಯವನ್ನು ಹೊಂದಿ ಬ್ರಹ್ಮನಿಷ್ಠರಾಗಬೇಕೆಂಬ ಉದ್ದೇಶದಿಂದ ದುಃಖವನ್ನು ಪ್ರೀತಿಯಿಂದಲೇ ಕೊಡುತ್ತಾನೆ. ಧರ್ಮಮೂರ್ತಿಯಾದ ಧರ್ಮಜನಿಗೆ ವನವಾಸದ ದುಃಖ ಬರಲು ಇನ್ನೊಂದು ಕಾರಣ ತಿಳಿಸುತ್ತಾನೆ. ತನ್ನ ತಮ್ಮಂದಿರಿಂದೊಡಗೂಡಿ ಭಗವಂತನಾದ ಶ್ರೀಕೃಷ್ಣನ ನೇತೃತ್ವದಲ್ಲಿ ನಡೆಸಿದ ರಾಜಸೂಯಯಾಗದಿಂದ ಮಿತಿಮೀರಿದ ಪುಣ್ಯವನ್ನು ಗಳಿಸಿದನು. ಆ ಪುಣ್ಯವನ್ನು ಭೀಮಸೇನಾದಿಗಳಿಗೆ ಯಥಾಯೋಗ್ಯವಾಗಿ ಹಂಚುವುದಕೋಸ್ಕರ ಶ್ರೀಕೃಷ್ಣನು ಧರ್ಮರಾಜನಿಂದ ದ್ಯೂತಕ್ರೀಡೆಯನ್ನು ಮಾಡಿಸಿ, ಆ ಕ್ರೀಡೆಯಲ್ಲಿ ತನ್ನ ತಮ್ಮಂದಿರನ್ನೇ ಪಣವಾಗಿಟ್ಟು ಅವರಿಗೆ ವನವಾಸಾದಿಗಳು ಆಗುವಂತೆ ಮಾಡಿದನು.

ಅಧಾರ್ಮಿಕರು ಸುಖವನ್ನು ಅನುಭವಿಸುವ ಕಾರಣವನ್ನು ಈ ರೀತಿಯಾಗಿ ತಿಳಿಸುತ್ತಾರೆ. ಹಿಂದಿನ ಜನ್ಮದಲ್ಲಿ ಮಾಡಿದ ಸುಕೃತವು ಈ ಜನ್ಮದಲ್ಲಿ ಫಲಕೊಡಲು ಆರಂಭಿಸಿದರಿಂದ ಸುಖವನ್ನು ಅನುಭವಿಸುವರು. ಈ ಜನ್ಮದ ಫಲ ಮುಂದಿನ ಜನ್ಮಕ್ಕೆ ಉಂಟೇ ಉಂಟು. ಅಥವಾ ಅಧರ್ಮದಲ್ಲಿ ಅಭಿರುಚಿಯನ್ನು ಹೊಂದಲು ಮತ್ತು ಇನ್ನಷ್ಟು ಪಾಪಕೆಲಸವನ್ನು ಮಾಡಲು, ಆ ಮೂಲಕ ಯೋಗ್ಯತಾನುಸಾರ ಗತಿಹೊಂದಲಿಕ್ಕಾಗಿ ಪರಮಾತ್ಮನು ಸುಖವನ್ನು ನೀಡುತ್ತಾನೆ. ಸುಖವೈಭವದ ಮದದಿಂದ ಮೆರೆದು ಕೊನೆಗೆ ಅವರು ದುಃಖವನ್ನೇ ಅನುಭವಿಸುತ್ತಾರೆ. ಉದಾಹರಣೆಗೆ ಅಪಥ್ಯ ಮಾಡುವ ರೋಗಿಗೆ ತಿಂದ ಆಹಾರದಿಂದಾಗಿ ತಾತ್ಕಾಲಿಕ ಸುಖವುಂಟಾದರೂ ಕೊನೆಗೂ ಮರಣಪ್ರಾಪ್ತಿ ದುಃಖವುಂಟೇ ಉಂಟು. ಅದೇ ರೀತಿ ಅಧಾರ್ಮಿಕರು ಸುಖವನ್ನು ಅನುಭವಿಸುತ್ತಾ ಕೊನೆಗೆ ಅಧೋಗತಿಗೆ ಇಳಿದು ದುಃಖವನ್ನು ಅನುಭವಿಸುತ್ತಾರೆ. ಇದು ಶಾಸ್ತ್ರಸಿದ್ಧ ಸಮಾಧಾನ. ಶ್ರೀಕೃಷ್ಣನ ಈ ರೀತಿಯಾದ ವಿಶ್ಲೇಷಣೆಯಿಂದ ಯಾವ ಪ್ರಶ್ನೆಗೂ ಅವಕಾಶವಿರಲಾರದು.

(19ನೇ...ಪುಟದಲ್ಲಿ)

# ವಿದುರನೀತಿ

–ಶ್ರೀ ಶ್ರೀ ವಿಶ್ವಪ್ರಿಯತೀರ್ಥಶ್ರೀಪಾದರು, ಶ್ರೀಅದಮಾರುಮಠ,

ಬರಹಃ ಕೃಷ್ಣಾ

ಪುರೋಹಿತರ ವಿಷಯ ತೆಗೆದುಕೊಂಡ ವಿದುರ, ಇನ್ನು ರಾಜರ ವಿಷಯ ಹೇಳುತ್ತಾನೆ. **'ರಂಜಯತಿ ರಾಜ್ಯತೆ ಇತಿ ರಾಜಃ'** ಪ್ರಜೆಗಳ ರಕ್ಷಣೆಯನ್ನು ಮಾಡಿಕೊಂಡು ಅವರನ್ನು ಚೆನ್ನಾಗಿ ಆಳುತ್ತಿರುವವನನ್ನು 'ರಾಜ' ಎಂದು ಕರೆದರು. ಯಾವ ರಾಜ ಪ್ರಜೆಗಳನ್ನು ನೆಮ್ಮದಿಯಲ್ಲಿರುವಂತೆ ನೋಡಿಕೊಳ್ಳುವುದಿಲ್ಲವೋ ಅಂತಹ ರಾಜನನ್ನು ಒದ್ದೋಡಿಸಿದರೆ ತಪ್ಪಿಲ್ಲ–ಎಂದು ವಿದುರನು ನುಡಿದನು. ಸ್ವಯಂ ಒಬ್ಬ ರಾಜನು ತನ್ನ ವ್ಯಕ್ತಿತ್ವದಿಂದ ಬೆಳಗುತ್ತಾನೆ. ಇದರಿಂದ ರಾಜ್ಯದಲ್ಲಿದ್ದ ಪ್ರಜೆಗಳು ಶೋಭಿಸುತ್ತಾರೆ. ಇಲ್ಲಿ ರಾಜ್ಯವೆಂದರೆ ನಮ್ಮ ನಿಮ್ಮ ಶರೀರವೆಂದು ಕೂಡ ಇಟ್ಟುಕೊಳ್ಳಬೇಕು. ಇಲ್ಲಿ ಇರತಕ್ಕಂತಹ ಪ್ರಜೆಗಳೆಂದರೆ ತತ್ವಾಭಿಮಾನಿ ದೇವತೆಗಳು. ಇವರು ಚೆನ್ನಾಗಿ ಇರಬೇಕೆನ್ನುವ ಸಲುವಾಗಿ ಈ ಶರೀರವೆಂಬ ರಾಜ್ಯವನ್ನು ನಾವು ಚೆನ್ನಾಗಿ ನೋಡಿಕೊಳ್ಳಬೇಕು. ಅಂದರೆ ಒಳ್ಳೆಯ ರೀತಿಯ ಅಧ್ಯಯನ–ಅಧ್ಯಾಪನಗಳ ಮೂಲಕ ನಾವು ಈ ರಾಜ್ಯವನ್ನು ಶೋಭಿಸುವಂತೆ ಮಾಡಬೇಕು. ಇದರಿಂದ ಶರೀರಕ್ಕೆ ಕೀರ್ತಿ ಬರುವುದು ಸಹಜ. ಇಂತಹ ಶೋಭೆಯನ್ನು ಯಾರು ತಂದು ಕೊಡುವುದಿಲ್ಲವೋ ಅವರನ್ನು ಕಾಡಿಗೆ ಓಡಿಸಿ ಎಂದು ವಿದುರನು ಕಿವಿಮಾತನ್ನು ಹೇಳುತ್ತಾನೆ. ಆದ್ದರಿಂದ ದೇವರು ಅಂತಹ ವ್ಯಕ್ತಿಯನ್ನು ಆ ಶರೀರದಿಂದ ಓಡಿಸಿ, ಕಾಡಿನ ಪ್ರಾಣಿಯ ಜನ್ಮ ಕೊಡುತ್ತಾನೆಂಬುದು ಅದರ ಅರ್ಥ. ಅದನ್ನು ಗಮನದಲ್ಲಿಟ್ಟುಕೊಂಡು ಒಬ್ಬ ವ್ಯಕ್ತಿಯು ಶರೀರಕ್ಕೆ ಬಂದ ಮೇಲೆ ಈ ರಾಜ್ಯವನ್ನು ಕಾಪಾಡುವಂತದ್ದು ಆ ವ್ಯಕ್ತಿಯ ಕೆಲಸ. ಹಾಗೆಯೇ ಧೃತರಾಷ್ಟ್ರ ನೀನು ರಾಜ್ಯದಲ್ಲಿ ಚೆನ್ನಾಗಿ ಇರು. ಪ್ರಜೆಗಳನ್ನು ಚೆನ್ನಾಗಿ ನೋಡಿಕೋ. ರಾಜನಾಗಿ ಈ ದೇಶದಲ್ಲಿ ಬಾಳು ಎಂದನು.

**ಭಾರ್ಯಾ–** ಭರತಿ ಇತಿ ಭಾರ್ಯಾ ಎಂದು ವೇದವ್ಯಾಸ ದೇವರು ಭಾರ್ಯಾ ಶಬ್ದವನ್ನು ತುಂಬಾ ಚಾತುರ್ಯದಿಂದ ಪ್ರಯೋಗ ಮಾಡಿದ್ದಾರೆ. ಪುರುಷನಾದುದಕ್ಕೆ ಪತಿಯೆಂದು, ಸ್ತ್ರೀ ಆದುದಕ್ಕೆ ಪತ್ನಿಯೆಂದು ಕರೆಯುವುದು. ಯದ್ಯಪಿ ಪತಿ ಮತ್ತು ಪತ್ನಿ ಎನ್ನುವ ಶಬ್ದಕ್ಕೆ ಪಾಲನೆ ಮಾಡುವವರು ಎಂದು ಅರ್ಥ. ಇಲ್ಲಿ ಎರಡು ಬಗೆಯ ಪಾಲನೆಯನ್ನು ನಾವು ನೋಡಬಹುದು. ಹೊಟ್ಟೆಗೆ ಹಿಟ್ಟನ್ನು ಹಾಕುವ ಮೂಲಕ ಪರಸ್ಪರ ಪಾಲನೆ, ಇನ್ನೊಂದು ತಲೆಗೆ ವಿಷಯವನ್ನು ಕೊಡುವ ಮೂಲಕ ಅಧ್ಯಾತ್ಮಿಕ ಕ್ಷೇತ್ರದಲ್ಲಿ ಪಾಲನೆ ಮಾಡುವುದು.

ಇಲ್ಲಿ ಯಾರಿಗೆ ಯಾರಿಂದ ಭರಣ, ಎಂದರೆ 'ಪರಸ್ಪರ ಭರಣ' ವೆಂದರ್ಥ. ಇಬ್ಬರೂ ಒಬ್ಬರನ್ನೊಬ್ಬರು ಪೋಷಿಸಬೇಕು. ಪತಿಯು ಮೂರ್ಖನಾಗಿದ್ದರೆ ಅವನನ್ನು ಓಡಿಸು. ಪತ್ನಿಯು ಕೆಟ್ಟ ಮಾತು ಆಡತಕ್ಕಂತವಳಾಗಿದ್ದರೆ, ಜೀವನದಲ್ಲಿ ಸರಿಯಾಗಿ ಇಲ್ಲದಿದ್ದರೆ ಅವಳನ್ನು ಓಡಿಸು ಎಂದು ಹೇಳಿದರು. ಓಡಿಸುವುದರ ಅಭಿಪ್ರಾಯ ತಿದ್ದಬೇಕು, ತಿಳಿಹೇಳಬೇಕು ಎಂದರ್ಥ.  ಒಮ್ಮೆ ಸತ್ಯಭಾಮೆಯು ದ್ರೌಪದಿಯೊಡನೆ ಅವಳ ಐದು ಗಂಡಂದಿರೂ ಅವಳ ಮೇಲೆ ಬಹಳ ಪ್ರೀತಿ ಇಟ್ಟುಕೊಂಡಿರುವುದು ಹೇಗೆ ಎಂದು ಕೇಳಿದಳಂತೆ. ಗಂಡಂದಿರು ಏಳುವ ಮೊದಲು ತಾನು ಏಳುತ್ತೇನೆ ಎಂದು ದ್ರೌಪದಿಯ ಮೊದಲು ಉತ್ತರವಾಗಿತ್ತು. ಆದ್ದರಿಂದಲೇ ನಮಗೆ ಸಾಧಾರಣವಾಗಿ ನವರಾತ್ರಿ ಮೊದಲು, ಉತ್ಥಾನ ದ್ವಾದಶಿ ನಂತರ ಬರುತ್ತದೆ. ಇದರ ಉದ್ದೇಶ– ನವರಾತ್ರಿಯಲ್ಲಿ ಲಕ್ಷ್ಮೀ ತಾನು ಮೊದಲು ನಿದ್ದೆಯಿಂದೆದ್ದಿದ್ದು, ಒಂದು ತಿಂಗಳ ನಂತರ ಬರುವ ಉತ್ಥಾನ ದ್ವಾದಶಿಯಂದು ಭಗವಂತ ಏಳುತ್ತಾನೆ. ಹಾಗೆಯೇ ದ್ರೌಪದಿಯು ಪತಿಯಂದಿರು ಚಾಪೆಯಿಂದ ಏಳುವ ಮೊದಲೇ ಎದ್ದು ಅವರಿಗೆ ಬೇಕಾಗಿರತಕ್ಕಂತಹ ಅನುಕೂಲತೆಗಳನ್ನು ಮಾಡಿಕೊಡುತ್ತಾಳೆ. ಮನೆಯಲ್ಲಿ ಕೋಟಿ ಭೃತ್ಯರು ಇದ್ದರು. ಆದರೂ ಗಂಡಂದಿರು ಬೇಟೆಯಿಂದ ಹಿಂದಿರುವಾಗ ಸ್ವಯಂ ತಾನೇ ಬಾಗಿಲು ತೆರೆದು ಗಂಡಂದಿರನ್ನು ಒಳಗೆ ಸ್ವಾಗತಿಸುತ್ತಿದ್ದಳಂತೆ. ಅವರ ಶುಶ್ರೂಷೆ ತಾನೇ ಮಾಡುತ್ತಿದ್ದಳಂತೆ. ಈ ರೀತಿಯಲ್ಲಿ ಪತಿ ಪತ್ನಿಯರು ಒಬ್ಬರೊನ್ನೊಬ್ಬರು ಪಾಲನೆ ಮಾಡದಿದಲ್ಲಿ ಒಬ್ಬರನ್ನೊಬ್ಬರು ತ್ಯಜಿಸುವುದು ತಪ್ಪಲ್ಲ ಎಂದು ವಿದುರನು ಧೃತರಾಷ್ಟ್ರನ ಮೂಲಕ ಸಮಾಜಕ್ಕೆ ಎಚ್ಚರಿಕೆ ಕೊಡುತ್ತಾನೆ.

ತ್ಯಜಿಸಬಹುದಾದ ಜನರ ಗುಂಪಿಗೆ ಇನ್ನೆರಡು ತರಹದ ಜನರನ್ನು ಸೇರಿಸುತ್ತಾ ವಿದುರ ಹೇಳುತ್ತಾನೆ, **'ಗ್ರಾಮಕಾಮಂಚ ಗೋಪಾಲಂ ವನಕಾಮಂಚ ನಾಪಿತಂ'** ಕ್ಷೌರಿಕನಿಗೆ 'ನಾಪಿತಾ' ಎಂದು ಹೆಸರು. ಏಕೆಂದರೆ **'ನವಿದ್ಯತೇ ಪಿತಾ ಯಸ್ಯ ವಂಶಸ್ಯ ಸಃ ನಾಪಿತ'** ಪಿತ ಇಲ್ಲದವ, ಮೂಲ ಇಲ್ಲದವನೆಂದು ಅರ್ಥ. ಯಾವ ವಂಶಕ್ಕೆ, ಯಾವ ವೃತ್ತಿಗೆ ಮೂಲ ಇಲ್ಲವೋ ಅವನನ್ನು 'ನಾಪಿತಾ' ಎಂದು ಕರೆದರು. ಒಬ್ಬ ಒಂದು ಸಂದರ್ಭದಲ್ಲಿ ತನಗೆ ತಾನೇ ಕ್ಷೌರ ಮಾಡಿಕೊಂಡು ಬಿಟ್ಟನಂತೆ. ಅದಕ್ಕೆ ಎಲ್ಲರೂ ಸೇರಿ ಅವನನ್ನು ಮೂಲ ಇಲ್ಲದ ವಂಶದವನೆಂದು ಕರೆದರು. ಇದರಿಂದ ಯಾರು ಸ್ವಕ್ಷೌರವನ್ನು ಮಾಡಿಕೊಳ್ಳುತ್ತಾನೋ ಅವನೇ 'ನಾಪಿತ'ನು. ಯಾವ ನಾಪಿತನು, ತಾನಿರುವ ಊರಿನ ಉಸಾಬರಿಯೇ ಬೇಡವೆಂದು ಕಾಡಿಗೆ ಹೋಗುವನೋ ಮತ್ತು ಕಾಡಿನಲ್ಲಿಯೇ ಆಕಳುಗಳನ್ನು ಮೇಯಿಸಿಕೊಂಡು ಇರಬೇಕಾದ

(9ನೇ.... ಪುಟದಲ್ಲಿ)

# ತೈತ್ತಿರೀಯೋಪನಿಷತ್

ಬರಹ: ಪಿ. ವೆಂಕಟರಮಣ ಆಚಾರ್ಯ, ಉಡುಪಿ ಪ್ರವಚನ: ಬನ್ನಂಜೆ ಗೋವಿಂದಾಚಾರ್ಯ

## ಅಥಾತಃ ಸಂಹಿತಾಯಾಃ ಉಪನಿಷದಂ ವ್ಯಾಖ್ಯಾಸ್ಯಾಮಃ

ಶೀಕ್ಷಾಶಾಸ್ತ್ರದಲ್ಲಿ ಅಕ್ಷರಗಳನ್ನು ಪ್ರಯತ್ನಪೂರ್ವಕವಾಗಿ ಹೇಗೆ ಉಚ್ಚರಿಸಬೇಕು ಎಂದು ಹಿಂದೆ ಹೇಳಿದ್ದಾರೆ. ಸ್ವರ, ಮಾತ್ರೆ ಸಹಿತವಾಗಿ ವರ್ಣಗಳನ್ನು ಬಲದಿಂದ ಉಚ್ಚರಿಸಿದಾಗ ಸಾಮ ಸಂತಾನವಾಗಿ ಋಕ್‌ಗಳುಂಟಾಗುತ್ತವೆ. ಸಾಮ ಮತ್ತು ಸಂತಾನಗಳನ್ನು ಒಟ್ಟಿಗೆ ತಿಳಿದರೆ ಅದನ್ನು ಸಂಹಿತೆ ಎಂದು ಹೇಳುತ್ತಾರೆ. ಮೊದಲು ಪದ ಸಂಹಿತೆ ನಂತರ ವಾಕ್ಯ ಸಂಹಿತೆ. ಹೀಗೆ ಇವೆರಡರ ಸಂಹಿತೆಯಿಂದ ವೇದ ಉಂಟಾಯಿತು. ಸಂಹಿತೆಯ ಅರ್ಥವನ್ನು ಮುಂದೆ ತಿಳಿಸುತ್ತೇನೆ. ಸಾಮ ಸಂತಾನಗಳ ಸಂಹಿತೆಯಿಂದ ಉಂಟಾದ ಉಪನಿಷತ್ತನ್ನು ಮುಂದೆ ತಿಳಿಸುತ್ತೇನೆ. ಸಂಹಿತೆಯಲ್ಲಿ ಅಡಗಿರುವ ರಹಸ್ಯವನ್ನು ಮುಂದೆ ಋಷಿಗಳು ಹೇಳುತ್ತಾರೆ. ಈ ಸಂಹಿತೆಗಳ ರಹಸ್ಯ ಅರ್ಥವನ್ನು ವಿಶಿಷ್ಟವಾಗಿ ಹೇಳುತ್ತೇನೆ. ಅಥಾತಃ ಎಂಬುದು 2 ಶಬ್ದಗಳಿಂದ ಉಂಟಾಗಿದೆ. ಅಥ ಮತ್ತು ಅತಃ. ಅಥ ಎಂದರೆ ಆಮೇಲೆ ಅಥವಾ ಅನಂತರ ಎಂದು ಅರ್ಥ ಇದೆ. ಆದರೆ ಇಲ್ಲಿ ಈ ಅರ್ಥ ಸರಿಯಾಗುವುದಿಲ್ಲ. ಏಕೆಂದರೆ ಮೊದಲು ಏನಾದರೂ ಉಪಕ್ಷೇಪ ಆಗಿದ್ದರೆ ಅನಂತರ ಎಂದು ಹೇಳಬೇಕಿತ್ತು. ಶೀಕ್ಷಾಶಾಸ್ತ್ರದ ಪ್ರತಿಪಾದನೆ ಮಾಡಿದನಂತರ ಎಂಬುದು ಹೇಳಬೇಕಾಗಿತ್ತು. ಬ್ರಹ್ಮತತ್ವವನ್ನು ತಿಳಿಯಲಿಕ್ಕೋಸ್ಕರ ಅಧಿಕಾರ ಬಂದನಂತರ ಎನ್ನದೆ, ಶೀಕ್ಷಾಶಾಸ್ತ್ರದಿಂದ ಶಬ್ದ ಶಾಸ್ತ್ರ ತಿಳಿದುಕೊಂಡು ಬ್ರಹ್ಮತತ್ವವನ್ನು ತಿಳಿಯಲು ಅಧಿಕಾರ ಪಡೆದನಂತರ ಎಂದು ಅರ್ಥ. ಅಧಿಕಾರ ಯಾರಿಗೆ? ಯಾರು ಶೀಕ್ಷಾಶಾಸ್ತ್ರ ಓದಬೇಕು? ಯಾಕಾಗಿ ಓದಬೇಕು? ಅಥ ಎಂಬುದು ಅಧಿಕಾರವನ್ನು ಹೇಳಿದರೆ ಅತಃ ಎಂಬುದು ಫಲವನ್ನು ಹೇಳುತ್ತದೆ. ಇದರ ಅಧ್ಯಯನದಿಂದ ಮೋಕ್ಷಾಂತ ಫಲ ಹೇಳುತ್ತದೆ. ಇದು ಜೀವದ ಉದ್ಧಾರಕ್ಕೆ ಬೇಕಾಗುವ ಮಾರ್ಗವನ್ನು ತೋರಿಸುವುದರಿಂದ ಶಬ್ದಶಾಸ್ತ್ರವನ್ನು ಕಲಿತು ಅಧಿಕಾರವನ್ನು ಪಡೆಯಬೇಕು.

ಇದಕ್ಕೆ ಇನ್ನೊಂದು ಅರ್ಥ ಇದೆ. ವರ್ಣ, ಸ್ವರ, ಮಾತ್ರೆ, ಇತ್ಯಾದಿಗಳು ಹೇಗೆ ಭಗವಂತನ ರೂಪವನ್ನು ಹೇಳುತ್ತವೋ ಹಾಗೆ ಅಥ ಹಾಗೂ ಅತಃ ಎಂಬುದು ಸಹ

ಭಗವಂತನ ಹೆಸರು. 'ಅ' ಕಾರ ಎಂಬುದು ಮೂಲಾಕ್ಷರ ಅಲ್ಲದೆ ಓಂಕಾರದ ಮೊದಲಾಕ್ಷರ. ಸ್ವರಗಳಲ್ಲಿ ಮೊಟ್ಟ ಮೊದಲಿಗೆ ಉಚ್ಚರಿಸಲ್ಪಡುವ ಅಕ್ಷರ 'ಅ' ಅದು ಪರಮಾತ್ಮನನ್ನು ಹೇಳುತ್ತದೆ. ಒಂದು ಕಡೆ 'ಥ' ಇದೆ. ಇನ್ನೊಂದು ಕಡೆ ತ ಇದೆ. ಇವೆರಡು ಬ್ರಹ್ಮತತ್ವ ಹಾಗೂ ವಾಯುತತ್ವವನ್ನು ಸೂಚಿಸುತ್ತವೆ. ಅಕಾರ ವಿಷ್ಣುವನ್ನು ಹೇಳುತ್ತದೆ. ಅ,ಥ, ಹಾಗೂ ತ ಎಂಬುದು ವಿಷ್ಣು, ಬ್ರಹ್ಮ ಹಾಗೂ ವಾಯುವನ್ನು ಹೇಳುತ್ತದೆ. 'ಅ' ಎಂಬುದನ್ನು ಥ ಎಂಬ ಇರುವಿಕೆಯಿಂದ ಸೂಚಿಸಿದರೆ ತ ಎಂಬುದು ಹಬ್ಬಿಕೊಂಡಿರುವಿಕೆಯನ್ನು ಸೂಚಿಸುತ್ತದೆ. ಅ ಎಂದರೆ ಬ್ರಹ್ಮ. ಯಾವುದು ನಿನ್ನೊಳಗೆ ಇದೆಯೋ ಅದೇ ಸೂರ್ಯನಲ್ಲಿಯೂ ಇದೆ. ಅಥ ಎಂದರೆ ಸ್ಥಿತವಾದ (ಇರುವಿಕೆ) ಬ್ರಹ್ಮ. ಅತಃ ಎಂದರೆ ವ್ಯಾಪಕವಾದ ಬ್ರಹ್ಮ ಎಲ್ಲೆಡೆಯಲ್ಲಿ ತುಂಬಿರುವ ಶಕ್ತಿಯೇ ನಿನ್ನೊಳಗೂ ಸೂಕ್ಷ್ಮರೂಪದಿಂದ ತುಂಬಿಕೊಂಡಿದೆ ಎಂದು ಈ ಎರಡು (ಅಥ ಹಾಗೂ ಅತಃ) ಶಬ್ದಗಳು ಸೂಚಿಸುತ್ತವೆ. ಈ ಶಬ್ದಗಳನ್ನು ಉಚ್ಚರಿಸುವುದರಿಂದ ಭಗವಂತನನ್ನು ಪ್ರಾರ್ಥಿಸಿದ ಹಾಗೆ ಆಗುತ್ತದೆ.

ಹೀಗೆ ಎಲ್ಲರನ್ನು ಸ್ಮರಿಸಿಕೊಂಡು ಸಂಹಿತೆಯ ರಹಸ್ಯವನ್ನು ಹೇಳುತ್ತೇವೆ ಎಂದು ಋಷಿಗಳು ಹೇಳಿದರು. ಸಂಹಿತೆ ಎಂದರೆ ಮೊದಲೇ ಹೇಳಿದ ಹಾಗೆ ಸಾಮ ಹಾಗೂ ಸಂತಾನಗಳ ಮಿಲನ. ಒಟ್ಟು ಕೂಡಿರುವಿಕೆಯನ್ನು ಸಂಹಿತೆಯಿಂದ ಸೂಚಿಸುತ್ತಾರೆ. ಸಂಹಿತಾ ಎಂದರೆ ಜಗತ್ತಿನಲ್ಲಿ ಅತ್ಯಂತ ನಿಕಟವಾಗಿರುವ ತತ್ವ. ಇದು ಭಗವಂತ. ಸಂಹಿತಾ ಎಂದರೆ ಭಗವತತ್ತ್ವ. ಅದು ನಮಗೆ ಬಹಳ ನಿಕಟವಾದದ್ದು. ಅತ್ಯಂತ ಒಳಗಿರುವ ವಸ್ತುವಿನ ಒಳಗೆ ಅದು ಇದೆ. ಒಳಗಿನ ಒಳಗೆ ಸೇರಿದೆ. ಭಗವತತ್ತ್ವದ ರಹಸ್ಯವನ್ನು ನಾವು ಹೇಳುತ್ತೇವೆ. ಸಂಹಿತೆ ಎಂಬುದು ಹೇಗೆ ವೈದಿಕದ ರಹಸ್ಯವನ್ನು ಸೂಚಿಸುತ್ತದೋ ಹಾಗೆಯೇ ಉಪನಿಷತ್ತು ಎಂಬುದು ಸಹ ರಹಸ್ಯವನ್ನು ಸೂಚಿಸುವ ಶಬ್ದ. 'ಉಪ' ಎಂಬುದಕ್ಕೆ ಹಲವು ಅರ್ಥಗಳಿವೆ. ಉಪ ಎಂದರೆ ಹತ್ತಿರವಾಗಿ ಅದು ಬಹಳ ಹತ್ತಿರ ಇರುವುದು. ಉಪ ಎಂದರೆ ಅದು ಬಹಳ ಎತ್ತರವಾಗಿದೆ. ಅಲ್ಲದೆ ಉಪ ಎಂದರೆ ಬಹಳ ರಹಸ್ಯವಾಗಿದೆ. ಉಪಾಂಶು ಎಂದರೆ ಎಲ್ಲದರ ರಹಸ್ಯ ವಿಷಯ. 'ನಿ' ಎಂದರೆ ನಿಶ್ಚಯವಾಗಿ, 'ಸತ್' ಎಂದರೆ ಇರುವದು. ಯಾವುದು ಕರಾರುವಕ್ಕಾಗಿ ರಹಸ್ಯವನ್ನು ತಿಳಿಸಿಕೊಡುತ್ತದೋ ಅದು ಉಪನಿಷತ್. ರಹಸ್ಯ ಅಲ್ಲದೆ ಸಾರವತ್ತಾದ ಭಾಗವನ್ನು ನಿಶ್ಚಯವಾಗಿ ತಿಳಿಸಿಕೊಡುವದು 'ಉಪನಿಷತ್' .

**(ಸಶೇಷ)**

# ಶ್ರೀಹರಿಭಕ್ತಿಸಾರ

-ವಿ॥ ಹಯವದನ ಪುರಾಣಿಕ, ತಿರುಪತಿ

**ನಿನ್ನ ಸೂತ್ರ ದೊಳಾಡುವವು ಚೈ**
**ತನ್ಯ ಸಚರಾಚರಗಳೆಲ್ಲವು**
**ನಿನ್ನ ಸೂತ್ರವು ತಪ್ಪಿದರೆ ಮೊಗ್ಗುವವು ಊಹೆಗಳು ।**
**ಇನ್ನು ನಮಗೆ ಸ್ವತಂತ್ರವೆಲ್ಲಿಯ**
**ದನ್ಯ ಕರ್ಮ ಸುಕರ್ಮವೆಲ್ಲವು**
**ನಿನ್ನದೆಂದೊಪ್ಪಿಸಿದೆ ರಕ್ಷಿಸು ನಮ್ಮನನವರತ ॥೬೯॥**

ಶ್ರೀಹರಿ, ನಿನ್ನ ಸೂತ್ರಕ್ಕೆ ವಶವಾಗಿಯೇ ಚರಾಚರ ಚೇತನವೆಲ್ಲವೂ ಆಡುವವು. ನಿನ್ನ ಸೂತ್ರ ತಪ್ಪಿದರೆ ಎಲ್ಲ ಚೇತನರ ಊಹೆಗಳೂ ತಲೆಕೆಳಗಾಗುವುವು. ಇನ್ನು ನಮಗೆ ಸ್ವಾತಂತ್ರ್ಯವೆಲ್ಲಿಯದು? ಪಾಪಕರ್ಮ ಪುಣ್ಯಕರ್ಮವೆರಡನ್ನೂ ನಿನ್ನ ಅಧೀನವೆಂದು ನಿನಗೇ ಅರ್ಪಿಸಿದ್ದೇನೆ. ನಮ್ಮನ್ನು ಸದಾ ಕಾಪಾಡು.

## ನಿನ್ನ ಸೂತ್ರದೊಳಾಡುವವು ಚೈತನ್ಯ ಸಚರಾಚರಗಳೆಲ್ಲವು

ಸ್ಥಾವರ ಜಂಗಮಗಳೆಂದು ಎರಡು ಬಗೆಯಾದ ಚೇತನ ಪ್ರಪಂಚವೆಲ್ಲವನ್ನೂ ಕಾಲಕಾಲಕ್ಕೆ ಸೃಷ್ಟಿ ಮಾಡುವುದು ಲಯ ಮಾಡುವುದೆಂದು ಮುಂತಾಗಿ ಎಲ್ಲ ಬಗೆಯಿಂದಲೂ ವಶದಲ್ಲಿ ಇರಿಸಿಕೊಂಡವನು ನೀನೇ. ಬ್ರಹ್ಮನೊಳಗಿದ್ದು ಅವನ ಮೂಲಕ ಸೃಷ್ಟಿ ಕಾರ್ಯವನ್ನು ನೀನೇ ನಡೆಸುವೆ. ರುದ್ರನೊಳಗಿದ್ದೂ ಅವನ ಮೂಲಕ ಲಯಕಾರ್ಯವನ್ನು ನೀನೇ ನಡೆಸುವೆ. ವಿಷ್ಣು ಎಂಬ ಬೇರೆ ರೂಪದಿಂದ ಪಾಲನ ಕಾರ್ಯವನ್ನೂ ನೀನೇ ನಡೆಸುವೆ. ಹೀಗೆ ಬ್ರಹ್ಮರುದ್ರಾದಿ ಸಕಲ ಚೇತನರೂ ನಿನ್ನ ಅಧೀನವಾಗಿಯೇ ತಮ್ಮ ತಮ್ಮ ಕೆಲಸ ಕಾರ್ಯಗಳನ್ನು ನಡೆಸುತ್ತಾರೆ ಹೊರತು ಅವರು ಯಾರೂ ಸ್ವತಂತ್ರರಲ್ಲ. ಎಲ್ಲರನ್ನೂ ಸೂತ್ರದ ಬೊಂಬೆಯಂತೆ ಆಡಿಸುವ ಸೂತ್ರಧಾರ ನೀನು. ಮಹಾಭಾರತ ಹೀಗೆ ಹೇಳುತ್ತದೆ.

**ಯಥಾ ದಾರುಮಯೀಂ ಯೋಷಾಂ ನರಃ ಸ್ಥಿರ ಸಮಾಹಿತಃ ।**

**ಇಂಗಯತ್ಯಂಗಮಂಗಾನಿ ತಥಾ ರಾಜನ್ನಿಮಾಃ ಪ್ರಜಾಃ ॥**

## ನಿನ್ನ ಸೂತ್ರವು ತಪ್ಪಿದರೆ ಮೊಗ್ಗುವವು ಊಹೆಗಳು

ನಿನ್ನ ಸೂತ್ರಕ್ಕೆ ಅನುಸಾರವಾಗಿಯೇ ನಾವು ನಡೆಸುವಾಗ ನಮ್ಮ ಊಹೆಗಳು ಕೆಲವೊಮ್ಮೆ ನಿಜವಾಗುವುವು. ಕೆಲವೊಮ್ಮೆ ಹುಸಿಯಾಗುವುವು. ಏಕೆಂದರೆ ನಿನ್ನ ಸೂತ್ರ ನಮ್ಮನ್ನು ಗೆಲುವಿನ ದಾರಿಯಲ್ಲಿ ನಡೆಸಿದರೆ ನಮಗೆ ಗೆಲುವು. ಆ ಸೂತ್ರ ತಪ್ಪಿದರೆ ಬರೀ ಸೋಲು. ನಮ್ಮ ಊಹೆಗಳು ಆಗ ತಲೆಕೆಳಗಾಗುವುವು.

## ಇನ್ನು ನಮಗೆ ಸ್ವತಂತ್ರವೆಲ್ಲಿಯದು

ನರನ ರಥವಾಜಿಯ ಸೂತ್ರವನೆ ಹಿಡಿದು ।

ಬೊಂಬೆಯಾಟವನಾಡಿಸಿದೆ । ಮಹಾಭಾರತದ।

ಬೊಂಬೆಯಾಟವನಾಡಿಸಿದೆ ॥

ಎಂದು ಕನಕದಾಸರೆ ಒಂದು ಕೀರ್ತನೆಯಲ್ಲಿ ಹೇಳುವಂತೆ ಶ್ರೀಕೃಷ್ಣ ಮಹಾಭಾರತ ಯುದ್ಧವನ್ನು ಒಂದು ಬೊಂಬೆಯಾಟದಂತೆ ನಡೆಸಿ ತೋರಿಸಿದ. ದುರ್ಯೋಧನನೊಳಗೆ ನಿಂತು ಪಾಂಡವರೊಡನೆ ಜಗಳವಾಡಿದವನೂ ಅವನೇ. ಭೀಷ್ಮಾದಿ ಗುರುಜನರಲ್ಲಿ ನಿಂತು ಅಸಹಾಯನಂತೆ ನೋಡಿದವನೂ ಅವನೇ. ಧರ್ಮರಾಜನಲ್ಲಿ ನಿಂತು ದ್ರುಪದರಾಜ ಮುಂತಾದವರ ಸಹಾಯ ಬೇಡಿದವನೂ ಅವನೇ. ದ್ರುಪದಾದಿಗಳಲ್ಲಿ ನಿಂತು ಸಹಾಯ ನೀಡಿದವನೂ ಅವನೇ. ಬಳಿಕ ನಡೆಯುತ್ತದೆ ಕುರುಕ್ಷೇತ್ರ ಯುದ್ಧ. ಆಗ ಮೇಲೆ ಅಗಸದಲ್ಲಿ ನಿಂತು ನೋಡುವ ದೇವಋಷಿ ಮುಂತಾದವರಲ್ಲಿ ನಿಂತು ಬೆರಗಾಗಿ ಭಲೆ ಭಲೆ ಎನ್ನುವವನೂ ಅವನೇ. ಯುದ್ಧ ಹೀಗೆ ಶ್ರೀಕೃಷ್ಣನಾಡಿದ ಬೊಂಬೆಯಾಟ.

'ಕೃಷ್ಣ'ನಾಮವೆ ಈ ತಥ್ಯಾಂಶವನ್ನು ಸ್ಪಷ್ಟವಾಗಿ ಸಾರುತ್ತದೆ.

**ಯತಃ ಕರ್ಷಸಿ ದೇವೇಶ ನಿಯಮ್ಯ ಸಕಲಂ ಜಗತ್ ।**

**ಅತೋ ವದಂತಿ ಮುನಯಃ ಕೃಷ್ಣಂ ತ್ವಾಂ ಬ್ರಹ್ಮವಾದಿನಃ ॥**

'ನೀನು ಸಕಲ ಪ್ರಪಂಚವನ್ನು ವಶದಲ್ಲಿರಿಸಿಕೊಂಡು ಬೇಕಾದಂತೆ ಬೇಕಾದ ಕಡೆಗೆ ಸೆಳೆದುಕೊಳ್ಳುವುದರಿಂದ ಬಲ್ಲವರು ನಿನ್ನನ್ನು 'ಕೃಷ್ಣ' ಎಂದು ಕರೆಯುತ್ತಾರೆ' ಎಂದು ಕೂರ್ಮಪುರಾಣದಲ್ಲಿ ಉಕ್ತವಾಗಿದೆ. ದನಕರುಗಳನ್ನು ಕಟ್ಟಿ ಸೆಳೆಯ ಬೇಕಾದರೆ ಹಗ್ಗಬೇಕು.

ಬೊಂಬೆಯನ್ನು ಆಡಿಸಬೇಕಾದರೆ ಸೂತ್ರಬೇಕು. ಪ್ರಪಂಚವನ್ನು ತನ್ನೆಡೆಗೆ ಸೆಳೆಯಬೇಕಾದರೆ ಬೇಕಾದಂತೆ ಆಡಿಸಬೇಕಾದರೆ ಹಗ್ಗ, ಸೂತ್ರ ನಿನ್ನ ಆಕರ್ಷಣ ಶಕ್ತಿಯೆ. ನೀನು ಶಕ್ತಿ ಸ್ವರೂಪ. ಸ್ತ್ರೀರೂಪಿಣಿ ಆದಿಶಕ್ತಿಯೂ ನೀನೇ. ಪುರುಷರೂಪಿ ಸರ್ವಶಕ್ತನೂ ನೀನೇ. ನೀನೇ ಸ್ವತಂತ್ರ. ನಾವು ಅಸ್ವತಂತ್ರರು. ಉಸಿರಾಡುವ ಕಾರ್ಯದಲ್ಲಿಯೂ ನಾವು ಅಸ್ವತಂತ್ರರು. ಆ ಕಾರ್ಯ ಬೇಡವೆನಿಸಿದರೂ, ಬಿಟ್ಟರೆ ಪ್ರಾಣಸಂಕಟ! ಉಸಿರಾಡುವುದರಿಂದ ಜೀವ 'ಜೀವ'ನೆನಿಸಿದ್ದಾನೆ, ಆದರೆ ಉಸಿರಾಟ ಅವನ ಅಧೀನವಲ್ಲ. ನೀನು ಕರುಣೆಯಿಂದ ಜೀವರೊಳಗೆ ನಿಂತು ಜೀವರಿಗಾಗಿ ಉಸಿರಾಡದಿದ್ದರೆ ಜೀವರ ಉಸಿರು ನಿಂತುಹೋಗುತ್ತದೆ. ಅದರಿಂದ 'ಜೀವ' ಎಂದು ನಿನಗೆ ಬಿರುದು.

**'ಜೀವೋ ವಿನಯಿತಾ ಸಾಕ್ಷೀ'**

ಎಂದು ವಿಷ್ಣುಸಹಸ್ರನಾಮಗಳಲ್ಲಿ ಜೀವ ಎಂಬುದೂ ಒಂದು ದಿವ್ಯ ನಾಮ. ಹೀಗೆ ಉಸಿರಾಟದಲ್ಲಿಯೇ ನಮಗೆ ಸ್ವಾತಂತ್ರ್ಯವಿಲ್ಲ. ಇನ್ನು ನಮಗೆ ಸ್ವಾತಂತ್ರ್ಯವೆಲ್ಲಿಯದು?

## ಅನ್ಯಕರ್ಮ ಸುಕರ್ಮ ಎಲ್ಲವು ನಿನ್ನದೆಂದೊಪ್ಪಿಸಿದೆ

ನಾನು ಮಾಡಿದ ಪಾಪಕರ್ಮವಾಗಲಿ ಪುಣ್ಯಕರ್ಮವಾಗಲಿ ನೀ ಮಾಡಿಸಿದ್ದು, ನಿನ್ನದೇ ಎಂದು ನಿನಗೇ ಅರ್ಪಿಸಿದ್ದೇನೆ. ಕೃಷ್ಣಾರ್ಪಣ ಎಂದಿದ್ದೇನೆ. ಹಾಗನ್ನದೆ ಕರ್ಮಕ್ಕೆ ನಾನೇ ಸ್ವತಂತ್ರ, ನಾನೇ ಮಾಡಿದ್ದೇನೆ ಎಂದರೆ, ಪುಣ್ಯಕರ್ಮವೂ ಪಾಪಕರ್ಮವೆನಿಸಿ ದುಷ್ಫಲ ನೀಡಬಹುದು. ಅರ್ಪಿಸಿದರೆ, ಪಾಪಕರ್ಮವೂ, ಪುಣ್ಯಕರ್ಮವೆನಿಸಿ ಸತ್ಫಲವನ್ನೇ ನೀಡಬಹುದು. ಅಥವಾ ಆ ಪಾಪಕರ್ಮದ ದುಷ್ಪರಿಣಾಮ ಕಡಿಮೆಯಾದೀತು.

ಹಾಗೆ ಮಾಡಿ ನಮ್ಮನ್ನು ಸದಾ ಕಾಪಾಡು. ★

---

(......4ನೇ ಪುಟದಿಂದ)

ಗೋಪಾಲ ಊರನ್ನು ಅಪೇಕ್ಷಿಸುವನೋ, ಇಂಥವರನ್ನು ರಾಜ್ಯದಿಂದ ಓಡಿಸು ಎಂದನು. ಅಭಿಪ್ರಾಯ ಏನೆಂದರೆ ತನ್ನ ವೃತ್ತಿಯನ್ನು ಬಿಟ್ಟು ಮತ್ತೊಂದು ವೃತ್ತಿಯನ್ನು ಯಾರು ನಿರೀಕ್ಷೆ ಮಾಡುತ್ತಾರೋ ಅಂತಹ ವ್ಯಕ್ತಿಯು ಆ ಊರಿನಲ್ಲಿ ಇರಕೂಡದು.

ಧೃತರಾಷ್ಟ್ರ! ರಾಜನಾಗಿ ನೀನಿರುವಾಗ ಪ್ರಜೆಗಳನ್ನು ರಂಜಿಸಿ ಈ ಶರೀರವೆಂಬ ರಾಜ್ಯದಲ್ಲಿ ನಿನ್ನ ಕರ್ತವ್ಯ ಮಾಡಿಕೊಂಡು ಇರುವುದು ನಿನಗೆ ವಿಹಿತ. ಅದು ಬಿಟ್ಟು ಪ್ರಜೆಗಳನ್ನು ದಂಗೆ ಏಳುವಂತೆ ಮಾಡಿದರೆ ನೀನು ರಾಜನಾಗಿ ಇರಲು ಅಯೋಗ್ಯ ಎಂದು ವಿದುರನು ತಿಳಿಹೇಳಿದನು. **(ಸಶೇಷ)**

ಅವಲೋಕನ

# ಜೀವರ ಸ್ವಭಾವಾಭಿವ್ಯಕ್ತಿಗಾಗಿಯೇ ವಿಹಾರ

–ಸಗ್ರಿ ರಾಘವೇಂದ್ರ ಉಪಾಧ್ಯಾಯ

¨ಭಗವಂತ ತನಗೆ ಯಾವ ಪ್ರಯೋಜನವನ್ನು ಬಯಸಿ ಜಗತ್ಸೃಷ್ಟಿ ನಡೆಸುವನು?

ಮಾಂಡೋಕೋಪನಿಷತ್ತು (1–6–15) ಈ ಬಗ್ಗೆ ಹೀಗೆ ಪೂರ್ವಪಕ್ಷ ಮಾಡಿದೆ **'ಭೋಗಾರ್ಥಂ ಸೃಷ್ಟಿರಿತ್ಯನ್ಯೇ ಕ್ರೀಡಾರ್ಥಮಿತಿ ಚಾಪರೇ'**– ಕೆಲವರು ತನಗೆ ಭೋಗಿಸುವುದಕ್ಕಾಗಿ ಈ ಜಗತ್ತನ್ನು ಸೃಷ್ಟಿಸಿರುವನೆಂದು ಭಾವಿಸಿದರೆ ಮತ್ತೆ ಕೆಲವರು ಭಗವಂತ ತನ್ನ ಕ್ರೀಡೆಗಾಗಿ ಜಗತ್ತನ್ನು ಸೃಷ್ಟಿಸಿರುವನೆಂದು ಭಾವಿಸುವರು.

ಹೀಗೆ ಪೂರ್ವಪಕ್ಷ ಮಾಡಿದ ಉಪನಿಷತ್ತು ಆ ಬಗ್ಗೆ ಸಿದ್ಧಾಂತವನ್ನು ಹೀಗೆ ಉದ್ಘೋಷಿಸಿದೆ.

**'ದೇವಸ್ಯೈಷಃ ಸ್ವಭಾವೋSಯಮಾಪ್ತಕಾಮಸ್ಯ ಕಾ ಸ್ಪೃಹಾ'**

ಭಗವಂತ ಆಪ್ತಕಾಮ, ಅರ್ಥಾತ್ ತನಗೆ ಏನೇನು ಬೇಕೋ ಅವೆಲ್ಲವನ್ನು ಈಗಾಗಲೇ ಹೊಂದಿದ್ದು ಪರಿಪೂರ್ಣ ಎನಿಸಿರುವನು. ಅಂತಹವನಿಗೆ ಜಗತ್ಸೃಷ್ಟಿಯಿಂದ ಏನೂ ಆಗಬೇಕಾದದ್ದಿಲ್ಲ. ಆದರೂ ತನ್ನ ಸ್ವಭಾವರೂಪದಿಂದ ಜಗತ್ಸೃಷ್ಟಿಯನ್ನು ನಡೆಸುವನು. ಉಪನಿಷತ್ತಿನ ಅಭಿಪ್ರಾಯವನ್ನು ಹರಿವಂಶ (ಮಾಂ. ಉ.ಭಾ) ಇನ್ನಷ್ಟು ಸ್ಪಷ್ಟಪಡಿಸಿದೆ.

**"ತಸ್ಯಾಪಿ ವಿಷ್ಣೋಃ ಸೃಷ್ಟಿಂ ತು ಕೇಚಿದಾಹುರನೈಪುಣಾಃ ।**
**ಅತೃಪ್ತಸ್ಯೈವ ಭೋಗಾರ್ಥಂ ಕ್ರೀಡಾರ್ಥಂ ತು ವಿಪಶ್ಚಿತಃ ।**
**ಸಾಚ ಕ್ರೀಡಾ ಸ್ವಭಾವೋSಸ್ಯ ಕುತೋSತೃಪ್ತ್ಯಾ ಸ್ಪೃಹಾ ಭವೇತ್"**

ಅತೃಪ್ತನಾದ ಭಗವಂತ ತನ್ನ ತೃಪ್ತಿಗಾಗಿ ಭೋಗದ ಉದ್ದೇಶದಿಂದ ಅಥವಾ ಕ್ರೀಡೆಯ ಉದ್ದೇಶದಿಂದ ಜಗತ್ತನ್ನು ಸೃಷ್ಟಿಸುವನೆಂದು ಕೆಲವು ಅವಿವೇಕಿಗಳು ಹೇಳುವರು. ಆದರೆ ಜ್ಞಾನಿಗಳು ಹೀಗೆ ಅಭಿಪ್ರಾಯಪಡುವರು. ಭಗವಂತನ ಮೂಲಕ ನಡೆಯುವ ಜಗತ್ಸೃಷ್ಟಿ ಅವನ ಸ್ವಭಾವಾತ್ಮಕವಾದ ಕ್ರೀಡೆ ಹೊರತು ಅತೃಪ್ತಿಯಿಂದಾಗಿ ಹುಟ್ಟಿಕೊಂಡ ಇಚ್ಛೆಗೊಳಗಾಗಿ ಅವನು ಜಗತ್ತನ್ನು ಸೃಷ್ಟಿಸುವುದಲ್ಲ.

**'ವಿಹೃತಿಂ ಮಮೇಚ್ಛನ್'** ಹೇಗೆ?

ಹೀಗೆ ಮಾಂಡೋಕೋಪನಿಷತ್ತೂ, ಅದರ ಅಭಿಪ್ರಾಯವನ್ನು ಸ್ಪಷ್ಟಪಡಿಸಲು ಹೊರಟ ಹರಿವಂಶವೂ ಜಗತ್ಸೃಷ್ಟಿ ಭಗವಂತನಿಂದ ಸ್ವಾಭಾವಿಕವಾಗಿ ನಡೆಯುವಂತಹದ್ದೇ ಯಾವುದೇ ಇಚ್ಛೆಗೊಳಗಾಗಿ ನಡೆಯುವಂತಹದ್ದಲ್ಲ. ಯಾವುದಾದರೊಂದು ವಿಷಯದಲ್ಲಿ ತೃಪ್ತಿ ಹೊಂದದವನಿಗಷ್ಟೇ ಆ ವಿಷಯದಲ್ಲಿ ಇಚ್ಛೆ ಮೂಡೀತು; ಭಗವಂತನಾದರು ಪ್ರತಿಯೊಂದು ವಿಷಯದಲ್ಲೂ ತೃಪ್ತನೆಂದ ಮೇಲೆ ಯಾವುದೇ ವಿಷಯದ ಇಚ್ಛೆಗೊಳಗಾಗಿ ಸೃಷ್ಟಿ ನಡೆಸುವನೆಂಬುದು ಹೇಗೆ ತಾನೇ ಕೂಡೀತು? ಎಂದು ಸಿದ್ಧಾಂತಿಸಿವೆ.

ಆದರೆ ಶ್ರೀ ಮಧ್ವಗುರುಗಳು ತಮ್ಮ ಮಹಾಭಾರತತಾತ್ಪರ್ಯನಿರ್ಣಯದ ಪ್ರಾರಂಭದಲ್ಲಿ ಭಗವಂತನಿಂದ ನಡೆಯುವ ಸೃಷ್ಟಿಯನ್ನು ಪ್ರಸ್ತಾಪಿಸಿ **'ಸ್ರಕ್ಷ್ಯೇಹಿ ಚೇತನಗಣಾನ್ ಸುಖದುಃಖಮಧ್ಯ ಸಂಪ್ರಾಪ್ತಯೇ ತನುಭೃತಾಂ ವಿಹೃತಿಂ ಮಮೇಚ್ಛನ್'** (1–5) ಉತ್ತಮ ಜೀವರಿಗೆ ಸುಖ, ಅಧಮ ಜೀವರಿಗೆ ದುಃಖ, ಹಾಗೂ ಮಧ್ಯಮಜೀವರಿಗೆ ಸುಖದುಃಖಗಳ ಮಿಶ್ರಣ ಇವುಗಳ ಪ್ರಾಪ್ತಿಯಾಗುವಂತೆ ನನ್ನ ವಿಹಾರವನ್ನು ಇಚ್ಛಿಸುತ್ತ ಜೀವರನ್ನು ಸೃಷ್ಟಿಸುವೆನೆಂದು, ಸೃಷ್ಟಿಗೆ ತೊಡಗಿದ ಭಗವಂತನ ಸಂಕಲ್ಪದಲ್ಲಿ **'ಮಮ ವಿಹೃತಿಂ ಇಚ್ಛನ್'** ಎಂಬುದಾಗಿ ನನ್ನ ವಿಹಾರದ ಬಯಕೆಗೊಳಗಾಗಿ ಸೃಷ್ಟಿಸುವೆನೆಂದು ಉಲ್ಲೇಖಿಸಿರುವುದು ಹೇಗೆ ಕೂಡುವುದು? **'ಆಪ್ತಕಾಮಸ್ಯ ಕಾಸ್ಪೃಹಾ**?– ಎಂಬ ಉಪನಿಷದ್ವಚನಕ್ಕೂ, **'ಕುತೋಽತೃಪ್ತ್ಯಾ ಸ್ಪೃಹಾ ಭವೇತ್'**– ಎಂಬ ಹರಿವಂಶದ ವಚನಕ್ಕೂ ಈ ಬಗೆಯ ಸಂಕಲ್ಪ ವಿರುದ್ಧ ಎನಿಸದೋ? ಅಲ್ಲದೆ, ತನ್ನ ವಿಹಾರಕ್ಕಾಗಿ ಜಗತ್ತನ್ನು ಸೃಷ್ಟಿಸಿದನೆಂದರೆ ಜಗತ್ಸೃಷ್ಟಿಯ ಮುಂಚೆ ಆ ಬಗೆಯ ವಿಹಾರವನ್ನು ಭಗವಂತನು ಹೊಂದಿಲ್ಲದ ಪ್ರಯುಕ್ತ ಅವನು ಅಪೂರ್ಣ ಎಂದಾಗಲಾರನೇ!

## ಜಾನಾತಿ–ಇಚ್ಛತಿ–ಯತತೇ

ಯಾರಿಂದಲೇ ಯಾವುದೇ ಪ್ರವೃತ್ತಿ ನಡೆಯಬೇಕೆಂದರೆ ಅವರ ಬಗ್ಗೆ ತಿಳುವಳಿಕೆ ಹಾಗೂ ಯತ್ನ– ಇವು ಹೇಗೋ ಹಾಗೆಯೇ ಇಚ್ಛೆಯೂ ಬೇಕೇಬೇಕು. ಇದನ್ನೇ ನೈಯಾಯಿಕರು **'ಜಾನಾತಿ ಇಚ್ಛತಿ ಯತತೇ'** ಎಂದು ತೋರಿಸಿಕೊಡುವರು. ಆದ್ದರಿಂದ ಭಗವಂತನು ಯಾವುದನ್ನೂ ಬಯಸದೆ ಜಗತ್ಸೃಷ್ಟಿಯನ್ನು ನಡೆಸಿದನೆಂಬುದು ಕೂಡುವುದಿಲ್ಲ. ಮಾಂಡೂಕೋಪನಿಷತ್ತಿನಲ್ಲಿ **'....ಆಪ್ತಕಾಮಸ್ಯ ಕಾ ಸ್ಪೃಹಾ'**– ಎಂದು ತನ್ನ ಇಷ್ಟಗಳನ್ನೆಲ್ಲ ಪೂರೈಸಿದವನಿಗೆ ಅಂತಹ ಇಷ್ಟಕ್ಕೆ ಸಂಬಂಧಿಸುವ, ಅರ್ಥಾತ್ ಸ್ವಾರ್ಥದ ಹಿನ್ನೆಲೆಯ ಇಚ್ಛೆ ಇಲ್ಲ ಎನ್ನಲಾಗಿದೆಯೇ ಹೊರತು ಇಚ್ಛೆಯೇ ಇಲ್ಲ ಎಂಬುದಾಗಿ ಅಲ್ಲ. ಇದನ್ನೂ ಸ್ಪಷ್ಟಪಡಿಸುವುದಕ್ಕಾಗಿಯೇ ಹರಿವಂಶ **'ಕುತೋಽತೃಪ್ತ್ಯಾಸ್ಪೃಹಾ ಭವೇತ್'**– ಎಂದು ಅತೃಪ್ತಿ ಹಿನ್ನೆಲೆಯ ಇಚ್ಛೆಯನ್ನಷ್ಟೇ ನಿರಾಕರಿಸಿದೆ. ಬ್ರಹ್ಮಸೂತ್ರದ ನ ಪ್ರಯೋಜನವತ್ತ್ವಾಧಿಕರಣದಲ್ಲೂ

(2–1–10) ಭಗವಂತನ ಅಪೂರ್ಣತೆಗೆ ಪ್ರಯೋಜಕವೆನಿಸಬಲ್ಲ ಪ್ರಯೋಜನದ ತಿಳುವಳಿಕೆಯನ್ನೂ, ಬಯಕೆಯನ್ನೂ ನಿರಾಕರಿಸಿದ್ದೇ ಹೊರತು ಸಾಮಾನ್ಯವಾಗಿ ಯಾವುದೇ ಪ್ರಯೋಜನದ ಜ್ಞಾನೇಚ್ಛೆಗಳಿಲ್ಲದೆಯೇ ಜಗತ್ಸೃಷ್ಟಿಯನ್ನು ನಡೆಸಿರುವನೆಂದು ಸಿದ್ಧಾಂತಿಸಿರುವುದಲ್ಲ. ಅವನ ಮೂಲಕ ನಡೆಯುವ ಜಗತ್ಸೃಷ್ಟಿ ಅವನಲ್ಲಿಯ ಭಕ್ತವಾತ್ಸಲ್ಯಕ್ಕೆ ದ್ಯೋತಕವಾಗಬೇಕೆಂದರೆ ಅವನು ಭಕ್ತರ ಉದ್ಧಾರದ ಬಯಕೆಯಿಂದ ಜಗತ್ಸೃಷ್ಟಿ ನಡೆಸಿರುವನೆಂದು ಒಪ್ಪಿಕೊಳ್ಳಲೇಬೇಕು. ಇದನ್ನೇ ಶ್ರೀಮಧ್ವಗುರುಗಳು ಸ್ಪಷ್ಟಪಡಿಸಿರುವರು. **'ಸ್ರಕ್ಷ್ಯೇಹಿ ಚೇತನಗಣಾನ್ ಸುಖದುಃಖ ಮಧ್ಯಸಂಪ್ರಾಪ್ತಯೇ ತನುಭೃತಾಂ'**

## ತನುಭೃತ್ ಸ್ವಭಾವಸಂಭೂತಯೇ ಏವ

ಹೀಗೆ ಚೇತನರಿಗೆ ಸುಖಾದಿಗಳನ್ನು ನೀಡುವುದಕ್ಕಾಗಿಯೇ ಜಗತ್ಸೃಷ್ಟಿಯನ್ನು ತನ್ನ ವಿಹಾರವನ್ನಾಗಿ ಕ್ರೀಡೆಯನ್ನಾಗಿ ನಡೆಸಲು ಇಚ್ಛಿಸುವವನು ಭಗವಂತನೆಂಬುದನ್ನು'.....**ವಿಹೃತಿಂ ಮಮೇಚ್ಛನ್'** ಎಂಬ ಮಾತು ತಿಳಿಸಿಕೊಡಬಲ್ಲದು. ಅಂದರೆ ಜಗತ್ಸೃಷ್ಟಿಯನ್ನು ನನ್ನ ವಿಹಾರವನ್ನಾಗಿ, ನಡೆಸುವ ಉದ್ದೇಶ ನನಗೆ ಆನಂದ ದೊರಕಬೇಕು ಎಂಬ ಸ್ವಾರ್ಥಪೂರ್ವಕವಾದುದಲ್ಲ. ಮತ್ತೆ ಚೇತನರಿಗೆ ಸುಖಾದಿಗಳನ್ನು ತಲುಪಿಸುವುದೇ.

ಈ ಅರ್ಥದ ಬದಲಾಗಿ ಶರೀರಿಗಳಿಗೆ ಸುಖಾದಿಗಳ ಪ್ರಾಪ್ತಿ, ತನಗೆ (ಭಗವಂತನಿಗೆ) ವಿಹಾರ ಈ ಎರಡನ್ನೂ ಇಚ್ಛಿಸಿರುವುದೆಂದಾದರೆ **'ವಿಹೃತಿಂ ಚ'** ಎಂದು ಸಮುಚ್ಚಯಾರ್ಥದ ಚಕಾರದ ಬಳಕೆಯೂ ಆಗಬೇಕಿತ್ತು. ಹಾಗೆ "ಚ" ಕಾರವಿಲ್ಲದೆ **'....ಪ್ರಾಪ್ತಯೇ ವಿಹೃತಿಂ'** ಎಂದಷ್ಟೇ ಪ್ರಯೋಗಿಸಿರುವುದರಿಂದ ಜೀವರ ಸುಖಾದಿಗಳ ಪ್ರಾಪ್ತಿಗಾಗಿಯೇ ಇರುವ ವಿಹಾರ ಹೊರತು ವೈಯಕ್ತಿಕ ಸುಖಾತಿಶಯದ ಪ್ರಾಪ್ತಿಗಾಗಿ ಅಲ್ಲ ಎಂದು ಸೂಚಿಸಲ್ಪಟ್ಟಂತಾಗುವುದು.

ಹೀಗೆ ಪೂರ್ವಾರ್ಧದಲ್ಲಿ ಸೂಚಿಸಲ್ಪಟ್ಟದ್ದನ್ನೇ ಉತ್ತರಾರ್ಧದಲ್ಲಿ ಸ್ಪಷ್ಟಪಡಿಸಲಾಗುವುದು. **'ಸೋಯಂ ವಿಹಾರ ಇಹ ಮೇ ತನುಭೃತ್ಸ್ವಭಾವಸಂಭೂತಯೇ ಏವ ಭವತಿ'**– ಮುಂದೆ ಭೂತಿಕೃದೇವ ಎಂಬಲ್ಲಿಯ "ಏವ"ಕಾರವನ್ನು ಸಂಭೂತಯೇ ಎಂಬ ಶಬ್ದದ ಮುಂದೆ ಇಟ್ಟುಕೊಂಡು ಶರೀರಿಗಳ ಸ್ವಭಾವದ ಅಭಿವ್ಯಕ್ತಿಗಾಗಿಯೇ ಈ ಜಗತ್ಸೃಷ್ಟಿರೂಪವಾದ ವಿಹಾರ ಹೊರತು ವೈಯಕ್ತಿಕ ಸುಖದ ಪ್ರಾಪ್ತಿಗಾಗಿ ಅಲ್ಲ ಎಂದು ಅರ್ಥೈಸಿಕೊಳ್ಳಬೇಕು.

## ಜೀವರ ಸ್ವಭಾವಾಭಿವ್ಯಕ್ತಿಗಾಗಿ ವಿಹಾರರೂಪದ ಸೃಷ್ಟಿ

ಹಾಗಾದರೆ ಭಗವಂತನ ಮೂಲಕ ನಡೆಯುವ ಜಗತ್ಸೃಷ್ಟಿಯ ಉದ್ದೇಶದ ಬಗ್ಗೆ

ಇಷ್ಟು ಅಂಶಗಳನ್ನು ಸ್ಪಷ್ಟಪಡಿಸಿದಂತಾಗುವುದು.

★ ಭಗವಂತನ ಮೂಲಕ ನಡೆಯುವ ಜಗತ್ಸೃಷ್ಟಿಗೆ ಅವನ ಯಾವುದೇ ಸ್ವಾರ್ಥದ ಬಯಕೆ ಇಲ್ಲದಿದ್ದರೂ ಸುಪ್ತಸ್ವಭಾವದ ಜೀವರು ತಮ್ಮ ತಮ್ಮ ಸ್ವಭಾವದ ಅಭಿವ್ಯಕ್ತಿಗೊಳಗಾಗಬೇಕು. ಅದರಲ್ಲೂ ವಿಶೇಷವಾಗಿ ಸಾತ್ವಿಕ ಸ್ವಭಾವದ ಜೀವರು ಮುಕ್ತಿಹೊಂದುವಂತಾಗಬೇಕು ಎಂಬ ಪರಾರ್ಥದ ಬಯಕೆ ಇದ್ದೇ ಇದೆ.

★ ಶಾಸ್ತ್ರದಲ್ಲಿ ಕೆಲವೆಡೆ ಭಗವಂತ ತನ್ನ ವಿಹಾರ ರೂಪದಲ್ಲಿ ಜಗತ್ಸೃಷ್ಟಿ ನಡೆಸುವನೆಂದು ನಿರೂಪಿತವಾಗಿರುವುದರ ಆಂತರ್ಯ ಜಗತ್ಸೃಷ್ಟಿಯನ್ನು ಕ್ರೀಡೆಯಂತೆ ಅನಾಯಾಸವಾಗಿ ನಡೆಸುವನೆಂಬುದೇ ಹೊರತು ವೈಯಕ್ತಿಕ ಸುಖಗಳಿಸುವ ವಿಹಾರದಂತೆ ನಡೆಸುವನೆಂಬುದು ಅಲ್ಲ.

★ ಆದ್ದರಿಂದ ಮಹಾಭಾರತತಾತ್ಪರ್ಯನಿರ್ಣಯದ **'ವಿಹೃತಿಂ ಮಮೇಚ್ಛನ್'** ಎಂಬ ಮಾತು ವಿಹಾರರೂಪದಲ್ಲಿ ಭಗವಂತನ ಮೂಲಕ ನಡೆಸಲಾಗುವ ಜಗತ್ಸೃಷ್ಟಿಯ ಉದ್ದೇಶ ಶರೀರಿಗಳ ಸ್ವಭಾವಾಭಿವ್ಯಕ್ತಿಯೇ ಹೊರತು ಭಗವಂತನ ವೈಯಕ್ತಿಕ ಸುಖದ ಪ್ರಾಪ್ತಿ ಅಲ್ಲ. ಎಂಬ ಅಂಶವನ್ನು ಒತ್ತಿ ಹೇಳುವುದಕ್ಕಾಗಿ ಹೊರಟದ್ದೇ ಹೊರತು ಭಗವಂತನಿಗೆ ಜಗತ್ಸೃಷ್ಟಿಯನ್ನು ತನ್ನ ವಿಹಾರವಾಗಿ ನಡೆಸುವ ಇಚ್ಛೆ ಇದೆ ಎಂಬ ಅಂಶವನ್ನು ತಿಳಿಸಿಕೊಡುವುದಕ್ಕಾಗಿ ಅಲ್ಲ.

★ ಆದ್ದರಿಂದ ಆಚಾರ್ಯರು 'ಸ್ರಕ್ಷ್ಯೇ ಹಿ....' ಎಂಬ ಪದ್ಯದ ಮೂಲಕ ಜಗತ್ಸೃಷ್ಟಿಯ ಉದ್ದೇಶದ ಬಗ್ಗೆ ಮಾಂಡೋಕೋಪನಿಷತ್ತಿನ ಹಾಗೂ ಹರಿವಂಶದ ವಿಚಾರವನ್ನು ಸ್ಪಷ್ಟಪಡಿಸಿರುವರೆಂಬುದನ್ನು ಗಮನಿಸಬೇಕು. ★


## ಹಿರಿಯರ ವಿಶ್ರಾಂತಿಧಾಮ

**Pejawara Sridhama**
**(A Unit of Sri Rama Vittala Trust)**
**Sy. N0. 106/1 Nachanahalli Kuppalur**
**3rd Stage, J.P. Nagar-'E' Block,**
**MYSORE-570 008**

ಮೈಸೂರಿನ ಜೆ.ಪಿ. ನಗರದಲ್ಲಿ ಶ್ರೀಪೇಜಾವರ ಶ್ರೀಗಳ ಮಾರ್ಗದರ್ಶನದಲ್ಲಿ ಹಿರಿಯ ನಾಗರೀಕರ ವಿಶ್ರಾಂತಿಧಾಮವನ್ನು ಪ್ರಾರಂಭಿಸಲಾಗಿದೆ. ಇಲ್ಲಿ ಸೇರಲಿಚ್ಛಿಸುವ ಹಿರಿಯ ನಾಗರೀಕರು ಹೆಚ್ಚಿನ ವಿವರಗಳನ್ನು ಪಡೆಯಲು ಸಂಪರ್ಕಿಸಿ. **ಹೆಸರು. ಹೆಚ್. ಎಂ. ಗುರುನಾಥ್, ಮೊಬೈಲ್ ನಂ. 9741208808**

# ತುಪ್ಪದಿಂದ ಬೆಂಕಿ ಆರಿಸಲಾಗದು

–ವಿ॥ ರಾಮವಿಟ್ಠಲಾಚಾರ್ಯ ಬೆಂಗಳೂರು

ಯಯಾತಿ ದೇವಯಾನಿಯನ್ನು ವಿವಾಹವಾಗಿ ಶರ್ಮಿಷ್ಠೆ ಸಹಿತ ದಾಸಿಯರೊಡಗೂಡಿ ತನ್ನೂರಿಗೆ ಬಂದನು. ಅಂತಃಪುರದಲ್ಲಿ ದೇವಯಾನಿಗೆ ವಸತಿ ವ್ಯವಸ್ಥೆ ಕಲ್ಪಿಸಿದನು. ದೇವಯಾನಿಯ ಅನುಮತಿ ಪಡೆದು ಶರ್ಮಿಷ್ಠೆಗೆ ಅಶೋಕವನದ ಸಮೀಪದಲ್ಲಿ ಮನೆಯನ್ನು ಕಟ್ಟಿಸಿ ವಾಸದ ವ್ಯವಸ್ಥೆ ಮಾಡಿದನು. ವೃಷಪರ್ವರಾಜನ ಮಗಳಾದ ಶರ್ಮಿಷ್ಠೆಗೆ ಅಶನವಸನಗಳಲ್ಲಿ ವ್ಯತ್ಯಾಸ ಮಾಡದೆ ಚೆನ್ನಾಗಿಯೇ ನೋಡಿಕೊಂಡ. ಒಮ್ಮೆ ರಾಜನೊಂದಿಗೆ ಬಂದ ದೇವಯಾನಿಯು ಸ್ವಲ್ಪಕಾಲ  ಶರ್ಮಿಷ್ಠೆಯೊಂದಿಗೆ ಅಶೋಕವನದಲ್ಲಿ ಆಟ ಆಡಿ ಉಲ್ಲಸಿತಳಾಗಿ ರಾಜನೊಂದಿಗೆ ಹಿಂತಿರುಗಿದಳು.

ಬಹುವರ್ಷಗಳ ಬಳಿಕ ಋತುಕಾಲ ಬಂದಾಗ ಯಯಾತಿಯಿಂದ ದೇವಯಾನಿ ಗರ್ಭಧಾರಣೆ ಮಾಡಿದಳು. ಇನ್ನಷ್ಟು ಕಾಲ ಕಳೆದ ಬಳಿಕ ಶರ್ಮಿಷ್ಠೆ ಯೌವನಕ್ಕೆ ಕಾಲಿಟ್ಟು ಋತುಸ್ನಾತಳಾದಳು. ಮನಸ್ಸು ಜೋಡಿಜೀವದ ಹೃದಯಂಗಮ ಸಂಗಮವನ್ನು ಬಯಸಿತು. ಯುವತಿ ದೇವಯಾನಿ ಋತುಫಲವನ್ನು ಪಡೆದಿದ್ದಾಳೆ. ನನ್ನ ಋತುಕಾಲ ವ್ಯರ್ಥವಾಗುತ್ತಿದೆಯಲ್ಲ ಎಂದು ವ್ಯಥೆಗೊಂಡಳು. ಯಯಾತಿಯನ್ನು ಕಂಡಾಗಲಿಂದ ನನ್ನ ಮನಸ್ಸು ಅವನನ್ನು ಪತಿಯನ್ನಾಗಿ ವರಿಸಿದೆ. ಆ ಧರ್ಮಾತ್ಮ ಯಯಾತಿ ಏಕಾಂತದಲ್ಲಿ ದೊರೆತರೆ ನನ್ನ ಮನದಳಲನ್ನು ತೋಡಿಕೊಳ್ಳಬಹುದಲ್ಲವೆ? ಎಂದು ಕಾತರದಿಂದ ಕಾಯುತ್ತಿದ್ದಳು ಅಶೋಕ ಕಾನನದಲ್ಲಿ.

ಅಂದೊಮ್ಮೆ ಯಯಾತಿ ಆಕಸ್ಮಿಕವಾಗಿ ಏಕಾಕಿಯಾಗಿ ಅಶೋಕವನದತ್ತ ಹೆಜ್ಜೆ ಹಾಕಿದ. ಯಯಾತಿ ಒಬ್ಬನೇ ಬರುತ್ತಿರುವುದನ್ನು ಗಮನಿಸಿದ ಶರ್ಮಿಷ್ಠೆ ಯಯಾತಿಯ ಬಳಿ ಸುಳಿದು ಮನದ ಬಯಕೆಯನ್ನು ಬಿತ್ತರಿಸಿದಳು. ಬಹುಕಾಲದಿಂದ ನನ್ನನ್ನು ತಿಳಿದಿರುವ ರಾಜನೇ? ನನ್ನ ಮನದಿಂಗಿತವನ್ನು ನೆರವೇರಿಸು. ನನ್ನ ರೂಪಕುಲಶೀಲಗಳೆಲ್ಲವನ್ನು ನೀನು ತಿಳಿದಿಹೆಯಲ್ಲವೇ?

ಶರ್ಮಿಷ್ಠೆ! ನಿಜ ನಿನ್ನ ಶೀಲಸಂಪನ್ನತೆಯನ್ನು ಅನಿಂದಿತ ರೂಪಸಿರಿಯನ್ನು ಅರಿತಿದ್ದೇನೆ. ಆದರೆ ದೇವಯಾನಿಯನ್ನು ಕಳುಹಿಸಿಕೊಡುವಾಗ ಶುಕ್ರಾಚಾರ್ಯರು ಶರ್ಮಿಷ್ಠೆಯನ್ನು

ನನ್ನ ಮಗಳ ದಾಸಿಯನ್ನಾಗಿ ಕಳುಹಿಸುತ್ತಿದ್ದೇನೆ ಎಂದೂ ಅವಳನ್ನು ಶಯ್ಯಾಗೃಹಕ್ಕೆ ಸೇರಿಸಬಾರದೆಂದು ಎಚ್ಚರಿಸಿದ್ದಾರೆ. ಏನು ಮಾಡಲಿ? ಎಂದ ಯಯಾತಿ.

ರಾಜನ್! ಸ್ತ್ರೀಯರ ವಿಷಯದಲ್ಲಿ, ಹಾಸ್ಯದ ಪ್ರಸಂಗದಲ್ಲಿ, ವಿವಾಹ ವಿಷಯದಲ್ಲಿ, ಪ್ರಾಣಹೋಗುವ ಪ್ರಸಂಗದಲ್ಲಿ, ಸಂಪತ್ತು ಕಳೆದುಕೊಂಡಾಗ ಮಾತು ತಪ್ಪಿದರೆ ಪಾಪವಿಲ್ಲ ಎನ್ನುತ್ತದೆ ಧರ್ಮ ಎಂದಳು ಶರ್ಮಿಷ್ಠೆ.

ರಾಜ ಪ್ರಜೆಗಳಿಗೆ ಪ್ರಮಾಣ. ಅವನೇ ತಪ್ಪಿ ನಡೆದರೆ ಹೇಗೆ? ಏನೇ ನಷ್ಟವಾದರೂ ಕೊಟ್ಟ ಮಾತು ಸುಳ್ಳು ಮಾಡಲು ಮನ ಒಪ್ಪುತ್ತಿಲ್ಲ ಎಂದ ರಾಜ. ಶರ್ಮಿಷ್ಠೆ ಹೇಳಿದಳು– ರಾಜನ್! ತನ್ನ ಪತಿ ಗೆಳತಿಯ ಪತಿ ಇಬ್ಬರೂ ಸಮಾನರೆ. ನಾನು ಯಾರ ದಾಸಿಯೋ ಅವಳಿಗೆ ನೀನು ಪತಿ ಆದಮೇಲೆ ನನಗೂ ನೀನೇ ಪತಿಯಲ್ಲವೆ. ದೇವಯಾನಿಯೊಂದಿಗೇ ಶುಕ್ರಾಚಾರ್ಯರು ನನ್ನನ್ನೂ ನಿನಗೆ ಒಪ್ಪಿಸಿದ್ದಾರೆ. ದೇವಯಾನಿಯಂತೆ ಇವಳೂ ನಿನಗೆ ಪೋಷಣೀಯಳು ಗೌರವಾರ್ಹಳು ಎಂದರಲ್ಲವೇ? ಬೇಡಿದವರಿಗೆಲ್ಲ ಸುವರ್ಣ, ರತ್ನ, ವಸ್ತ್ರ, ಆಚರಣೆ, ಭೂಮಿಗಳೆಲ್ಲವನ್ನೂ ಕೊಡುವ ದಾನಿಯಲ್ಲವೇ ನೀನು. ಇದೆಲ್ಲ ಬಾಹ್ಯದಾನ. ಪುತ್ರದಾನ, ಆತ್ಮದಾನ ದುಷ್ಕರ. ಶರೀರದಾನದಿಂದ ಪುತ್ರದಾನದ ಮಹಾಪುಣ್ಯ ನಿನಗೆ ಸೇರುವುದು. ಯಾರು ಯಾರು ಏನೇನು ಬಯಸುವರೋ ಅದೆಲ್ಲವನ್ನು ಅವರವರಿಗೆ ಕೊಡುತ್ತೇನೆಂದು ನಗರದಾದ್ಯಂತ ಘೋಷಣೆ ಮಾಡಿರುವಿ ನೀನು. ಆ ನಿನ್ನ ಮಾತನ್ನು ಸತ್ಯಗೊಳಿಸಿಕೋ. ಮಾತು ತಪ್ಪಿದವನು, ಸುಳ್ಳು ಹೇಳುವವನು ಎಂಬ ಅಪಕೀರ್ತಿ ಸಲ್ಲದಲ್ಲವೆ ನಿನಗೆ?

ಯಯಾತಿ ನುಡಿದ– ಕೊಡಬಹುದಾದ್ದನ್ನು ಕೊಡುತ್ತೇನೆಂದು ಪ್ರತಿಜ್ಞೆ ಮಾಡಿದ್ದೇನಷ್ಟೆ. ನೀನು ನನ್ನನ್ನೇ ಕೇಳುತ್ತಿರುವಿಯಲ್ಲ? ಏನು ಮಾಡಲಿ? ಹೇಳು.

ಕೇಳಿದ್ದನ್ನು ಕೊಡುತ್ತೇನೆಂದು ಪ್ರತಿಜ್ಞೆಗೈದ ಮೇಲೆ ನಾನು ಬಯಸಿದ್ದನ್ನು ನೀಡುವುದು ಧರ್ಮವಲ್ಲವೇ? ಪ್ರಭು! ಲೋಕದಲ್ಲಿ ಹೆಂಡತಿ, ದಾಸ, ಸುತ ಈ ಮೂವರೇ ನಿರ್ಧನರು. ಇವರು ಯಾರಿಗೆ ಸೇರುವರೋ ಅವರಿಗೆ ಇವರೇ ಧನ. ಇವರಿಗಾರು ಧನವಿಲ್ಲ. ಪತಿಯೂ ಇಲ್ಲ. ಪುತ್ರನೂ ಇಲ್ಲವೆಂದ ಮೇಲೆ ಹೆಣ್ಣಿನ ಜನ್ಮ ಶೂನ್ಯವಲ್ಲವೆ? ದೇವಯಾನಿಯ ದಾಸಿಯಾದ ನಾನು ನಿನ್ನ ಅಧೀನಳಲ್ಲವೇ? ನೀನು ನನ್ನನ್ನು ಸ್ವೀಕರಿಸು. ಸಂತಾನ ಭಾಗ್ಯ ಕರುಣಿಸು ಎಂದು ದೈನ್ಯದಿಂದ ಪ್ರೀತಿಯಿಂದ ಶರಣಾದಳು ಶರ್ಮಿಷ್ಠೆ.

ಯಯಾತಿಗೆ ಅವಳ ನಿರ್ಮಲ ಪ್ರೇಮ, ಜನ್ಮಜನ್ಯ ಸೌಜನ್ಯ, ಸೌಂದರ್ಯಗಳು ಆಕರ್ಷಣೆಯಾದವು. ಇದೊಂದು ದೈವನಿಯತವೆಂದು ಬಗೆದು ಧರ್ಮಾತ್ಮ ಯಯಾತಿ

ಅವಳನ್ನು ಸ್ವೀಕರಿಸಿದನು. ಇಬ್ಬರ ಪ್ರಣಯದ ಫಲವಾಗಿ ಶರ್ಮಿಷ್ಠೆ ಗಂಡು ಮಗುವಿಗೆ ಜನ್ಮವಿತ್ತಳು.

ಸಂತಾನ ಪಡೆದ ಶರ್ಮಿಷ್ಠೆಯನ್ನು ನೆನೆದು ದೇವಯಾನಿ ಕಿಡಿಯಾದಳು. ಅಸೂಯೆಯಿಂದ ಬಂದು ಶರ್ಮಿಷ್ಠೆಯಲ್ಲಿ ಕೇಳಿದಳು ಕಾಮಲುಬ್ಧಳಾಗಿ ಇದೇನು ಇಂತಹ ಕೆಲಸ ಮಾಡಿದಿ?

ಶರ್ಮಿಷ್ಠೆ ಶಾಂತಳಾಗಿ ನುಡಿದಳು– ಒಬ್ಬ ವೇದಪಾರಂಗತನಾದ ಧರ್ಮಾತ್ಮ ಋಷಿಯೊಬ್ಬರು ಬಂದರು. ನನ್ನ ಯೋಚನೆಗೆ ಅನುಗುಣವಾಗಿ ಒಲಿದು ಅವರು ವರವಿತ್ತರು. ಅದರ ಫಲವೇ ಈ ಸಂತಾನ. ನಾನು ಅನ್ಯಾಯವಮಾರ್ಗದಿಂದ ಕಾಮವನ್ನೂ ಪೂರೈಸಿಕೊಂಡಿಲ್ಲ. ಸಂಶಯಬೇಡ.

ಒಳ್ಳೆಯದು. ಆ ದ್ವಿಜನ ಗೋತ್ರ–ನಾಮ–ವಂಶಗಳೇನೆಂದು ಹೇಳುವೆಯಾ. ನಾನು ತಿಳಿದುಕೊಳ್ಳುತ್ತೇನೆಂದಳು ದೇವಯಾನಿ.

ತಪಸ್ಸು ತೇಜಸ್ಸುಗಳಿಂದ ರವಿಯಂತೆ ಕಂಗೋಳಿಸುತ್ತಿದ್ದ ಅವನ ಗೋತ್ರ–ನಾಮಗಳನ್ನು ಕೇಳುವ ಧೈರ್ಯ ಬರಲಿಲ್ಲ ಎಂದಳು ಶರ್ಮಿಷ್ಠೆ.

ಅವಳ ಮಾತನ್ನು ನಿಜವೆಂದು ನಂಬಿದ ದೇವಯಾನಿ ಶ್ರೇಷ್ಠನಾದ ದ್ವಿಜನಿಂದ ಸಂತಾನ ಪಡೆದಿದ್ದರೆ ನನ್ನದೇನೂ ಅಭ್ಯಂತರವಿಲ್ಲ. ನನಗೆ ಕೋಪವಿಲ್ಲ ಎಂದು ಹೇಳಿ ಹಿಂತೆರಳಿದಳು.

ಮುಂದೆ ದೇವಯಾನಿಗೆ ಯಯಾತಿಯಿಂದ ಎರಡು ಮಕ್ಕಳಾದವು. ಯದು, ತುರ್ವಸು ಎಂದವರ ಹೆಸರು.

ಹೀಗೆ ಶರ್ಮಿಷ್ಠೆಗೆ ದ್ರುಹ್ಯು, ಅನು, ಪೂರು ಎಂದು ಮೂರು ಮಕ್ಕಳಾದವು.

ಒಮ್ಮೆ ದೇವಯಾನಿ ಯಯಾತಿ ಇಬ್ಬರೂ ಅಶೋಕವನಕ್ಕೆ ಬಂದರು. ಮೂವರು ಸುಂದರರೂಪದ ಸುಕುಮಾರರನ್ನು ನೋಡಿ ವಿಸ್ಮಯಗೊಂಡ ದೇವಯಾನಿ ಯಯಾತಿಯನ್ನು ಕೇಳಿದಳು. ನಿನ್ನನ್ನು ಹೋಲುವ ಮೂವರು ಯಾರ ಮಕ್ಕಳು? ಅಲ್ಲಿಯೇ ಇದ್ದ ದಾದಿ ಹೇಳಿದಳು–ಹೇಳಿ ಮಕ್ಕಳೇ! ನಿಮ್ಮ ತಂದೆ ದ್ವಿಜಶ್ರೇಷ್ಠನೆಂದು. ಮಕ್ಕಳು ಹೇಳಿದವು–ದ್ವಿಜನೂ ಋಷಿಯೂ ಎರಡೂ ಹೌದು ನಮ್ಮ ತಂದೆ.

ಗಾಬರಿಯ ಕುತೂಹಲದಿಂದ ದೇವಯಾನಿ–ಅವನ ಹೆಸರು ಗೋತ್ರಗಳೇನು ಹೇಳಿ ಮಕ್ಕಳೇ? ಎಂದು ಕೇಳಿದಳು. ಮಕ್ಕಳು ಮೆಲ್ಲಗೆ ರಾಜನ ಕಡೆಗೆ ಬೆರಳು ತೋರಿಸಿದವು. ಶರ್ಮಿಷ್ಠಾ ನಮ್ಮಮ್ಮ ಎಂದವು. ದೇವಯಾನಿಯ ಎದುರಿಗೆ ಯಯಾತಿಯ ಬಳಿಗೆ ಓಡಿ

ಬಂದವು. ದೇವಯಾನಿಯ ಎದುರಿನಲ್ಲಿ ಯಯಾತಿಯು ಆ ಮಕ್ಕಳನ್ನು ಮುದ್ದು ಮಾಡಲಿಲ್ಲ. ಅಳುತ್ತ ಅಲ್ಲಿ ಬಂದ ಶರ್ಮಿಷ್ಠೆಯನ್ನು ಅಪ್ಪಿ ನಿಂತವು. ಶರ್ಮಿಷ್ಠೆ ರಾಜನ ಸಮೀಪದಲ್ಲಿ ತಲೆ ತಗ್ಗಿಸಿ ನಿಂತಳು. ರಾಜನು ಸಂಕೋಚದಿಂದ ದೇವಯಾನಿಗೆ ಉತ್ತರಿಸಲಾಗದೆ ನಿಂತ.

ದೇವಯಾನಿ ಸಿಟ್ಟಾದಳು-ಶರ್ಮಿಷ್ಠೆ! ಒಬ್ಬ ಋಷಿಯಿಂದ ತಾಯಿಯಾದೆ ಎಂದು ಸುಳ್ಳು ಹೇಳಿ ರಾಜನನ್ನು ರಕ್ಷಣೆ ಮಾಡಿದಿ. ನನ್ನಧೀನದಲ್ಲಿರುವ ದಾಸಿಯಾಗಿ ನನಗೆ ದ್ರೋಹಮಾಡಿದಿಯಲ್ಲವೆ? ನನಗೆ ಹೆದರದೆ ಅಸುರಧರ್ಮವನ್ನು ತೋರಿದೆಯಲ್ಲ? ಎಂದು ಗದರಿದಳು.

ಶರ್ಮಿಷ್ಠೆ ಧೈರ್ಯದಿಂದ ನುಡಿದಳು. ದೇವಯಾನಿ ನಾನು ನಿನಗೆ ಸುಳ್ಳು ಹೇಳಿಲ್ಲ. ನ್ಯಾಯ ಧರ್ಮಗಳಿಗನುಸಾರವಾಗಿ ನಡೆದುಕೊಂಡಿರುವ ನಾನು ನಿನಗೆ ಹೆದರಬೇಕಿಲ್ಲ. ನೀನು ರಾಜನನ್ನು ಮನಸಾರೆ ವರಿಸಿದೆಯೋ ನಾನು ಆಗಲೇ ರಾಜನನ್ನು ಮನಸಾರೆ ವರಿಸಿದೆ. ಗೆಳತಿಯ ಭರ್ತಾ ನನಗೂ ಭರ್ತಾ ಆಗುವುದಿಲ್ಲವೆ? ನೀನು ಪೂಜ್ಯಳು ಮಾನ್ಯಳು ಹಿರಿಯಳು ಆದ ಬ್ರಾಹ್ಮಣಿಯಾಗಿರುವಿ. ನಿನಗಿಂತಲೂ ಅಧಿಕವಾಗಿ ರಾಜರ್ಷಿಯಾದ ಯಯಾತಿ ಶ್ರೇಷ್ಠನಲ್ಲವೆ?

ಶರ್ಮಿಷ್ಠೆಯ ವಾದಕ್ಕೆ ನಿರುತ್ತರಳಾದ ದೇವಯಾನಿ ಕೋಪದಿಂದ ರಾಜನ್! ನಿನ್ನೊಂದಿಗೆ ವಾಸ ಮಾಡಲಾರೆ. ನೀನು ನನಗೆ ದ್ರೋಹ ಮಾಡಿದಿ. ಶರ್ಮಿಷ್ಠೆಯೊಂದಿಗೆ ಚೆನ್ನಾಗಿ ವಿಹರಿಸಿಕೊಂಡಿರು ಎಂದು ಬೆಂಕಿಯಂತೆ ಕೋಪದಿಂದ ಉರಿದುರಿದು ಶರ್ಮಿಷ್ಠೆಯನ್ನು ದುರುಗುಟ್ಟಿಕೊಂಡು ನೋಡುತ್ತ ಬಿರುಗಾಳಿಯಂತೆ ಬೀಸಿ ನಡೆದಳು. ಶುಕ್ರಾಚಾರ್ಯರ ಬಳಿ ಬಂದು ಅಳುತ್ತ ನಿಂತಳು. ಅಷ್ಟರಲ್ಲಿ ಯಯಾತಿಯೂ ಬಂದು ಶುಕ್ರಾಚಾರ್ಯರಿಗೆ ನಮಿಸಿ ನಿಂತಳು.

ದೇವಯಾನಿ ಅಪ್ಪನ ಮುಂದೆ ಆಕ್ರೋಶದಿಂದ ನುಡಿದಳು. ಧರ್ಮವನ್ನು ಅಧರ್ಮ ತುಳಿಯುತ್ತಿದೆ. ಶರ್ಮಿಷ್ಠೆ ನನ್ನನ್ನು ಮೀರಿ ನಡೆದಿದ್ದಾಳೆ. ಈ ರಾಜನಿಂದ ಅವಳಿಗೆ ಮೂವರು ಗಂಡು ಮಕ್ಕಳಾಗಿದ್ದಾರೆ! ದುರ್ಭಾಗ್ಯಳಾದ ನನಗೆ ಎರಡೇ ಮಕ್ಕಳು. ಧರ್ಮಜ್ಞ ಎಂದು ಖ್ಯಾತನಾದ ಯಯಾತಿ ಧರ್ಮ ಮರ್ಯಾದೆಯನ್ನು ಮೀರಿ ನಡೆದಿದ್ದಾನೆ!

ಶುಕ್ರರಿಗೆ ಮಗಳಿಗೆ ಅನ್ಯಾಯವಾಯಿತೆಂದು ಕೋಪ ಬಂದು ಯಯಾತಿಗೆ ಕೂಡಲೆ ಮುಪ್ಪು ನಿನ್ನನ್ನಾವರಿಸಲಿ ಎಂದು ಶಪಿಸಿದರು.

ಗುರುಗಳೇ! ನಾನು ಧರ್ಮವನ್ನು ತಪ್ಪಿ ನಡೆದಿಲ್ಲ. ಋತುಸ್ನಾತಳಾದ ಹೆಂಡತಿ ದೇಹಸುಖವನ್ನು ಬಯಸಿದರೆ ಅದನ್ನು ಪೂರೈಸದ ಗಂಡಿಗೆ ಭ್ರೂಣಹತ್ಯೆಯ ಪಾಪ ಬರುವುದೆಂದು ಶಾಸ್ತ್ರ ಹೇಳುತ್ತದೆ. ತನ್ನನ್ನು ಅನನ್ಯವಾಗಿ ಬಯಸುವ ಸಂಗಯೋಗ್ಯಳಾದ ಹೆಣ್ಣು ಏಕಾಂತದಲ್ಲಿ ಯಾಚನೆ ಮಾಡಿದಾಗ ನಿರಾಕರಿಸಿದರೆ ಭ್ರೂಣ ಹತ್ಯೆಗೈದ ಪಾಪ ಬರುವುದೆಂದೂ ಶಾಸ್ತ್ರ ಹೇಳುತ್ತದೆ. ಆದ್ದರಿಂದಲೇ ನಾನು ಶರ್ಮಿಷ್ಠೆಯನ್ನು ಸ್ವೀಕರಿಸಿದೆ. ನನ್ನನ್ನು ಯಾರು ಏನು ಕೇಳುತ್ತಾರೆ ಅದನ್ನು ಅವರಿಗೆ ಕೊಡುತ್ತೇನೆಂದು ನನ್ನ ಪ್ರತಿಜ್ಞೆಯಾಗಿದೆ. ಆದ್ದರಿಂದಲೂ ಶರ್ಮಿಷ್ಠೆಯನ್ನು ಸ್ವೀಕರಿಸಿದೆ. ನನ್ನದೇನೂ ತಪ್ಪಿಲ್ಲ ಎಂದು ಯಯಾತಿ ವಿವರಿಸಿದನು. ತೃಪ್ತರಾಗದ ಶುಕ್ರರು–ಶರ್ಮಿಷ್ಠೆಯನ್ನು ಸ್ವೀಕರಿಸುವ ಮುಂಚೆ ನನ್ನಲ್ಲಿ ವಿಚಾರಿಸಬೇಕಿತ್ತು. ಅನುಮತಿ ಪಡೆಯಬೇಕಿತ್ತು ಎಂದರು.

ಬಳಿಕ ಅವರ ಶಾಪದಂತೆ ಯಯಾತಿಯ ದೇಹವನ್ನು ಮುಪ್ಪು ಆವರಿಸಿತು.

ಮುನಿಗಳೇ! ದೇವಯಾನಿಯಲ್ಲಿ ನಾನಿನ್ನೂ ಅತೃಪ್ತನಾಗಿದ್ದೇನೆ. ಪ್ರಸನ್ನರಾಗಿರಿ. ಮುಪ್ಪು ನಿವಾರಿಸಿರಿ ಎಂದು ಬೇಡಿದನು.

ನನ್ನ ಮಾತು ಸುಳ್ಳಾಗದು. ತಾತ್ಕಾಲಿಕವಾಗಿ ಬೇಕಾದರೆ ಮುಪ್ಪು ವರ್ಗಾಯಿಸಬಹುದು ಎಂದು ಸ್ವಲ್ಪ ರಿಯಾಯಿತಿ ತೋರಿದರು.

ನನಗೆ ಯೌವ್ವನವೀಯುವ ಮಗನು ರಾಜ್ಯವನ್ನು ಕೀರ್ತಿಯನ್ನು ಪುಣ್ಯವನ್ನು ಪಡೆಯುವವನಾಗಬೇಕೆಂದು ವರವನ್ನು ಪಡೆದ. ಶುಕ್ರರು ಅಸ್ತು ಎಂದರು.

ಯದುವಿನಲ್ಲಿ ಮುಪ್ಪು ಸ್ವೀಕರಿಸಿ ತಾರುಣ್ಯವನ್ನು ಕೊಡುವಂತೆ ಕೇಳಿದ. ನಿರಾಕರಿಸಿದ ಯದುವಿಗೆ ನಿನ್ನ ವಂಶದವರಿಗೆ ರಾಜ್ಯದೊರೆಯದಿರಲಿ ಎಂದರು.

ತುರ್ವಸುವಿಗೆ ಸಂತಾನವಿಚ್ಛೇದವಾಗಲಿ ಎಂದ. ದ್ರುಹ್ಯುವಿಗೆ ನಿನ್ನ ವೈಭವದ ಕಾಮನೆಗಳು ನೆರವೇರದಿರಲಿ ಎಂದ. ಅನುವಿಗೆ ನಿನ್ನ ಮಕ್ಕಳು ಯೌವ್ವನದಲ್ಲಿ ಮರಣ ಹೊಂದಲಿ. ಪೂರುವಿನಲ್ಲಿ ಯಯಾತಿ ತಾರುಣ್ಯವನ್ನು ಕೇಳಿದ. ಪಿತೃಗಳು ಮಾನ್ಯರು. ಅವರ ಅನುಗ್ರಹದಿಂದಲೇ ಮನುಷ್ಯ ಯಶಸ್ಸುಪಡೆಯಬಹುದು. ಅವಶ್ಯ ಜರಾವನ್ನು ಸ್ವೀಕರಿಸುತ್ತೇನೆಂದ. ನಿನ್ನ ರಾಜ್ಯದಲ್ಲಿ ಎಲ್ಲ ಪ್ರಜೆಗಳೂ ಎಲ್ಲ ಕಾಮನೆಗಳನ್ನು ಹೊಂದಲಿ ಎಂದು ಹರಸಿದ.

ಯೌವ್ವನ ಪಡೆದ ಯಯಾತಿ ಉತ್ತಮ ರೀತಿಯಿಂದ ರಾಜ್ಯಭಾರ ಮಾಡಿದನು. ಯಜ್ಞಯಾಗಗಳಿಂದ ದೇವತೆಗಳನ್ನು ಸಂತೋಷಪಡಿಸಿದ. ಎಲ್ಲ ಭೋಗಗಳನ್ನೂ ಅನುಭವಿಸಿದ. ಸಾವಿರ ವರ್ಷ ಕಳೆಯಿತು. ಒಮ್ಮೆ ಯಯಾತಿಗೆ ಹೀಗೆನಿಸಿತು. ಎಷ್ಟು ವಿಷಯಭೋಗವನ್ನು

ಅನುಭವಿಸಿದರು ಸಾಕೆನಿಸುವುದಿಲ್ಲ. ಕಾಮವನ್ನು ಭೋಗದಿಂದ ಗೆಲ್ಲಲಾಗದು. ತ್ಯಾಗದಿಂದಲೇ ಗೆಲ್ಲಬೇಕು. ತುಪ್ಪವನ್ನು ಹಾಕಿ ಬೆಂಕಿ ಆರಿಸಲಾಗದು. ಪೃಥಿವಿಯಲ್ಲಿರುವ ಧನ, ಧಾನ್ಯ, ಕನಕ ಕನ್ಯೆಯರೆಲ್ಲ ಒಬ್ಬನಿಗೇ ಸಾಕೆನಿಸುವುದಿಲ್ಲ. ಮೊದಲು ಆಸೆಯನ್ನು ಬಿಡಬೇಕು.

ಕೂಡಲೆ ಪೂರುವನ್ನು ಕರೆದು ತಾರುಣ್ಯವನ್ನು ಒಪ್ಪಿಸಿ ವೃದ್ಧಾಪ್ಯ ಪಡೆದ. ದೀರ್ಘಾಯುಷಿಯಾಗಿ ಬಹುಕಾಲ ಯುವಕನಾಗಿ ರಾಜ್ಯಭಾರ ಪಡೆ ಎಂದು ಹರಸಿದ.

ದೇವಯಾನಿ ಸುಂದರಿಯಾದರೂ ಸ್ವಲ್ಪ ಗರ್ವದಿಂದ ನಡೆದುಕೊಂಡವಳು. ಶರ್ಮಿಷ್ಠೆ ಸೌಂದರ್ಯದ ಜೊತೆಗೆ ಸೌಜನ್ಯದಿಂದಲೂ ಕೂಡಿದವಳಾಗಿ ಹೃದಯಪ್ರಿಯಳಾದಳು. ಹೆಣ್ಣುಮಕ್ಕಳು ಇದನ್ನು ಗಮನಿಸಬೇಕು. ಗರ್ವ ಸೌಂದರ್ಯಕ್ಕೊಂದು ಕಪ್ಪು ಚುಕ್ಕೆ. ಸೌಜನ್ಯ, ಮೆದುವಾದ ನಡೆ, ಸೌಂದರ್ಯಕ್ಕೇ ಸೌಂದರ್ಯವು.

ಅಪ್ಪನಿಗಾಗಿ ಪೂರುವಿನ ತ್ಯಾಗ ಬಹಳ ದೊಡ್ಡದು. ಮಕ್ಕಳು ಹಿರಿಯರಿಗಾಗಿ ತ್ಯಾಗ ಮಾಡಲು ಸಿದ್ಧವಾಗಿರಬೇಕು. ಪೂರುವಿನ ತ್ಯಾಗ ಮಾಡುವ ಸಂದರ್ಭ ಎಲ್ಲ ಮಕ್ಕಳಿಗೂ ಬರುವುದಿಲ್ಲ.

ಸಾವಿರಾರು ವರ್ಷ ಎಲ್ಲ ರೀತಿಯ ಸಮೃದ್ಧ ಭೋಗವನ್ನು ಅನುಭವಿಸಿದರೂ ಯಯಾತಿಗೆ ಸಾಕೆನಿಸದೆ ತ್ಯಾಗದಿಂದಲೆ ಕಾಮವನ್ನು ನಿಗ್ರಹಿಸಬೇಕೆಂದು ಪಾಠ ಕಲಿತ. ಭೋಗಲಾಲಸೆಗೆ ಒಳಗಾಗಿ ಯಯಾತಿ ಯಾವ ಅಧರ್ಮದ ಮಾರ್ಗ ಹಿಡಿಯಲಿಲ್ಲ. ಭೋಗಕ್ಕೆಂದು ಅನೀತಿಯ ಮಾರ್ಗ ಹಿಡಿಯುವವರನ್ನೇ ಸಮಾಜದಲ್ಲಿ ಇಂದು ಕಾಣುತ್ತಿದ್ದೇವೆ. ಯಯಾತಿಯ ಪಾಠ ಇಂದು ತುಂಬ ಜರೂರಿದೆ. ★

---

(2ನೇ ಪುಟದಿಂದ)

ಶ್ರೀಕೃಷ್ಣನಿಂದ ವಿಸ್ತೃತವಾದ ಈ ಉಪದೇಶವನ್ನು ಕೇಳಿದ ಅರ್ಜುನನು ಭಗವಂತನನ್ನು ಈ ರೀತಿಯಾಗಿ ಪ್ರಾರ್ಥಿಸುತ್ತಾನೆ. ಈ ಜೀವನು ಅನಾದಿನಿತ್ಯ ಎಂಬುದಕ್ಕೆ ಬೇರೆ ಬೇರೆ ದೃಷ್ಟಾಂತಗಳಿವೆ. ಹಿಂದೆ ಹೇಳಿದ ಪರಬ್ರಹ್ಮ–ಪ್ರಕೃತಿ ಮುಂತಾದ ದೃಷ್ಟಾಂತಗಳು ನಮಗೆ ತಿಳಿಯದ ದೃಷ್ಟಾಂತವಾಯಿತು. ಲೋಕ ಪ್ರಸಿದ್ಧವಾದ ದೃಷ್ಟಾಂತವನ್ನು ತಿಳಿಯಲು ಅಪೇಕ್ಷಿಸುತ್ತೇನೆ ಎಂಬ ತನ್ನ ಪ್ರಶ್ನೆಯನ್ನು ಇಡಲು ಭಗವಂತನು ನಸುನಗುತ್ತಾ ತನ್ನ ಉಪದೇಶಾಮೃತವನ್ನು ಮುಂದುವರಿಸಿದನು.

★

# ಕಠೋಪನಿಷತ್

ಡಾ। ಎನ್. ವೇಂಕಟೇಶಾಚಾರ್ಯ

**ದೂರಮೇತೇ ವಿಪರೀತೇ ವಿಷೂಚೀ**
**ಅವಿದ್ಯಾ ಯಾ ಚ ವಿದ್ಯೇತಿ ಜ್ಞಾತಾ ।**
**ವಿದ್ಯಾಭೀಪ್ಸಿತಂ ನಚಿಕೇತಸಂ ಮನ್ಯೇ**
**ನ ತ್ವಾ ಕಾಮಾ ಬಹವೋ ಲೋಲುಪಂತಃ ॥**

ಐಹಿಕ ಸುಖಕ್ಕೆ ಕಾರಣವಾದ ಅವಿದ್ಯೆ–ನಿತ್ಯ ಸುಖಕ್ಕೆ ಕಾರಣವಾದ ವಿದ್ಯೆ ಇವೆರಡೂ ಬೇರೆ ಬೇರೆ ಫಲ ನೀಡುವವುಗಳು. ದೂರದಲ್ಲಿರುವ ವಿರುದ್ಧ ಫಲದಾಯಕಗಳು ಬಹಳ ಕಾಮನೆಗಳೂ ಸಹ ನಿನ್ನಲ್ಲಿ ಆಸೆ ಹುಟ್ಟಿಸಲಿಲ್ಲಲ್ಲ. ನಿನ್ನನ್ನು ನಿಜವಾದ ವಿದ್ಯಾರ್ಥಿ ನಚಿಕೇತ ಎಂದೇ ತಿಳಿಯುತ್ತೇನೆ.

ಇಂದು ವಿದ್ಯೆಯ ಗುರಿ ಸುಖ. ಹೀಗಾಗಿ ಕೈ ತುಂಬಾ ಸಂಬಳಕ್ಕಾಗಿ–ಭೋಗ–ವೈಭೋಗಗಳಿಗಾಗಿ ಓದುತ್ತಾರೆ. ಅದು ಸಿಕ್ಕ ನಂತರ ಪುಸ್ತಕ ಹಿಡಿಯಬೇಕಿಲ್ಲ ಮಸ್ತಕ ಬಗ್ಗಿಸಬೇಕಾಗಿಲ್ಲ. ಆಗ ಅಧಿಕಾರ–ಅಹಂಕಾರ ಇವೆರಡೇ ಜೀವನದ ಸಂಗಾತಿಗಳು. ಹೀಗಾಗಿ ಈಗ ಕಷ್ಟಪಟ್ಟು ಓದಿ ಮುಂದೆ ಸುಖವಾಗಿರಿ ಎಂದೇ ಹೇಳುತ್ತಿದ್ದರು ಹಿಂದಿನ ತಲೆಮಾರಿನವರು.

ಈ ತಲೆಮಾರಿನಲ್ಲಿ ಆ ಆದರ್ಶಗಳೆಲ್ಲಾ ತಲೆಕೆಳಕಾಗಿ ಓದಿದ ನಂತರ ಸುಖ. ಅದಕ್ಕಾಗಿ ಕಾಯುವ ತಾಳ್ಮೆ ಇಲ್ಲ . ಓದುವಾಗಲೇ ಸುಖವಾಗಿರಬೇಕು. ಹೀಗಾಗಿ Pocket money ಇದ್ದರೇನೇ college ಗೆ ಬರಲು ತಯಾರು. ಕಾಲೇಜಿನಲ್ಲಿ ಪುಸ್ತಕಕ್ಕಿಂತ ಬಟ್ಟೆ–ವಾಹನ–ಮೊಬೈಲ್‌ಗಳ ಪರಿಚಯಕ್ಕೆ ಪ್ರಾಮುಖ್ಯತೆ. ಹೀಗಾಗಿ ಓದುವಾಗಲೇ ಸುಖವಾಗಿರಬೇಕು ಎನ್ನುತ್ತಾರೆ.

ಈ ಇಬ್ಬಗೆಯ ಜನರಿಗೆ ಕಾಲೇಜಿಗೆ ಬರುವುದು ಮುಂದಿನ ಸುಖಕ್ಕಾಗಿ. ತಂದೆ ತಾಯಿಗಳ ಒತ್ತಾಯಕ್ಕಾಗಿ. ಕೆಲಸಕ್ಕೆ ಬೇಕಾದ ಸರ್ಟಿಫಿಕೇಟ್‌ಗಾಗಿ. ಹೀಗೆ ಸುಖದ ಕಲ್ಪನೆಯ ಈ ವಿದ್ಯೆ ನಿಜವಾದ ವಿದ್ಯೆ ಅಲ್ಲ. ಅವಿದ್ಯೆ. ಇದೇಕೆ ಹೀಗೆ? ಈ ಹುಡುಗರ ತಂದೆತಾಯಿಗಳೂ ಕಲಿತದ್ದು ಇದೇ ಅವಿದ್ಯೆಯನ್ನೇ ಅಲ್ಲವೆ?

ಇವರು ವಿದ್ಯಾರ್ಥಿಗಳಲ್ಲ ವಿಷಯಾರ್ಥಿಗಳು. ವಿಷಯ ಸುಖಕ್ಕಾಗಿ ವಿದ್ಯೆ ಬೇಕು.

ಯಮನು ಹಣಕ್ಕಾಗಿ ಬುದ್ಧಿಯನ್ನು ಅಡ ಇಡುವ ವಿದ್ಯೆಯನ್ನು ಅಣುಕಿಸುತ್ತಾನೆ.

ಅಕಸ್ಮಾತ್ ಈ ವಿದ್ಯಾರ್ಥಿಗಳಿಗೆ ವಿದ್ಯೆಗೆ ಮೊದಲೇ ಸಂಬಳ–ಹಣ–ಭೂಮಿ ಎಲ್ಲಾ ಕೊಟ್ಟರೆ ಕೆಲಸ ಕೊಟ್ಟರೇ ವಿದ್ಯೆ ಓದುತ್ತಾರೇನು? ಇಲ್ಲ.

ಸುಖವೇ ಸಿಗುತ್ತಾ ಇರುವಾಗ ವಿದ್ಯೆ ಏಕೆ? ಎಷ್ಟು ಜನ ಸುಖಮಯ ಮಂತ್ರಿಗಳು ಅಧಿಕಾರ–ಹಣ ಸಿಕ್ಕಿದಾಗ ಯಾರಾದರೂ ಓದಿದ್ದಾರೇನು? ಇಲ್ಲ ಎಂದು ಎದೆ ತಟ್ಟಿ ಹೇಳಬಹುದು.

ಯಮನು ಅವರನ್ನೆಲ್ಲಾ ವಿಷಯಾರ್ಥಿಗಳು ಎಂದು ಕರೆದಿದ್ದಾನೆ. ವಿದ್ಯಾರ್ಥಿ ಎಂದರೆ ಯಾವ ಕಾಮನೆಗಳೂ ಅವನನ್ನು ಅಲುಗಾಡಿಸಲಾರವು. ನಚಿಕೇತನೇ, ನಿನ್ನನ್ನು ಯಾವ ಕಾಮನೆಗಳು ಕಂಗಾಲು ಮಾಡಲಿಲ್ಲ. ನಿನ್ನನ್ನು ವಿದ್ಯಾರ್ಥಿ ಎಂದು ಭಾವಿಸುತ್ತೇನೆ.

**ವಿದ್ಯಾಭೀಪ್ಸಿತಂ ನಚಿಕೇತಸಂ ಮನ್ಯೇ**

**ನ ತ್ವಾಂ ಕಾಮಾ ಬಹವೋ ಲೋಲುಪಂತಃ**

ಎಂದಿದ್ದಾನೆ. ಯಮ ಎಂದರೆ ಯಮ–ನಿಯಮ. ಇವುಗಳಿಂದ ವಿದ್ಯಾರ್ಥಿ ಎಂಬ ಸರ್ಟಿಫಿಕೇಟ್ ಪಡೆಯುವುದು ಕಷ್ಟ. ನಚಿಕೇತ ಪಡೆದ. ಏಕೆಂದರೆ ಅವನ ಗುರಿ ವಿದ್ಯೆ.

**ನಾವಿರತೋ ದುಶ್ಚರಿತಾತ್ ನಾಶಾಂತೋ ನಾಸಮಾಹಿತಃ ।**

**ನಾಶಾಂತಮನಸೋ ವಾಪಿ ಪ್ರಜ್ಞಾನೇನ ಏನಮಾಪ್ನುಯಾತ್ ॥**

ಎಂದು ದುಶ್ಚಟಗಳಿಂದ ದೂರನಾಗದವ, ತೃಪಿಯಿರದವ, ಏಕಾಗ್ರತೆ ಇರದವ, ಉದ್ವಿಗ್ನನಾದವ., ಬ್ರಹ್ಮವಿದ್ಯೆಗೆ ಅಧಿಕಾರಿ ಆಗಲಾರ.

ಹೀಗಾಗಿ ಅವಿದ್ಯೆಯ ಗುರಿ ವಿಷಯಸುಖ. ವಿದ್ಯೆ ಗುರಿ ನಿತ್ಯ ಸುಖ. ಆದ್ದರಿಂದ ವಿದ್ಯೆಯ ಗುರಿ ನಿಯಮ ಬದ್ಧ ನಿತ್ಯ ಸುಖ. ಇವೆರಡೂ ದೂರ,ವಿಪರೀತ. ವಿದ್ಯೆ ಅವಿದ್ಯೆ ಇವೆರಡು ದೂರ. ಇವೆರಡರ ಗುರಿಯು ವಿಪರೀತ. ಆದ್ದರಿಂದ ವಿದ್ಯೆ–ಅವಿದ್ಯೆ ಇವೆರಡು ಬೇರೆ ಬೇರೆ ಎಂದಿದ್ದಾನೆ.

ಆದ್ದರಿಂದ ಈ ಭೌತಿಕ ವಿದ್ಯೆಯನ್ನು ಮೆಟ್ಟಿ ಅನಂತರ ವಿದ್ಯೆಯನ್ನು ಬ್ರಹ್ಮವಿದ್ಯೆಯನ್ನು ಪಡೆಯಬೇಕು. ಹಾಗಾಗಲು ನಾವು ಕಲಿತಿರುವುದೇ ಸರ್ವಸ್ವ ಎಂಬ ಅವಿವೇಕ ದೂರವಾಗಬೇಕು. ಅದಕ್ಕೆ ಯಮನಿಗಿಂತ ಉತ್ತಮ ಗುರುಗಳು ಬೇರಾರು ಇದ್ದಾರು?

**(ಸಶೇಷ)**

ಸ್ತೋತ್ರ ಚಿಂತನೆ

ಭಾಗ–16

# ಶ್ರೀನಾರಾಯಣವರ್ಮ

–ಬೆ.ನಾ ವಿಜಯೀಂದ್ರಾಚಾರ್ಯ, ಮೈಸೂರು

**ತ್ರಸ್ತೋಽಸ್ಮ್ಯಹಂ ಕೃಪಣವತ್ಸಲ ದುಃಸಹೋಗ್ರ–**
**ಸಂಸಾರಚಕ್ರಕದನಾತ್ ಕೃಶತಾಂ ಪ್ರಣೀತಃ ।**
**ಬದ್ಧಃ ಸ್ವಕರ್ಮಭಿರುಶತ್ತಮ ತೇಂಘ್ರಿಮೂಲಂ**
**ಭೀತಾಪವರ್ಗಮರಣಂ ಸಮಿಯಾಂ ಕದಾನು ॥** (ಭಾ. 7–9–16)

ಭಕ್ತವತ್ಸಲನಾದ ಭಗವಂತನೇ! ನನಗೆ ನಿನ್ನ ಉಗ್ರರೂಪದಿಂದ ಭಯವಾಗಿಲ್ಲ. ಸಹಿಸಲಸಾಧ್ಯವಾದ ಸಂಸಾರಚಕ್ರದ ಹಿಂಸೆಯಿಂದ ಭಯಪಟ್ಟಿದ್ದೇನೆ. ಹುಟ್ಟು ಸಾವುಗಳೆಂಬ ಗಮನಾಗಮನದುಃಖ ನನ್ನನ್ನು ಘಾಸಿಗೊಳಿಸಿದೆ. ಈ ಹಿಂಸೆಯಿಂದ ಬೆಂದು ನೊಂದು ಬಸವಳಿದಿದ್ದೇನೆ. ಸಂಸಾರದ ನಾನಾ ಮುಖವಾದ ಹಿಂಸೆಗಳಿಂದ ಕೃಶನಾಗಿದ್ದೇನೆ. ದೇವನೇ! ನಿನ್ನ ರೂಪವನ್ನು ಕಂಡು ನನಗೆ ಯಾವ ಹೆದರಿಕೆಯೂ ಆಗದು ಆದರೆ ಈ ಸಂಸಾರದ ಕಡುರೂಪವನ್ನು ಕಂಡು ಹೆದರಿದ್ದೇನೆ. ಈ ಸಂಸಾರವೆಂಬ ಝಂಝಾವಾತದಿಂದ ಪಾರಾಗಲು ನಿನ್ನ ಆಹ್ವಾನವನ್ನೇ ನಿರೀಕ್ಷಿಸುತ್ತಿದ್ದೇನೆ. ದೇವ! ನನ್ನನ್ನು ನಿನ್ನ ಮಡಿಲಿಗೆ ಹಾಕಿಕೋ! ಎಂದು ಪ್ರಹ್ಲಾದ ಪ್ರಾರ್ಥಿಸುತ್ತಿದ್ದಾನೆ.

ಭಗವಂತನೇ! ಸಂಸಾರದಲ್ಲಿ ಕಷ್ಟಗಳಿವೆ ಎಂದಿಷ್ಟೇ ಅಲ್ಲ. ಅಲ್ಲಿ ನಾನಾ ಮುಖದ ಲೌಕಿಕ ಆಕರ್ಷಣೆಗಳೂ ಇವೆ. ಇವುಗಳಿಂದಾಗಿ ನನ್ನ ಮನಸ್ಸನ್ನು ನಿನ್ನಲ್ಲಿಯೇ ನಿಲ್ಲಿಸಲಾಗುತ್ತಿಲ್ಲ. ವಿಷಯ ಪದಾರ್ಥಗಳ ಆಕರ್ಷಣೆಯೂ ಸಹ ಸಂಸಾರದ ಮತ್ತೊಂದು ದುರಂತ. ಭೋಗಸಾಮಗ್ರಿಗಳ ಚಾಪಲ್ಯ, ಸುಖ, ದುಃಖ, ಭಯ ಮುಂತಾದವುಗಳಿಂದ ಆಕರ್ಷಿತವಾದ ಮನಸ್ಸು ನಿನ್ನಲ್ಲಿ ಕೇಂದ್ರೀಕೃತವಾಗುತ್ತಿಲ್ಲ. ಕಡಿವಾಣ ಇಲ್ಲದ ಕುದುರೆಯಂತೆ ಬೇಡವಾದ ನೂರಾರು ಮಾರ್ಗಗಳನ್ನು ತುಳಿಯುತ್ತಿದೆ.

ಇದನ್ನು ಸಂಸಾರದಲ್ಲಿಯೂ ಕಾಣಬಹುದು. ಒಬ್ಬ ಗಂಡನಿಗೆ ಅನೇಕ ಮಡದಿಯರಿದ್ದಾಗ, ಅವನ ಅವಸ್ಥೆ ಹೇಳತೀರದು. ಒಬ್ಬೊಬ್ಬರು ಒಂದೊಂದು ಕಡೆ ಸೆಳೆಯುತ್ತಾರೆ. ಅದರಂತೆ ನಮ್ಮ ಇಂದ್ರಿಯಗಳು ಅನೇಕ ಮಡದಿಯರಂತೆ ಇವೆ. ನಾಲಿಗೆಗೆ ತಿನ್ನುವ ಚಪಲವಾದರೆ ಕಣ್ಣಿಗೆ ರೂಪದ ಚಪಲ. ಮೂಗಿಗೆ ಮೂಸುವ ಚಪಲ. ಗ್ರಾಮ್ಯಗೀತೆಗಳನ್ನು ಆಲಿಸಲು ಕಿವಿಗಳು ನಿಮಿರಿ ನಿಲ್ಲುತ್ತವೆ. ಹೀಗೆ ಎಲ್ಲಾ ಇಂದ್ರಿಯಗಳು ಒಂದೊಂದು ಕಡೆ ಸೆಳೆಯುತ್ತಿವೆ.

ಅನೇಕ ಮಡದಿಯರಿಂದ ಕಂಗೆಟ್ಟ ಗಂಡನ ಪರಿಸ್ಥಿತಿಯಂತೆ; ಇಂದ್ರಿಯಗಳ ಆಕ್ರಮಣದಿಂದ ನಮ್ಮ ಪರಿಸ್ಥಿತಿಯೂ ಬಹುಪತ್ನೀ ಪುರುಷನಂತಾಗಿದೆ. ಇಂದ್ರಿಯಗಳ ಜಗ್ಗಾಟದಲ್ಲಿ ನುಜ್ಜುಗುಜ್ಜಾಗಿ ಕಂಗೆಟ್ಟಿದ್ದೇವೆ. ಇಂತಹ ಸಂಸಾರದ ದುರಂತ ಪರಿಸ್ಥಿತಿಯಲ್ಲಿ ಮನಸ್ಸನ್ನು ಭಗವಂತನೆಡೆಗೆ ಹರಿಸಲು ಸಾಧ್ಯವೇ ಆಗುತ್ತಿಲ್ಲ. ಇಂತಹ ಸಂಸಾರವೆಂಬ ಅರಣ್ಯದಿಂದ ಬಿಡುಗಡೆ ಹೊಂದಬೇಕಾದರೆ ನರಸಿಂಹನ ದಯೆವೊಂದಲ್ಲದೆ ಬೇರೆ ಉಪಾಯವಿಲ್ಲ.

ಯುದ್ಧ ಮುಂತಾದ ಸಮರ ಪ್ರಸಂಗದಲ್ಲಿಯೂ ನರಸಿಂಹನ ದಯೆಯೇ ಬೇಕು. ದುಷ್ಟರಾದ ದುರ್ಯೋಧನ– ದುಶ್ಶಾಸನರ ಸಂಹಾರಕಾಲದಲ್ಲಿ ಮೃತ್ಯುನಾಮಕ ನರಸಿಂಹನನ್ನು ಸ್ಮರಿಸಿ ವೇದಮಂತ್ರೋಚ್ಚಾರಣಪೂರ್ವಕ ನರಸಿಂಹನಿಗೆ ಆಹುತಿಯನ್ನಾಗಿ ಸಮರ್ಪಿಸಿದ ಮಹಾನುಭಾವ ಭೀಮಸೇನ. ದುಷ್ಟರನ್ನು ಎದುರಿಸುವ ಪ್ರಸಂಗದಲ್ಲಿ ಈ ನರಸಿಂಹನ ದಯೆಯೇ ಬೇಕು. ಇಷ್ಟೇ ಅಲ್ಲದೆ ರುದ್ರನೊಳಗಿರುವ ನರಸಿಂಹನು ಅನಂತನರಸಿಂಹನಾಗಿ ಪ್ರಳಯ ಕಾಲದಲ್ಲಿ ಎಲ್ಲರನ್ನು ಕಬಳಿಸುತ್ತಾನೆ. ಕೊನೆಗೆ ರುದ್ರ–ಬ್ರಹ್ಮರನ್ನು ಭಕ್ಷಿಸುವವನೂ ಈತನೇ ಆಗಿದ್ದಾನೆ. **'ಯದ್ರೋಷೋತ್ಕರ ದಕ್ಷನೇತ್ರಕುಟಿಲಪ್ರಾಂತೋತ್ಥಿತಾಗ್ನಿ ಸ್ಫುರತ್ ಖದ್ಯೋತೋಪಮ ವಿಸ್ಫುಲಿಂಗ ಭಸಿತಾ ಬ್ರಹ್ಮೇಶ ಶಕ್ರೋತ್ಕರಾಃ'**

ಇಂತಹ ನರಸಿಂಹನನ್ನು ಇಂದಿಗೂ ಹರಿವರ್ಷಖಂಡದಲ್ಲಿ ಪ್ರಹ್ಲಾದ ರಾಜರು ಸ್ತೋತ್ರಮಾಡುತ್ತಿದ್ದಾರೆ.

ಶ್ರೀಲಕ್ಷ್ಮೀನರಸಿಂಹನು ನಮ್ಮ ಮನಸ್ಸಿನಲ್ಲಿ ನೆಲೆಗೊಳ್ಳಬೇಕಿದ್ದರೆ ನಿರ್ವ್ಯಾಜ ಭಗವದ್ಭಕ್ತಿಯನ್ನು ಅಳವಡಿಸಿಕೊಳ್ಳಬೇಕು. ಭಕ್ತಿ ಒಂದಿದ್ದಲ್ಲಿ ಸದ್ಗುಣಗಳೆಲ್ಲವೂ ಸಂಗಮವಾಗುತ್ತವೆ. ಆವಾಗ ದೇವತೆಗಳು ಆಗಮಿಸುತ್ತಾರೆ–

**ಯಸ್ಯಾಸ್ತಿಭಕ್ತಿರ್ಭಗವತ್ಯಕಿಂಚನಾ**
**ಸರ್ವೈರ್ಗುಣೈಸ್ತತ್ರ ಸಮಾಸತೇ ಸುರಾಃ ।** (ಭಾ. 5–18–12)

ದೀಪವಿಲ್ಲದ ಮನೆಗೆ ಕಳ್ಳರು ನುಗ್ಗುತ್ತಾರೆ. ದೀಪ ಉರಿಯುತ್ತಿದ್ದರೆ ಜನರು ಎಚ್ಚೆತ್ತಿದ್ದಾರೆಂದು ಒಳಬರಲು ಅಂಜುತ್ತಾರೆ. ಅದರಂತೆ ಅಜ್ಞಾನವೆಂಬ ಕತ್ತಲು ತುಂಬಿದ ಮನವೆಂಬ ಮನೆಯೊಳಗೆ ಅಸತ್ಕರ್ಮಗಳೆಂಬ ಅಸುರರು ಧೈರ್ಯವಾಗಿ ಪ್ರವೇಶಿಸುತ್ತಾರೆ. ನಮ್ಮಲ್ಲಿರುವ ಸದ್ಗುಣಗಳೆಂಬ ಸಂಪತ್ತನ್ನು ದೋಚುತ್ತಾರೆ. ಮನಸ್ಸು ದುರ್ಗುಣಗಳ ಅಡಗುದಾಣವಾಗುತ್ತದೆ. ಆದರೆ ಮನೆಯಲ್ಲಿ ದೀಪ ಉರಿಯುತ್ತಿದ್ದರೆ ಕಳ್ಳರ ಭಯವಿಲ್ಲ. ಸದ್ಗುಣಗಳ ಪ್ರತೀಕರಾದ ದೇವತೆಗಳು ಆಗಮಿಸುತ್ತಾರೆ. ಆದ್ದರಿಂದ ನಮ್ಮ ಹೃದಯದೇಗುಲದಲ್ಲಿ ನಿರಂತರವು ಭಕ್ತಿ ಎಂಬ ನಂದದ ದೀಪ ಉರಿಯುತ್ತಿರಬೇಕು. **(ಸಶೇಷ)**

ಪುರಾಣಸಂದೇಶ

# ಮಾರ್ಕಂಡೇಯಪುರಾಣ

ವಿ॥ ಅಡ್ವೇಲಕ್ಷ್ಮೀಶಾಚಾರ್ಯ

## ಯೋಗಿಯ ಭೋಗ

ಯೋಗಾಚಾರ್ಯನಾದ ದತ್ತನಲ್ಲಿ ಯೋಗರಹಸ್ಯವನ್ನು ತಿಳಿಯುವ ಬಯಕೆಯಿಂದ ಅನೇಕ ಋಷಿಕುಮಾರರು ದತ್ತಾತ್ರೇಯನ ಬಳಿ ಬಂದರು. **ದತ್ತಾತ್ರೇಯೋಪಿ ವಿಷಯಾನ್ ಯೋಗಸ್ಥೋ ದದೃಶೇಹರಿಃ।** ದತ್ತನ ಮೋಹಕ ನಡೆ ಅವರನ್ನು ಕಂಗೆಡಿಸಿತು. ಭಗವಂತನ ಬಗ್ಗೆ ತಪ್ಪು ತಿಳಿದು ಅಲ್ಲಿಂದ ಹೊರಟರು. ಸ್ತ್ರೀ ಸಂಗ, ಮದ್ಯಪಾನಾದಿಗಳಿಂದ ಮೋಹಕ ಚರ್ಯೆಯನ್ನು ನಡೆಸುವ ಹರಿಯ ಪರಿ ವಿಚಿತ್ರವಾದರೂ ನಿರ್ದುಷ್ಟ. **'ಅಂತಾವಸಾಯಿ ವೇಶ್ಮಾಂತಃ ಮಾತರಿಶ್ವಾಸ್ಪೃಶನ್ನಿವ.** ಚಂಡಾಲನ ಮನೆಯ ಗಾಳಿ ಮೈಲಿಗೆಯಾಗುವುದೆ?

**'ಯಥಾಂಶುಮಾಲಾ ಸೂರ್ಯಸ್ಯ ದ್ವಿಜ ಚಾಂಡಾಲ ಸಂಗಿನೀ।**
**ನ ದುಷ್ಯತಿ ಜಗನ್ನಾಥ ತಥೇಯಂ ಚರಿತಾತವ ।'**

ಹೊಲೆಯನ ಸ್ಪರ್ಷವಾಗುತ್ತದೆಂದು ಸೂರ್ಯ ರಶ್ಮಿಯನ್ನು ತಿರಸ್ಕರಿಸುವರೇ? ತನ್ನರಿವಿನಿಂದಲೇ ಪಾಪದ ಕೊಳೆಯನ್ನು ತೊಳೆಯುವ ದೇವರು ಪತಿತನಾಗುವನೇ? ನಿರನಿಷ್ಟ ನಿರವದ್ಯನೆಂದು ಶ್ರುತಿಗಳಲ್ಲಿ ಪ್ರತಿಪಾದ್ಯವಾದ ಈ ರಹಸ್ಯವನ್ನು ಬಲ್ಲವರೇ ಯೋಗಿಗಳು. ಯೋಗಿಯ ಭೋಗರಾಗವೂ ಯಾಗವೇ. ಭಗವದ್ವಿರಾಗಿಯ ಭೋಗತ್ಯಾಗವೂ ರೋಗ. ಅಖಂಡ ಭೂಮಂಡಲಕ್ಕೆ ಏಕಚಕ್ರಾಧಿಪತಿಯಾಗಿ ಮೆರೆದ ಕಾರ್ತವೀರ್ಯಾರ್ಜುನ ದತ್ತಾತ್ರೇಯನ ಈ ಚರ್ಯೆಯ ಯಥಾರ್ಥತೆಯನ್ನು ತಿಳಿದು ಅವನ ಶಿಷ್ಯನಾದ. **'ಗೃಹ್ಣತೋ ಬಲಿಷಡ್ಭಾಗಂ ನೃಪತೇರ್ನರಕೋಧ್ರುವಂ। ನಿರೂಪಿತಮಿದಂ ರಾಜ್ಞಃ ಪೂರ್ವೈಃರಕ್ಷಣವೇತನಂ।** ಪ್ರಜೆಗಳು ತೆರುವ ತೆರಿಗೆ ರಾಜ್ಯ ರಕ್ಷಣೆಯ ಕಾಯಕಕ್ಕೆ ರಾಜನಿಗೆ ಸಂಬಳ ಈ ಎಚ್ಚರಿಕೆಯಿಂದ ಪ್ರಜಾ ರಕ್ಷಣದೀಕ್ಷಿತನಾಗಿ ದತ್ತಾತ್ರೇಯನ ನಿರ್ದೇಶನದಂತೆ ರಾಜ್ಯವಾಳಿದ ಪುಣ್ಯಾತ್ಮ. **'ಸಂತು ಸನ್ಮಾರ್ಗದೇಶಿಕಾಃ'** ಇದು ದತ್ತಾತ್ರೇಯನಲ್ಲಿ ಅವನ ಪ್ರಾರ್ಥನೆ. **ಅನಷ್ಟದ್ರವ್ಯತಾರಾಷ್ಟ್ರೇ ಮಮಾನುಸ್ಮರಣೇನ ಚ ।** ಕಳೆದುಕೊಂಡ ದ್ರವ್ಯ ನನ್ನ ಸ್ಮರಣೆಯಿಂದ ಲಭ್ಯವಾಗಬೇಕೆಂಬ ವರವನ್ನು ದತ್ತಾತ್ರೇಯರಲ್ಲಿ ಕೇಳಿದ್ದ. ಆದ್ದರಿಂದಲೇ ನಮ್ಮಲ್ಲಿ ಈ ಶ್ಲೋಕ ಚಾಲ್ತಿಯಲ್ಲಿದೆ.

**ಕಾರ್ತ್ಯವೀರ್ಯಾರ್ಜುನೋನಾಮ ರಾಜಾ ಬಾಹು ಸಹಸ್ರವಾನ್।**
**ತಸ್ಯಸ್ಮರಣಮಾತ್ರೇಣ ಗತಂ ನಷ್ಟಂ ಚ ಲಭ್ಯತೇ॥**

ದತ್ತಾತ್ರೇಯರ ಉಪದೇಶದಿಂದ ತನ್ನ ವ್ಯಕ್ತಿತ್ವವನ್ನು ರೂಪಿಸಿಕೊಂಡ ಇನ್ನೊಬ್ಬ ರಾಜರ್ಷಿ ಅಲರ್ಕ.

## ಅಲರ್ಕನ ವೃತ್ತಾಂತ

ಧರ್ಮಾತ್ಮನಾದ ಶತ್ರುಜಿತ್ ರಾಜನ ಮಗ ಋತಧ್ವಜ. ಅವನಿಗೆ ನಾಗರಾಜ ಅಶ್ವತರನ ಮಕ್ಕಳು ಗೆಳೆಯರು. ಗಾಲವರ ಆಶ್ರಮ ರಕ್ಷಣೆಗೆ ತಂದೆಯ ಆಜ್ಞೆಯಂತೆ ಕುದುರೆಯೇರಿ ಹೊರಟ. ಅದೊಂದು ವಿಚಿತ್ರ ಕುದುರೆ. ಅದನ್ನೇರಿ ಕಾಡಿಗೆ ಬೇಟೆಗೆ ಹೊರಟ. ಹಂದಿಯ ರೂಪದಿಂದ ಬಂದ ರಾಕ್ಷಸನನ್ನು ಬೆನ್ನಟ್ಟಿ ಹೋಗಿ ಸೇರಿದ್ದು ಪಾತಾಳಕ್ಕೆ. ಪಾತಾಳಕೇತುವೆಂಬ ಆ ರಾಕ್ಷಸ ಋತಧ್ವಜನಿಂದ ಹತನಾದ. ಅಲ್ಲೊಂದು ದಿವ್ಯ ನಗರಿ. ಅಲ್ಲೊಬ್ಬಳು ಸುಂದರ ತರುಣಿ. ಹೆಸರು ಮದಾಲಸಾ. ದುಷ್ಟನಿಂದ ಅಪಹೃತಳಾಗಿದ್ದಳು. ಕುಂಡಲೆ ಎಂಬ ಸಾಧ್ವಿಯಿಂದ ಮದಾಲಸೆಯ ಕರುಣ ವೃತ್ತಾಂತವನ್ನು ಕೇಳಿ ಅವಳನ್ನು ಪತ್ನಿಯನ್ನಾಗಿ ಸ್ವೀಕರಿಸಿದ. ರಾಜ್ಯಕ್ಕೆ ಮರಳಿ ಬಂದ. ತಾಲಕೇತು ಪಾತಾಳಕೇತುವಿನ ತಮ್ಮ, ಅಣ್ಣನನ್ನು ಕೊಂದ ಸೇಡು ತೀರಿಸುವ ಹವಣಿಕೆಯಲ್ಲಿದ್ದ. ಅದೊಂದು ದಿನ ಸಂಚಾರಕ್ಕೆ ಹೊರಟ ಋತಧ್ವಜನಿಗೆ ತಾಲಕೇತು ಋಷಿಯ ರೂಪದಲ್ಲಿ ಕಾಣಿಸಿದ. ತಾನೊಂದು ಯಜ್ಞ ಮಾಡುವುದಾಗಿಯೂ ನಿನ್ನ ಕಂಠಾಭರಣವನ್ನು ಕೊಟ್ಟಲ್ಲಿ ನನ್ನ ಸಂಕಲ್ಪ ಕೈಗೂಡುವುದೆಂದು ಅವನನ್ನು ನಂಬಿಸಿದ. ರಾಜಕುಮಾರ ಕಂಠಾಭರಣವನ್ನು ಕೊಟ್ಟ. ಜಲಸ್ಥಂಭನ ಮಾಡುವೆ. ನಾನು ಮೇಲೆ ಬರುವವರೆಗೆ ನೀನಿಲ್ಲೆ ಇರಬೇಕೆಂದು ಆದೇಶಿಸಿ, ನೀರಿಗಿಳಿದು ಋತಧ್ವಜನ ತಂದೆ ಎದುರು ಕಾಣಿಸಿಕೊಂಡ. ನಿನ್ನ ಮಗ ರಕ್ಕಸನೋರ್ವನಲ್ಲಿ ಹೋರಾಡಿ ಮಡಿದ. ಇದು ಅವನ ಕಂಠಾಭರಣ ಸಾಯುವ ಮುನ್ನ ಇದನ್ನು ನನಗೊಪ್ಪಿಸಿ ನಿಮಗೆ ಸಮಾಚಾರ ತಿಳಿಸಲು ಹೇಳಿ ಸತ್ತು ಹೋದ. ಋತಧ್ವಜನ ತಂದೆ ಶತ್ರುಜಿತ್ ಖಳನ ಮಾತು ನಂಬಿದ. ಮಗನ ಹಾರದ ಗುರುತು ಇದ್ದ ತಂದೆಗೆ ಸಂಶಯವೇ ಬರಲಿಲ್ಲ. ತೀರಿ ಹೋದ ರಾಜಕುಮಾರನಿಗೆ ಅಂತ್ಯ ಸಂಸ್ಕಾರಗಳೆಲ್ಲವೂ ಆಯಿತು. ಗಂಡನ ವಿರಹವನ್ನು ತಾಳದೇ ಮದಾಲಸೆ ಎದೆಯೊಡೆದು ಸತ್ತು ಹೋದಳು. ಅವಳಿಗೂ ಸಂಸ್ಕಾರವಾಯಿತು. ತಾಲಕೇತು ನೀರಿನಿಂದ ಮೇಲೆದ್ದು ಇತ್ತ ಋತಧ್ವಜನಿಗೆ ಕಾಣಿಸಿಕೊಂಡ. ನೀನಿನ್ನು ತೆರಳಬಹುದು. ಶ್ರೇಯೋಸ್ತು ಎಂದು ಕಳುಹಿಸಿಕೊಟ್ಟ. ಋತಧ್ವಜ ಮರಳಿ ರಾಜ್ಯಕ್ಕೆ ಬಂದಾಗ ತಿಳಿಯಿತು ರಕ್ಕಸನ ಮೋಸ. ಹೃದಯೇಶ್ವರಿಯ ಹೃದಯಾಘಾತದ ಸುದ್ದಿ ಕೇಳಿ ಪರತಪಿಸಿದ. ಅವಳಿಗಾಗಿ ಮೀಸಲಿಟ್ಟ ಈ ಹೃದಯ ಮಂಟಪದಲ್ಲಿ ಇನ್ನೊಬ್ಬರಿಗೆ ಸ್ಥಾನವನ್ನು ಕಲ್ಪಿಸಲಾರೆ, ಎಂದು

ಪ್ರತಿಜ್ಞಾಪೂರ್ವಕವಾಗಿ ಮರುಮದುವೆಯ ವಿಚಾರವನ್ನು ತಿರಸ್ಕರಿಸಿದ. ಅವಳ ವಿರಹದ ಉಪಶಮನಕ್ಕೆ ಚರ್ಚಾಗೋಷ್ಠಿ, ಅಕ್ಷಕ್ರೀಡೆ, ಸಂಗೀತ ಕಾವ್ಯಾದಿಗಳಲ್ಲಿ ತನ್ನನ್ನು ತೊಡಗಿಸಿಕೊಂಡ. ಅಶ್ವತರನ ಮಕ್ಕಳು ಈ ವಿಚಾರವನ್ನು ತಂದೆಯಲ್ಲಿ ಹೇಳಿದರು. ಮಕ್ಕಳ ಗೆಳೆಯನ ಶ್ರೇಯಸ್ಸಿಗೆ ತಂದೆ ಅಶ್ವತರ ಸರಸ್ವತಿಯನ್ನು ಒಲಿಸಿಕೊಂಡು ಸಂಗೀತದಲ್ಲಿ ಅಸದೃಶ ನೈಪುಣ್ಯವನ್ನು ಪಡೆದ. ಮತ್ತೆ ರುದ್ರನ ಕುರಿತು ತಪಸ್ಸನ್ನಾಚರಿಸಿ ಋತಧ್ವಜನ ಭವಿಷ್ಯದ ಅಭಿವೃದ್ಧಿಗೆ ಪ್ರಾರ್ಥಿಸಿದ. ರುದ್ರದೇವರ ಆಜ್ಞೆಯಂತೆ ಪಿತೃಶ್ರಾದ್ಧವನ್ನು ಮಾಡಿ ಮಧ್ಯ ಪಿಂಡವನ್ನು ಭಕ್ಷಿಸಿದ. ಪಿತೃಪ್ರಸಾದದಿಂದ ಅಶ್ವತರನ ಮಧ್ಯದ ಹೆಡೆಯಲ್ಲಿ ಮತ್ತೆ ಹುಟ್ಟಿ ಬಂದಳು ಮದಾಲಸಾ ಅದೇ ರೂಪ ಅದೇ ವಯಸ್ಸು ಮತ್ತದೇ ಭಾವ. ಅಶ್ವತರ ಋತಧ್ವಜನಿಗೆ ಅವಳನ್ನೊಪ್ಪಿಸಿದ. ಪ್ರಾಣವಲ್ಲಭೆಯನ್ನು ಕಂಡ ಋತಧ್ವಜ ಹರ್ಷಚಿತ್ತನಾದ. ಅಶ್ವತರನ ತ್ಯಾಗವನ್ನು ಕೊಂಡಾಡಿದ. ನಾಲ್ಕು ಮಕ್ಕಳ ತಂದೆಯಾದ. ವಿಕ್ರಾಂತ, ಸುಬಾಹು, ಶತ್ರುಮರ್ದನ, ಅಲರ್ಕರೆಂಬ ಈ ನಾಲ್ವರೂ ತಾಯಿಯ ಆರೈಕೆಯಲ್ಲಿ ಬೆಳೆದು ಅಧ್ಯಾತ್ಮವಾದಿಗಳಾದರು. ನಾಲ್ವರೂ ವೇದಾಂತಿಗಳಾಗುತ್ತಿದ್ದು ರಾಜ್ಯಭಾರದಲ್ಲಿ ಅನಾಸಕ್ತಿಯನ್ನು ಕಂಡು ತಂದೆ ಋತಧ್ವಜ ಮದಾಲಸೆಯನ್ನು ಆಕ್ಷೇಪಿಸಿದ. ಆಗ ಗಂಡನಿಗೂ ತಿಳಿ ಹೇಳಿ, ಕೊನೆಯವನಾದ ಅಲರ್ಕನಿಗೆ ರಾಜಧರ್ಮವನ್ನು ಉಪದೇಶಿಸುತ್ತಾಳೆ. ಜೊತೆಗೆ ವರ್ಣಾಶ್ರಮ ಧರ್ಮಗಳನ್ನು, ಶ್ರಾದ್ಧದ ಮಹತ್ವ, ಶುದ್ಧಿ ವಿಚಾರ, ಸದಾಚಾರ, ಸ್ತ್ರೀಧರ್ಮ, ಅಶೌಚವಿಚಾರ, ವರ್ಜ್ಯಾವರ್ಜ್ಯ ವಿಚಾರಾದಿಗಳಿಂದ ಕೂಡಿದ ದೀರ್ಘವಾದ ಉಪದೇಶ ಮಾಡುತ್ತಾಳೆ. ತಾಯಿಯಾದವಳು ವಿದುಷಿಯಾಗಿದ್ದರೆ ಏನು ಪ್ರಯೋಜನ ಎನ್ನುವುದಕ್ಕೆ ಮದಾಲಸಾ ಆದರ್ಶ ಮಾತೆಯಾಗಿ ಕಾಣುತ್ತಾಳೆ.

**'ಸದಾ ಮುರಾರಿಂ ಹೃದಿಚಿಂತಯೇಥಾಃ ।**
**ತದ್ಧ್ಯಾನತೋಂತಃ ಷಡರೀನ್ ಜಯೇಥಾಃ ॥'**

ಕಾಮಕ್ರೋಧಾದಿ ಷಡ್ವೈರಿಗಳ ನಿಗ್ರಹಕ್ಕೆ ಇರುವ ಒಂದೇ ಒಂದು ಉಪಾಯ ಮುರಾರಿಯ ಚಿಂತನೆ. ಇದು ಅವಳ ಉಪದೇಶದ ಒಟ್ಟು ಸಾರ. **'ಅಧ್ಯೇತವ್ಯಾ ತ್ರಯೀ ನಿತ್ಯಂ'** ಇದು ಮತ್ತೊಂದು ಮುಖ್ಯ ವಿಚಾರ. ಹೀಗೆ ಅನೇಕ ವಿಷಯಗಳನ್ನು ಹೇಳಿ ಒಂದು ಮುದ್ರಿಕೆಯನ್ನು (ಉಂಗುರು) ನೀಡಿ, ಜೀವನದಲ್ಲಿ ಸಮಸ್ಯೆ ಬಂದಲ್ಲಿ ಈ ಉಂಗುರ ಮಾರ್ಗದರ್ಶಕವಾಗುವುದು ಎಂದು ಹೇಳಿ ಗಂಡನೊಂದಿಗೆ ವಾನಪ್ರಸ್ಥಕ್ಕೆ ಹೋಗುತ್ತಾಳೆ. **(ಸಶೇಷ)**

ಮುಖಪುಟಲೇಖನ

# ಹೃದಯದೊಳಗೆ ಸದನ ಮಾಡೋ ಮುದದಿ ಶ್ರೀಧರ

**–ಬೊಮ್ಮಾರಬೆಟ್ಟು ಶ್ರೀನಿವಾಸ ಭಟ್ಟ**

ಭಗವಂತನ ಕೇಶವಾದಿ ರೂಪಗಳಲ್ಲಿ ಶ್ರೀಧರ ರೂಪವು ಒಂಭತ್ತನೆಯದ್ದು. ಭಗವಂತನ ಶ್ರೀಧರ ರೂಪವು ಶ್ರಾವಣ ಮಾಸದ ನಿಯಾಮಕ ದೇವತೆ. ಶ್ರೀಮಧ್ವಾಚಾರ್ಯರು ತಂತ್ರ ಸಾರಸಂಗ್ರಹದಲ್ಲಿ ಶ್ರೀಧರರೂಪಿ ಪರಮಾತ್ಮನ ಚಿಂತನೆಯ ಕ್ರಮವನ್ನು ವಿವರಿಸುತ್ತಾ ಮೇಲಿನ ಬಲಗೈಲಿ ಚಕ್ರವನ್ನು ಎಡಗೈಲಿ ಗದೆಯನ್ನು ಕೆಳಗಿನ ಎಡಗೈಲಿ ಶಂಖವನ್ನು ಬಲಗೈಲಿ ಪದ್ಮವನ್ನು ಧರಿಸಿದ್ದಾನೆ ಎಂದು ತಿಳಿಸಿದ್ದಾರೆ. ಶ್ರೀಧರ ಶಬ್ದ ವಾಚ್ಯತ್ವ ಭಗವಂತನಿಗೆ ಅನೇಕ ರೀತಿಯಿಂದ ಕೂಡುತ್ತದೆ.

1. **ಶ್ರಿಯಂ ಧರತೀತಿ ಶ್ರೀಧರಃ**–ಶ್ರೀಶಬ್ದಕ್ಕೆ ಕಾಂತಿ ಎಂದು ಅರ್ಥ. ಅಪರಿಮಿತವಾದ ಕಾಂತಿಯನ್ನು ಧರಿಸಿದ್ದರಿಂದ ಭಗವಂತನಿಗೆ ಈ ಹೆಸರು.

2. **ಶ್ರಿಯಂ ವಕ್ಷಸಿ ಧರತೀತಿ ಶ್ರೀಧರಃ**– ಕಮಲಾ ಶ್ರೀರ್ಹರಿಪ್ರಿಯಾ ಎಂಬ ಅಮರಕೋಶದಲ್ಲಿ ತಿಳಿಸಿದಂತೆ ಶ್ರೀ ಎಂಬುದು ಲಕ್ಷ್ಮಿಯ ಹೆಸರು. ಅಂತಹ ಶ್ರೀ ಶಬ್ದವ್ಯಾಚ್ಯಳಾದ ತನ್ನ ಪತ್ನಿಯಾದ ಲಕ್ಷ್ಮೀ ದೇವಿಯನ್ನು ಸದಾಕಾಲ ಎದೆಯಲ್ಲಿ ಧರಿಸಿದವನಾದ್ದರಿಂದ ಭಗವಂತನಿಗೆ ಈ ನಾಮಧೇಯ.

3. ಬ್ರಹ್ಮಾಂಡದಲ್ಲಿರುವ ಎಲ್ಲಾ ವಿಧವಾದ ಲೌಕಿಕ ಹಾಗೂ ಅಲೌಕಿಕ ಸಂಪತ್ತುಗಳಿಗೂ ಕೂಡ ಧಾರಕನಾದ್ದರಿಂದ ಭಗವಂತನಿಗೆ ಶ್ರೀಧರ ಎಂಬ ಅಭಿಧಾನ.

4. ಶಂರೂಪಂ ಆಶ್ರಿತಾ ವಾಯುಂ ಶ್ರೀರೀತ್ಯೇವ ಚ ಕೀರ್ತಿತಾ। ಎಂದು ಶ್ರೀಮಧ್ವಾಚಾರ್ಯರು ತಾತ್ಪರ್ಯ ನಿರ್ಣಯದಲ್ಲಿ ತಿಳಿಸಿದಂತೆ ಸುಖಸ್ವರೂಪರಾದ ವಾಯುದೇವರನ್ನು ಆಶ್ರಯಿಸಿಯೇ ಸದಾಕಾಲ ಇರುವವಳಾದ್ದರಿಂದ ಭಾರತೀದೇವಿಗೆ ಶ್ರೀ ಎಂದು ಹೆಸರು. ಶ್ರೀ ನಾಮಕಳಾದ ಭಾರತೀದೇವಿಯನ್ನು ಪೋಷಿಸುವವನಾದ್ದರಿಂದ ಭಗವಂತನಿಗೆ ಈ ಹೆಸರು. ಭಾರತೀ ದೇವಿಯು ಮಹಾಭಾರತ ಕಾಲದಲ್ಲಿ ದ್ರೌಪದಿಯಾಗಿ ಅವತರಿಸಿದಾಗ ಅವಳನ್ನು ಭಗವಂತನು ಶ್ರೀಕೃಷ್ಣರೂಪದಿಂದ ರಕ್ಷಿಸಿದ್ದು ಸರ್ವರಿಗೂ ವಿದಿತವಾದ ವಿಚಾರ.

5. **ಶ್ರೀಶ್ಚ ಧರಾಚ ಅಸ್ಯ ಉಭಯೋಃ ಪಾರ್ಶ್ವಯೋಃ ಇತಿ ಶ್ರೀಧರಃ** ಅಂದರೆ ಶ್ರೀಲಕ್ಷ್ಮೀ ಮತ್ತು ಧರೆಯರನ್ನು ಸದಾಕಾಲ ತನ್ನರೆಡೂ ಬದಿಯಲ್ಲಿ ಕೂಡಿಸಿಕೊಂಡು

ಇರುವವನಾದ್ದರಿಂದ ಭಗವಂತನಿಗೆ ಈ ಹೆಸರು. ನಾರಾಯಣ ಅಷ್ಟಾಕ್ಷರ ಮಂತ್ರದ ಧ್ಯಾನ ಶ್ಲೋಕದಲ್ಲಿ **"ಲಕ್ಷ್ಮೀಧರಾಭ್ಯಾಂ ಆಶ್ಲಿಷ್ಟಃ"** ಎಂಬುದಾಗಿ ಈ ಅರ್ಥವು ತಿಳಿದುಬರುತ್ತದೆ.

ಶ್ರೀಮಧ್ವಾಚಾರ್ಯರು ದ್ವಾದಶಸ್ತೋತ್ರದಲ್ಲಿ ಶ್ರೀಧರ ಶ್ರೀಧರ ಶಂಧರ ವಂದೇ ಭೂಧರ ವಾರ್ಧರ ಕಂಧರಧಾರಿನ್। ಎಂಬುದಾಗಿ ಶ್ರೀಧರನನ್ನು ಸ್ತುತಿಸಿದ್ದಾರೆ. ಶಂಧರ=ಅಪರಿಮಿತವಾದ ಸುಖವನ್ನು ಧಾರಣೆಮಾಡಿದ, ಭೂಧರ=ಕೂರ್ಮರೂಪನಾಗಿ ಸದಾಕಾಲ ಭೂಮಿಯನ್ನು ಧರಿಸಿರುವ, ವಾರ್ಧರ=ಕ್ಷೀರಸಾಗರದಲ್ಲಿ ಸದಾಕಾಲ ರಮೆಯೊಡನೆ ರಮಿಸುತ್ತಿರುವ, ಕಂಧರ ಧಾರಿನ್=ಸುಖವನ್ನು ಧರಿಸಿರುವಂತಹ ಅಂದರೆ ಸುಖ ಸ್ವರೂಪರಾದ ಮುಕ್ತರನ್ನು ಧರಿಸಿರುವ ಅಂದರೆ ಮುಕ್ತರಿಗೆ ಆಧಾರನಾದ ಶ್ರೀಧರನಿಗೆ ನಮಸ್ಕಾರ ಎಂಬುದು ಆಚಾರ್ಯರ ಈ ಸ್ತುತಿಯ ತಾತ್ಪರ್ಯ.

ಶ್ರೀಕನಕದಾಸರು ಶ್ರೀಧರನನ್ನು **ಮದನನಯ್ಯ ನಿನ್ನ ಮಹಿಮೆ ವದನದಿಂದ ನುಡಿಯುವಂತೆ ಹೃದಯದೊಳಗೆ ಸದನ ಮಾಡೋ ಮುದದಿ ಶ್ರೀಧರ** ಎಂದು ಸ್ತುತಿಸಿದ್ದಾರೆ. ಇಲ್ಲಿ ಕನಕದಾಸರು ಶ್ರೀಧರನನ್ನು ಮದನನಯ್ಯ ಎಂದು ಸಂಬೋಧಿಸಿದ್ದಾರೆ. ಮದನನಯ್ಯ ಎಂದರೆ ಮನ್ಮಥನ ತಂದೆ ಎಂದು ಅರ್ಥ. ಲೋಕದಲ್ಲಿ ಮನ್ಮಥನು ಅತ್ಯಂತ ಕಾಂತಿಯುಕ್ತನು ಸುಂದರನು ಎಂದು ಪ್ರಸಿದ್ಧನಾಗಿದ್ದಾನೆ. ಅಂತಹ ಮನ್ಮಥನಿಗೆ ತಂದೆ ಅಂದರೆ ಮನ್ಮಥನನ್ನು ಸೃಷ್ಟಿಸಿ ಅವನಿಗೆ ಆ ಕಾಂತಿಯುಕ್ತವಾದ ಸೌಂದರ್ಯವನ್ನು ಕರುಣಿಸಿದ ಪರಮಾತ್ಮನಿಗೆ ಎಂತಹ ಕಾಂತಿ ಇರಬಹುದು. ಆದ್ದರಿಂದಲೇ ಶ್ರೀಮಧ್ವಾಚಾರ್ಯರು ಮಹಾಭಾರತ ತಾತ್ಪರ್ಯ ನಿರ್ಣಯದಲ್ಲಿ **"ಸ್ವನಂತಚಂದ್ರಾಧಿಕಕಾಂತಿಕಾಂತೇ"** ಎಂದು ಭಗವಂತನನ್ನು ಸ್ತುತಿಸಿದ್ದಾರೆ. ಅಂದರೆ ಅಸಂಖ್ಯಾತ ಚಂದ್ರರ ಕಾಂತಿಯಿಂದಲೂ ಅಧಿಕ ಕಾಂತಿಯಿಂದ ಕೂಡಿದವ ಎಂದು ಅರ್ಥ. ಒಂದು ಚಂದ್ರನ ಸೌಂದರ್ಯವನ್ನು ಸವಿಯಲೇ ನಮ್ಮ ಕಣ್ಣುಗಳೆರಡೂ ಸಾಲದು ಇನ್ನು ಅನಂತ ಚಂದ್ರರ ಕಾಂತಿಯಿಂದ ಕೂಡಿದ ಭಗವಂತನ ಸೌಂದರ್ಯವನ್ನು ಸವಿಯಲು ನಮ್ಮ ಈ ಪ್ರಾಕೃತ ಕಣ್ಣುಗಳಿಂದ ಸಾಧ್ಯವೇ? ಅಸಾಧ್ಯ. ಭಗವಂತನ ಪರಮಾನುಗ್ರವಿದ್ದರಷ್ಟೇ ಸಾಧ್ಯ. ಅಂತಹ ಅಪರಿಮಿತವಾದ ಕಾಂತಿಯುಳ್ಳದ್ದರಿಂದಲೇ ಭಗವಂತನಿಗೆ ಶ್ರೀಧರ ಎಂಬ ಈ ಹೆಸರು. ಕನಕದಾಸರೂ ಕೂಡ ಅದಕ್ಕಾಗಿಯೇ ಮದನನಯ್ಯ ಎಂದು ಸಂಬೋಧಿಸಿದ್ದು. ಭಗವಂತನಲ್ಲಿ ಅಚಲವಾದ ಭಕ್ತಿಯನ್ನು ಮಾಡಿದರಷ್ಟೇ ಮೋಕ್ಷವು ಲಭಿಸಲು ಸಾಧ್ಯ. ಭಕ್ತಿ ಎಂದರೆ ಶ್ರೀಮಧ್ವಾಚಾರ್ಯರು ತಿಳಿಸಿದಂತೆ ಭಗವಂತನ ಮಹಿಮೆಗಳನ್ನು ನಮ್ಮ ಯೋಗ್ಯತೆಗನುಗುಣವಾಗಿ ತಿಳಿದು ಎಲ್ಲ ವಸ್ತುಗಳಿಗಿಂತಲು ಹೆಚ್ಚಾಗಿ ಭಗವಂತನಲ್ಲಿ ಮಾಡುವ ಸ್ನೇಹ. ಅಂಥಹ ಸ್ನೇಹದಿಂದಲೇ ಮುಕ್ತಿ. ಮುಕ್ತಿ ಎಂದರೆ

(40ನೇ ಪುಟದಲ್ಲಿ...)

# ಪುರಾಣ ಪ್ರಪಂಚದಲ್ಲಿ ಸಾಗುವವನಿಗೊಂದು ಸಂಗಾತಿ

–ಅನಂತಕೃಷ್ಣಾಚಾರ್ಯ

ತ್ರಿವಿಕ್ರಮಪಂಡಿತರ ಮುಂದಿನ ಮಾತು– ಗುರುಗಳೇ, ಸ್ಥಳೀಯ ಭಾಷೆ, ನಾಡಭಾಷೆ, ಸಂಸ್ಕೃತ ಭಾಷೆ ಹೀಗೆ ಮೂರು ಭಾಷೆಯನ್ನರಿಯದ ದಾರಿಹೋಕನೊಬ್ಬನಿಗೆ ಈ ಮೂರು ಭಾಷೆ ಬಲ್ಲವನೊಬ್ಬ ಗೆಳೆಯನಾಗಿ ದೊರಕಿದರೆ ಎಷ್ಟು ಅನುಕೂಲವಾದೀತೋ ಹಾಗೆಯೇ ದರ್ಶನ ಭಾಷೆ, ಗುಹ್ಯಭಾಷೆ, ಸಮಾಧಿಭಾಷೆ ಎಂಬ ಮೂರು ಭಾಷೆಗಳನ್ನರಿಯದೆ ಪುರಾಣಗಳ ನಾಡಿನಲ್ಲಿ ಪಯಣಿಸಲು ಹೊರಟವನಿಗೆ 'ಶ್ರೀಭಾಗವತತಾತ್ಪರ್ಯನಿರ್ಣಯ' ವೆಂಬ ಒಳ್ಳೆಯ ಸಂಗಾತಿಯನ್ನಿತ್ತಿರಿ.

ಈ ಮಾತಿನ ತಾತ್ಪರ್ಯ ಹೀಗೆ– ಭಗವಾನ್ ವೇದವ್ಯಾಸರಿಂದ ರಚಿತವಾದ ಪುರಾಣಗಳನ್ನು ಅರ್ಥೈಸುವುದೊಂದು ದೊಡ್ಡ ಸವಾಲು. ಒಂದೊಂದು ಪುರಾಣವೂ ಒಂದೊಂದು ಬಗೆ. ಒಂದು ಪುರಾಣ ಹರಿಯೆ ಸರ್ವೋತ್ತಮನೆಂದು, ಮತ್ತೊಂದು ಶಿವನನ್ನೇ ಸರ್ವೋತ್ತಮನೆಂದು, ಮಗದೊಂದು ಬ್ರಹ್ಮನೇ ಸರ್ವೋತ್ತಮನೆಂದು ಸಾರುತ್ತಿರುವಂತೆ ತೋರುತ್ತದೆ. ಇಲ್ಲಿ ಸಾಧಕನಿಗೆ ನಿಜವಾಗಿ ವೇದವ್ಯಾಸರ ಅಭಿಪ್ರಾಯವೇನು ಎಂಬ ಗೊಂದಲ. ಆಚಾರ್ಯ ಮಧ್ವರು ಬರುವವರೆಗೂ ಈ ಗೊಂದಲ ಹಾಗೆಯೇ ಮುಂದುವರಿದಿತ್ತು. ಅದರಿಂದಲೆ ಹಿಂದಿನ ಮತಾಚಾರ್ಯರುಗಳು ಪುರಾಣಗಳನ್ನು ಪ್ರಮಾಣವೆಂದು ಒಪ್ಪಲು ಪರದಾಡಿದರು. ಅದರ ನಿಜ ಆಂತರ್ಯವನ್ನು ತಿಳಿಯದೆ ಸೋತರು. ಏಕೆಂದರೆ ಆಚಾರ್ಯರು ಬರುವುದಕ್ಕಿಂತ ಮೊದಲು ಪುರಾಣಗಳಲ್ಲಿ ಮೂರು ಭಾಷೆಗಳಿವೆ ಎಂಬ ವಿಷಯವೇ ತಿಳಿದಿರಲಿಲ್ಲ. ಆಚಾರ್ಯರು ಇದ್ದದ್ದನ್ನು ಇದ್ದಂತೆ ತಿಳಿಸುವ ಸಮಾಧಿಭಾಷೆ, ಕಂಡದ್ದನ್ನು ಕಂಡಂತೆ ಬಣ್ಣಿಸುವ ದರ್ಶನಭಾಷೆ, ಇರುವುದನ್ನು ಮುಚ್ಚಿಟ್ಟು ಬಣ್ಣಿಸುವ ಗುಹ್ಯ ಭಾಷೆ ಇವುಗಳನ್ನು ಪರಿಚಯಿಸಿ ಪುರಾಣಗಳಲ್ಲಿ ಈ ಮೂರು ಭಾಷೆಗಳು ಹೇಗೆ ಹಾಸುಹೊಕ್ಕಾಗಿ ಬಳಕೆಯಾಗಿವೆ ಎಂಬುದನ್ನು ಭಾಗವತ ಪುರಾಣದ ಶ್ಲೋಕಗಳ ನಿಜವಾದ ತಾತ್ಪರ್ಯವನ್ನು ಬಣ್ಣಿಸುವ ಭಾಗವತತಾತ್ಪರ್ಯದ ಮೂಲಕ ತೋರಿಸಿದರು. ಇದು ಕೇವಲ ಭಾಗವತ ಗ್ರಂಥಾಧ್ಯಯನಕ್ಕೆ ಮಾತ್ರ ಸೀಮಿತವಲ್ಲ. ಸಮಗ್ರ ಪುರಾಣಪ್ರಪಂಚದಲ್ಲಿ ಸಾಗಲು ಹೊರಟವನಿಗೆ ಆಪ್ತ ಸಂಗಾತಿ ಇದ್ದಂತೆಯೆ ಸರಿ.

## ಬಯಸಿದ್ದನ್ನು ಕೊಡುವ ತಂತ್ರಸಾರಸಂಗ್ರಹ

ತ್ರಿವಿಕ್ರಮರ ಮುಂದಿನ ನುಡಿ 'ಗುರುಗಳೇ, ಶ್ರೇಷ್ಠತೆಯಲ್ಲಿ ದೇವಲೋಕದ ಕಲ್ಪವೃಕ್ಷದಂತಿರುವ ತಂತ್ರಸಾರಸಂಗ್ರಹವನ್ನು ಪಡೆದು ತನ್ನ ಬಯಕೆಗಳನ್ನು ಪೂರೈಸಿಕೊಳ್ಳದವನಾರು? ಅದರಲ್ಲಿರುವ ಅಧ್ಯಾತ್ಮವಿದ್ಯೆಯು ದೇವತೆಗಳಿಂದಲೂ ಆಶ್ರಯಿಸಲ್ಪಡುತ್ತದೆ.

ಈ ಮಾತಿನ ಆಂತರ್ಯ ಹೀಗಿದೆ– ದೇವಲೋಕದಲ್ಲಿ ಕಲ್ಪವೃಕ್ಷವು ತನ್ನ ಬಳಿ ಬಂದವರ ಬಯಕೆಗಳನ್ನೆಲ್ಲ ಈಡೇರಿಸುತ್ತದೆ. ಹಾಗೆಯೇ ತಂತ್ರಸಾರಸಂಗ್ರಹ ಗ್ರಂಥವು ಅಧ್ಯಯನ–ಅನುಷ್ಠಾನಗಳಿಂದ ಎಲ್ಲ ಬಯಕೆಗಳನ್ನು ಪೂರೈಸುತ್ತದೆ. ಇದನ್ನು ಆಚಾರ್ಯರೇ **'ಗ್ರಂಥೋಽಯಂ ಪಾಠಮಾತ್ರೇಣ ಸಕಲಾಭೀಷ್ಟಸಿದ್ಧಿದಃ'** ಎಂದು ತಿಳಿಸಿದ್ದಾರೆ. ಕಲ್ಪವೃಕ್ಷದ ನೆರಳನ್ನು ದೇವತೆಗಳು ಆಶ್ರಯಿಸುವಂತೆ ಈ ಗ್ರಂಥವನ್ನು ಆಶ್ರಯಿಸುತ್ತಾರೆಂಬುದು ಇದರ ಗರಿಮೆ.

## ಮಾನ–ವಾದಲಕ್ಷಣಗಳೆಂಬ ಎರಡು ಕಣ್ಣುಗಳು

'ಓ ಕರುಣೆಯ ಆಕರವೆ, ವಾದ ಹಾಗೂ ಪ್ರಮಾಣಗಳ ದಾರಿಯಲ್ಲಿ ಸಾಗುವವರಿಗೆ ಕಣ್ಣಿನಂತಿರುವ 'ವಾದಲಕ್ಷಣ' ಹಾಗೂ 'ಮಾನಲಕ್ಷಣ' ಎಂಬ ಎರಡು ಕೃತಿಗಳನ್ನು ನೀವು ಜನರಿಗೆ ಕೊಟ್ಟಿರಿ' ಎಂಬುದು ತ್ರಿವಿಕ್ರಮರ ಮುಂದಿನ ನುಡಿ.

ತತ್ವಜ್ಞಾನದ ಆವಿಷ್ಕಾರಕ್ಕಾಗಿ ಅಥವಾ ಪರವಾದಿ ಪರಾಭವಕ್ಕಾಗಿ ನಡೆಸುವ ಮಾತುಕತೆಯೇ 'ಕಥಾ'. ಇದು ವಾದ, ಜಲ್ಪ, ವಿತಂಡವೆಂದು ಮೂರುವಿಧ. ಇದರಲ್ಲಿ ತತ್ವಜ್ಞಾನ ಆವಿಷ್ಕಾರಕ್ಕಾಗಿ ಗುರು–ಶಿಷ್ಯರ ನಡುವೆ ನಡೆಯುವ ಮಾತುಕತೆಯೇ ಸಂವಾದ ಅಥವಾ ವಾದ. ಪ್ರತಿವಾದಿ ಪರಾಭವಕ್ಕಾಗಿ ನಡೆಸುವ ಚರ್ಚೆಯೇ ಜಲ್ಪ ಮತ್ತು ವಿತಂಡ. ಇದು ವಿವಾದ. ಹೀಗೆ ಸಂವಾದ ಹಾಗೂ ವಿವಾದ ಎರಡೂ ಒಟ್ಟಾರೆ ವಾದವೇ ಸರಿ. ಸಜ್ಜನರಿಗೆ ಈ ವಾದದ ಮಾರ್ಗದ ದಾರಿ ತೋರಲು ಕಣ್ಣಿನಂತಿರುವ ಗ್ರಂಥವೇ 'ವಾದಲಕ್ಷಣ' ಅಥವಾ 'ಕಥಾಲಕ್ಷಣ'.

ಪ್ರತ್ಯಕ್ಷ, ಅನುಮಾನ, ಆಗಮಗಳು ಒಂದು ವಿಷಯವನ್ನು ಯಥಾರ್ಥವಾಗಿ ಅರಿಯಲು ಇರುವ ಮೂರು ಪ್ರಮಾಣಗಳು. ಇವುಗಳನ್ನು ಯಥಾರ್ಥವಾಗಿ ಅರಿಯಲು ಇಚ್ಛಿಸುವ ಸಾಧಕನಿಗೆ ವೇದವ್ಯಾಸರ ಬ್ರಹ್ಮತರ್ಕ ಮುಂತಾದ ಗ್ರಂಥಗಳ ಮಾರ್ಗದಲ್ಲಿ ಸಾಗಿ ಪ್ರಮಾಣಗಳ ಬಗ್ಗೆ ಯಥಾರ್ಥವಾಗಿ ತಿಳಿಸುವ ಗ್ರಂಥ 'ಮಾನಲಕ್ಷಣ' ಅಥವಾ 'ಪ್ರಮಾಣಲಕ್ಷಣ'.

**(ಸಶೇಷ)**

ಪುರಾಣ ಪರಿಚಯ

ಭಾಗ–34

# ಶ್ರೀವಿಷ್ಣುಪುರಾಣ

## ಅನಂತನಿಂದೇನು ಲಾಭ? ಎಂಬ ಪ್ರಶ್ನೆಗೆ ಪ್ರಹ್ಲಾದನ ಉತ್ತರ

–ಸ್ಫೂರ್ತಿ

"ಒಂದೊಮ್ಮೆ ಯಾರಾದರೂ ವೈರಭಾವನೆಯಿಂದ ದ್ವೇಷಿಸುತ್ತಿದ್ದರೆ ಅಂಥವರ ಬಗ್ಗೆ ಮರುಕಬೇಕು. ಏಕೆಂದರೆ ಆತ ಮೋಹಕ್ಕೊಳಗಾಗಿದ್ದಾನೆ. ಆತನಿಗೆ ದ್ವೇಷದಿಂದ ತಾನೇ ನಾಶವಾಗುತ್ತೇನೆಂಬ ಸಂಗತಿ ತಿಳಿದಿಲ್ಲ. ಹೇ ದೈತ್ಯ ಬಾಲಕರೆ, ಭೇದಭಾವಕ್ಕೊಳಗಾದವರ ದೃಷ್ಟಿಕೋನವನ್ನು ನಿಮಗೆ ವಿವರಿಸಿದೆ. ಈ ವಿಷಯದಲ್ಲಿ ಚುಟುಕಾಗಿ ಹೇಳುವುದಾದರೆ ಸಮಸ್ತ ಜಗತ್ತು ಎಲ್ಲರೊಳಗೆ ತುಂಬಿರುವ ಶ್ರೀವಿಷ್ಣುವಿನಿಂದ ವ್ಯಾಪ್ತವಾಗಿದೆ. ಆದ್ದರಿಂದ ತಿಳಿದವರು ಎಲ್ಲರೊಳಗಿರುವ ಪರಮಾತ್ಮ ಒಬ್ಬನೇ ಆಗಿದ್ದಾನೆ ಎಂದು ತಿಳಿದು ಯಾರಲ್ಲಿಯೂ ಭೇದಭಾವನೆಯನ್ನು ಹೊಂದುವುದಿಲ್ಲ. ಆದ್ದರಿಂದ ನಾವು ಮತ್ತು ನೀವು ನಮ್ಮೊಳಗಿರುವ ಆಸುರೀಭಾವನೆಯನ್ನು ದೂರಮಾಡಿ ನಿಜವಾದ ಸುಖ ಹೇಗೆ ದೊರಕೀತೋ ಹಾಗೆ ಪ್ರಯತ್ನಿಸೋಣ. ಮನುಷ್ಯನು ದೋಷದೂರನಾದ ಕೇಶವನಲ್ಲಿ ಮನಸ್ಸನ್ನು ನೆಲೆಗೊಳಿಸಿದರೆ ಅಗ್ನಿ, ಸೂರ್ಯ, ಚಂದ್ರ, ವಾಯು, ಮಳೆ, ನೀರು, ಗಾಳಿ, ಸಿದ್ಧರು, ರಾಕ್ಷಸರು, ಯಕ್ಷ–ಗಂಧರ್ವ–ಮನುಷ್ಯ–ಪಶು–ಪಕ್ಷಿ; ಜ್ವರ ಮುಂತಾದ ಯಾವುದರಿಂದಲೂ ನಾಶವನ್ನು ಹೊಂದದ ನಿಜವಾದ ಆನಂದವನ್ನು ಪಡೆಯುತ್ತಾನೆ. ಹೇ ದೈತ್ಯ ಬಾಲಕರೇ; ಸಾರರಹಿತವಾದ ಈ ಸಂಸಾರದ ಅಲೆಗಳಲ್ಲಿ ಸಂತೋಷಪಡಬೇಡಿರೆಂದು ಒತ್ತಾಯಪೂರ್ವಕವಾಗಿ ಹೇಳುತ್ತೇನೆ. ಎಲ್ಲೆಡೆಯೂ ಸಮದರ್ಶನ ಉಳ್ಳವರಾಗಿರಿ. ಅದೇ ಶ್ರೀಹರಿಯ ಆರಾಧನೆ. ಶ್ರೀಹರಿಯು ಪ್ರಸನ್ನನಾದರೆ ದೊರಕದ್ದು ಯಾವುದು? ಧರ್ಮ–ಅರ್ಥ–ಕಾಮಗಳು ಯಾವ ಲೆಕ್ಕ? ಪರಬ್ರಹ್ಮನೆಂಬ ಮಹಾವೃಕ್ಷವನ್ನು ಆಶ್ರಯಿಸಿದ ಬಳಿಕ ಮೋಕ್ಷವೆಂಬ ಮಹಾಫಲವೇ ದೊರಕುವುದರಲ್ಲಿ ಸಂದೇಹವಿಲ್ಲ. ಹೀಗೆ ಪ್ರಹ್ಲಾದನು ದೈತ್ಯ ಬಾಲಕರಿಗೆ ಉಪದೇಶಿಸುತ್ತಿರುವುದನ್ನು ಕಂಡ ದೈತ್ಯರು ಹಿರಣ್ಯಕಶಿಪುವಿಗೆ ಕೂಡಲೆ ಎಲ್ಲವನ್ನು ತಿಳಿಸಿದರು. ರೊಚ್ಚಿಗೆದ್ದ ಹಿರಣ್ಯಕಶಿಪುವು ಕೂಡಲೆ ಅಡುಗೆಯವನನ್ನು ಕರೆದು ಪ್ರಹ್ಲಾದನು ತಿನ್ನುವ ಎಲ್ಲ ಆಹಾರದಲ್ಲೂ ಹಾಲಾಹಲ ವಿಷವನ್ನು ಬೆರೆಸಿ ಕೊಡುವಂತೆ ಆದೇಶಿಸಿದ. ಅಡುಗೆಯವರು ಹಾಗೆಯೆ ಹಾಲಾಹಲ ವಿಷವನ್ನು ಬೆರೆಸಿ ನೀಡಿದರು. ಪ್ರಹ್ಲಾದನು ಆ ವಿಷಾನ್ನವನ್ನು ಅನಂತನ ಉಚ್ಚಾರಣೆಯಿಂದ ಅಭಿಮಂತ್ರಿಸಿ ಉಂಡನು. ಅನಂತನ ಸ್ಮರಣೆಯಿಂದ

ಬಲಹೀನವಾದ ಹಾಲಾಹಲ ವಿಷವು ಪ್ರಹ್ಲಾದನ ಮೇಲೆ ಯಾವ ಪರಿಣಾಮವನ್ನು ಉಂಟು ಮಾಡಲಿಲ್ಲ. ಪ್ರಹ್ಲಾದನು ಎಂದಿನಂತೆಯೇ ಆರೋಗ್ಯವಂತನಾಗಿಯೇ ಇದ್ದನು. ಇದನ್ನು ಕಂಡು ಅಡುಗೆಯವರು ಹಿರಣ್ಯಕಶಿಪುವಿಗೆ ಎಲ್ಲವನ್ನೂ ವಿವರಿಸಿದರು. ಮುಂದೇನು ಮಾಡಬೇಕೆಂಬುದನ್ನರಿಯದೆ ಮೂಢನಾದ ಹಿರಣ್ಯಕಶಿಪು ಕೂಡಲೆ ಅಲ್ಲಿದ್ದ ಪುರೋಹಿತರನ್ನು ಕುರಿತು 'ದೈತ್ಯ ಪುರೋಹಿತರೆ, ಬೇಗನೆ ಈ ಪ್ರಹ್ಲಾದನನ್ನು ಮುಗಿಸುವ ದುಷ್ಟಶಕ್ತಿಯೊಂದನ್ನು ಹುಟ್ಟಿಸಿರಿ, ತಡಮಾಡದಿರಿ' ಎಂದು ಆದೇಶಿಸಿದ. ದೈತ್ಯ ಪುರೋಹಿತರು ಹಿರಣ್ಯಕಶಿಪುವಿನ ಆದೇಶವನ್ನು ಪಾಲಿಸುವುದಕ್ಕಿಂತ ಮೊದಲು ಪ್ರಹ್ಲಾದನ ಬಳಿಗೆ ಬಂದು ನಿದಾನವಾಗಿ ಹೀಗೆ ನುಡಿದರು'. 'ಹೇ ಆಯುಷ್ಮನ್; ನೀನು ತ್ರೈಲೋಕ್ಯಪ್ರಸಿದ್ಧವಾದ ಬ್ರಹ್ಮಜ್ಞಾನಿಯ ಕುಲದಲ್ಲಿ ದೈತ್ಯರಾಜನಾದ ಹಿರಣ್ಯಕಶಿಪುವಿನ ಮಗನಾಗಿ ಹುಟ್ಟಿ ಬಂದಿರುವಿ. ನಿನ್ನ ತಂದೆಯೇ ನಿನಗೆ ಹಾಗೂ ಎಲ್ಲ ಲೋಕಗಳಿಗೂ ಆಶ್ರಯನಾಗಿರುವಾಗ ದೇವತೆಗಳಿಂದ, ಅನಂತನಿಂದ ಹಾಗೂ ಉಳಿದವರಿಂದ ನಿನಗೇನಾಗಬೇಕಾಗಿದೆ? ನೀನು ತಂದೆಯಂತೆಯೇ ಆಗುವಿ. ಆದ್ದರಿಂದ ನಮ್ಮ ಶತ್ರುಗಳಾದ ದೇವತೆಗಳನ್ನು ಹಾಗೂ ಹರಿಯನ್ನು ಹೊಗಳುವ ಗೀಳನ್ನು ಬಿಟ್ಟು ಬಿಡು. ಎಲ್ಲರ ಒಡೆಯನಾದ ನಿನ್ನ ತಂದೆಯನ್ನು ಹೊಗಳು' ಎಂದು. ಪ್ರಹ್ಲಾದನು ದೈತ್ಯ ಪುರೋಹಿತರನ್ನು ಕುರಿತು 'ಪೂಜ್ಯರೇ, ಹೌದು ನೀನು ಹೇಳಿದಂತೆ ಮರೀಚಿಗಳ ಈ ಕುಲ ಶ್ರೇಷ್ಠವಾದುದೇ. ಇದರಲ್ಲಿ ಎರಡು ಮಾತಿಲ್ಲ. ನನ್ನ ತಂದೆಯೂ ಜಗತ್ತಿನಲ್ಲಿ ಭಾರಿ ಪರಾಕ್ರಮಿ ಎಂಬುವುದೂ ಸತ್ಯವಾದುದೇ ಆಗಿದೆ. ತಂದೆಯು ಗುರುಗಳಿಗೂ ಗುರುವು ಎಂಬುದೂ ಸತ್ಯ. ಆದ್ದರಿಂದ ತಂದೆಯನ್ನು ಪ್ರಯತ್ನ ಪೂರ್ವಕವಾಗಿ ಪೂಜಿಸಬೇಕೆಂಬುದೂ ಸತ್ಯವೇ ಆಗಿದೆ. ಆದರೆ ಅನಂತನಿಂದ ನಿನಗೇನಾಗಬೇಕು? ಎಂಬ ನಿಮ್ಮ ಮಾತನ್ನು ಮಾತ್ರ ಯಾರು ತಾನೇ ಸರಿಯಾದುದು ಎನ್ನುತ್ತಾರೆ? ಈ ಮಾತು ಅರ್ಥಹೀನವಾದುದು' ಎಂದು ಸುಮ್ಮನಾದ. ಬಳಿಕ ಮೆಲ್ಲನೆ, ಹೇ ಪೂಜ್ಯರೇ; ಅನಂತನಿಂದ ಏನು ಪ್ರಯೋಜನವೆಂದು ಕೇಳಿರಿ. ಧರ್ಮಾರ್ಥಕಾಮಮೋಕ್ಷಗಳು ಪುರುಷಾರ್ಥಗಳೆಂದು ಪ್ರಸಿದ್ಧ. ಯಾರಿಂದಾಗಿ ಈ ನಾಲ್ಕು ದೊರೆಯುತ್ತವೆಯೋ ಅವನಿಂದ ಏನು ಪ್ರಯೋಜನವೆಂಬ ಮಾತಿನ ಪ್ರಯೋಜನವೇನು? ಯಾರಿಂದ ಮರೀಚಿ ಮುಂತಾದ ನಮ್ಮ ಕುಲಪುರುಷರು ಧರ್ಮಾರ್ಥಕಾಮ ಮುಂತಾದುವುಗಳನ್ನು ಹೊಂದಿದರೋ, ಕೆಲವರು ಮೋಕ್ಷವನ್ನೇ ಪಡೆದರೋ ಅಂತಹ ಶ್ರೀಹರಿಯಿಂದ ದೊರಕದ ವಸ್ತು ಯಾವುದು? ಬಹಳ ಹೇಳುವುದರಿಂದೇನು ಲಾಭ? ನೀವೇ ಯೋಚಿಸಿ ಹೇಳಿ. ನಾವಾದರೋ ಅಲ್ಪ ಬುದ್ಧಿಯವರು. ನನ್ನ ಹುಡುಗಾಟಕ್ಕೆ ಕ್ಷಮೆಯಿರಲಿ' ಎಂದು ನುಡಿದನು. **(ಸಶೇಷ)**

ಭಾಗ–4

# ವಿಶ್ವನ(ದ)ಲ್ಲಿ ವಿಶ್ವರೂಪದ(ನ) ದರ್ಶನ

–ಶ್ರೀ ಡಿ. ಗುರುಪ್ರಸಾದ್ ಭಟ್

ಹಿಂದಿನ ಸಂಚಿಕೆಯಲ್ಲಿ ನಾವು ವಿಶ್ವನಾಮದ ವಿಶಾಲಾರ್ಥತೆಯನ್ನು ಯಥಾಶಕ್ತಿ ತಿಳಿದುಕೊಂಡಿದ್ದೇವೆ. ಇನ್ನು ಭಗವದ್ಗೀತೆಯ 11ನೇ ಅಧ್ಯಾಯದಲ್ಲಿ ಶ್ರೀಕೃಷ್ಣನೇ ವಿಶ್ವನಾಗಿ ಮತ್ತು ವಿಶ್ವವೇ ಕೃಷ್ಣಮಯವಾಗಿ ಅರ್ಜುನನಿಗೆ ಕಂಡದ್ದನ್ನು ನಾವು ನೋಡಬಹುದಾಗಿದೆ. ಗೀತೆಯ 10ನೇ ಅಧ್ಯಾಯದ ಕೊನೆಯಲ್ಲಿಯೇ ಕೃಷ್ಣ ತನ್ನ ಮುಂದಿನ ವಿಶ್ವರೂಪದರ್ಶನದ ಸುಳಿವನ್ನು ನೀಡಿದ್ದಾನೆಯಲ್ಲವೇ? **'ವಿಷ್ಟಭ್ಯಾಹಮಿದಂ ಕೃತ್ಸ್ನಂ ಏಕಾಂಶೇನ ಸ್ಥಿತೋ ಜಗತ್'** ಎಂಬುದಾಗಿ ಅಂದರೆ ತನ್ನ ಒಂದು ಅಂಶದಿಂದ ಇಡಿಯ ವಿಶ್ವವನ್ನೇ ತಬ್ಬಿ, ತಡೆಹಿಡಿದು ನಡೆಸುತ್ತಿದ್ದೇನೆ ಅನ್ನುತ್ತಾನೆ. ಕೃಷ್ಣನ ಈ ಮಾತು ಅರ್ಜುನನಿಗೆ ಕೃಷ್ಣನ ವಿಶ್ವರೂಪವನ್ನು ಕಾಣಬೇಕೆಂಬ ಆಸೆಗೆ ನಾಂದಿಯಾಯಿತು. ಲೋಕದಲ್ಲೂ ಕೂಡ ಒಬ್ಬ ವ್ಯಕ್ತಿ ತನ್ನ ಪರಾಕ್ರಮದ ಹಿರಿಮೆಯ ಬಗ್ಗೆ ಬಹಳವಾಗಿ ಹೇಳಿಕೊಂಡರೂ, ಅದನ್ನು ಪ್ರತ್ಯಕ್ಷವಾಗಿ ಅಂದರೆ ತನ್ನ ಚಕ್ಷುರಿಂದ್ರಿಯಕ್ಕೆ ಗೋಚರವಾಗದೇ ನಂಬುವಂತಿಲ್ಲ ತಾನೇ? ಆಚಾರ್ಯಮಧ್ವರೂ ಕೂಡ ಪ್ರಮಾಣದ ಬಗ್ಗೆ ತಿಳಿಸುವಾಗ **'ಶಾಸ್ತ್ರಾರ್ಥಯುಕ್ತಾನುಭವಃ ಪ್ರಮಾಣಂ'** ಅಂದಿದ್ದಾರೆ. ಪ್ರಕೃತ ಅರ್ಜುನನಿಗೂ ಗೀತೆಯ 10 ಅಧ್ಯಾಯಗಳಲ್ಲಿ ಕೃಷ್ಣ ಗುರುವಾಗಿ, ಗೆಳೆಯನಾಗಿ ಉಪದೇಶಿಸಿದ್ದನ್ನು ತಾನು ಹೃದಯದಿಂದ ಮತ್ತು ಒಳಕಣ್ಣಿನಿಂದ ನೋಡಿ ಅನುಭವಿಸಬೇಕೆಂಬ ತವಕ ಶುರುವಾಯಿತು. ಇದು ತೀರಾ ಸಹಜವಲ್ಲವೇ? **'ಶಿಷ್ಯಸ್ತೇಹಂಶಾಧಿಮಾಂತ್ವಾಂಪ್ರಪನ್ನಂ'** ಎಂಬುದಾಗಿ ಅರ್ಜುನನ ಅನನ್ಯ ಶರಣಾಗತಿಯೇ ಕೃಷ್ಣನು ಗುರುವಾಗಿ ಉಪದೇಶಿಸಲು ಕಾರಣವಾಯಿತಲ್ಲವೆ? **'ಭಕ್ತೋsಸಿಮೇಸಖಾಚೇತಿರಹಸ್ಯಂ ಹ್ಯೇತದುತ್ತಮಂ'** ಎಂಬಂತೆ ಕೃಷ್ಣನೇ ಅರ್ಜುನನ್ನು ಶಿಷ್ಯನಾಗಿ ಮಾತ್ರವಲ್ಲದೇ, ಭಕ್ತನಾಗಿ, ಗೆಳೆಯನಾಗಿ ಸ್ವೀಕರಿಸಿದ. ಶಿಷ್ಯನಾಗಿದ್ದರಿಂದಲೇ ಜ್ಞಾನೋಪದೇಶ ಮಾಡಿದ. ಭಕ್ತನಾದ್ದರಿಂದ ಪ್ರೀತಿಯಿಂದ, ಕಾರುಣ್ಯದಿಂದ ತನ್ನ ವಿಶ್ವರೂಪವನ್ನು ತೋರಿಸಿದ. ಗೆಳೆಯನಾದ್ದರಿಂದ, ಗುರುವಾಗಿದ್ದರೂ ಸಾರಥಿಯಾಗಿ ನಿಂತ. ಇದು ಕೃಷ್ಣನ ಭಕ್ತವಾತ್ಸಲ್ಯಕ್ಕೆ ದ್ಯೋತಕವಾಗಿದೆ ತಾನೇ? ಗೀತೆಯ 10ನೇ ಅಧ್ಯಾಯದವರೆಗೆ ಕೃಷ್ಣ ಉಪದೇಶಿಸಿದ್ದನ್ನು ಕೇಳಿ ಅರ್ಜುನನು ಕಿಂಚಿತ್ತೂ ತಾನು ಎಲ್ಲಾ ತಿಳಿದೆ ಎಂದು ಅಹಂಕಾರಪಡಲಿಲ್ಲ. ಅವನು ವಿನಯದ ಸಾಕಾರಮೂರ್ತಿಯಾಗಿ ಕಂಡ. ಆದ್ದರಿಂದಲೇ

(40ನೇ ಪುಟದಲ್ಲಿ....)

ಜ್ಯೌತಿಷ ಚಿಂತನೆ

ಭಾಗ–03

# ಗುರುರ್ಮೇ ಗುರುತಾಂ ದದ್ಯಾತ್

-ವಿ॥ ಕುಂಭಾಸಿ ಶ್ರೀ ಶ್ರೀಪತಿ ಉಪಾಧ್ಯಾಯ

ಜಾತಕ ಹಾಗೂ ಪ್ರಶ್ನೆಯಲ್ಲಿ ದೈವಾನುಗ್ರಹವನ್ನು ಸೂಚಿಸುವ ಗ್ರಹನೀತ. ಜ್ಞಾನ ಹಾಗೂ ಸುಖಕಾರಕನಾದ ಈತ ದೇವಮಂತ್ರಿಯೆಂದೇ ಪ್ರಸಿದ್ಧನಾಗಿದ್ದಾನೆ. ಈತನು ರಾಜನ ಆಸ್ಥಾನದ ಮಂತ್ರಿ ಹಾಗೂ ಪುರೋಹಿತನನ್ನು ಸಂಕೇತಿಸುತ್ತಾನೆ. ಪುರಾಣದಂತೆ ಪ್ರಜಾಪತಿಯಿಂದ ಆಂಗೀರಸನೂ, ಆಂಗೀರಸನಿಂದ ಬೃಹಸ್ಪತಿಯ ಉತ್ಪತ್ತಿಯೂ ಆಯಿತು. ದೇವತೆಗಳ ರಕ್ಷಣೆಗೋಸ್ಕರ ಜ್ಞಾನ, ಮಂತ್ರಸಿದ್ಧಿ. ಅನುಷ್ಠಾನಕ್ಕೋಸ್ಕರ ಬೃಹಸ್ಪತಿಯು ರುದ್ರದೇವರಿಂದ ಗುರುಸ್ಥಾನದಲ್ಲಿ ನಿಯೋಜಿಸಲ್ಪಟ್ಟನು. ಈತನ ಮಾರ್ಗದರ್ಶನದಂತೆ ದೇವಾಸುರಯುದ್ಧದಲ್ಲಿ ಇಂದ್ರ ಜಯ ಸಾಧಿಸುತ್ತಿದ್ದ. ಒಮ್ಮೆ ಸುರಗುರುವನ್ನು ಅವಮಾನಪಡಿಸಿ ಅವನ ಕೋಪಕ್ಕೆ ಪಾತ್ರನಾಗಿ ಸರ್ವನಾಶವನ್ನು ಹೊಂದಿದ. ಮುಂದೆ ಗುರುವನ್ನು ಸುಪ್ರೀತನನ್ನಾಗಿಸಿ ತನ್ನೆಲ್ಲಾ ಸಂಪತ್ತನ್ನು ಪುನಃ ಪಡೆದ ಎಂಬ ಕಥೆಯು ಪುರಾಣದಲ್ಲಿ ಉಲ್ಲೇಖಿತವಾಗಿದೆ. ಹೀಗೆ ಜ್ಞಾನ, ಸದಾಚಾರ, ಮಾರ್ಗದರ್ಶನ, ಸದ್ಭಕ್ತಿ ಮೊದಲಾದವುಗಳ ಪ್ರತೀಕವೇ ಈ ಗುರು ಗ್ರಹವಾಗಿದೆ.

ವೈಜ್ಞಾನಿಕವಾಗಿ ಇದು ದೈತ್ಯಾಕಾರದ ಅನಿಲಗ್ರಹ. ಭೂಮಿಗಿಂತ 318ರಷ್ಟು ದ್ರವ್ಯರಾಶಿ ಅಧಿಕ. ಇದರ ಗಾತ್ರ ಭೂಮಿಗಿಂತ 1400ರಷ್ಟು ಹೆಚ್ಚಿದೆ. ಸೂರ್ಯನನ್ನು ಹೊರತು ಪಡಿಸಿದರೆ ಸೌರವ್ಯೂಹದ ದ್ರವ್ಯರಾಶಿಯ 2/3 ಅಂಶ ಗುರುಗ್ರಹದಲ್ಲಿದೆ. ಗ್ರಹಗಳಲ್ಲಿ ಈತ ವೇಗವಾಗಿ ಭ್ರಮಿಸುವನು. ಇಲ್ಲಿ ಯಾವುದೇ ಜೀವರಾಶಿಯಿಲ್ಲ. ಆಂತರಿಕ ತಾಪ 13,000k ಯಿಂದ 35,000k ಆಗಿದೆ. ಒಟ್ಟು 17 ಉಪಗ್ರಹ ಇದ್ದು ಇಯೋ, ಯುರೋಪ, ಗ್ಯನಿಮಿಡ್ ಮತ್ತು ಕ್ಯಾಲಿಸ್ಟೋ ಎನ್ನುವ ಪ್ರಮುಖವಾದ 4 ಉಪಗ್ರಹವಿದೆ. ಇದು ಸೌರವ್ಯೂಹದ 5ನೇ ಗ್ರಹ. ತನ್ನ ಅಕ್ಷದಲ್ಲಿ 10ಗಂಟೆಗಳಲ್ಲಿ ಒಂದು ಭಾರಿ ಭ್ರಮಿಸುತ್ತಾನೆ. ಇದರ ದಕ್ಷಿಣ ಗೋಲಾರ್ಧದಲ್ಲಿ ದೊಡ್ಡ ಕೆಂಪು ಮಚ್ಚೆಯಂತೆ ಕಾಣುವ ಮೇಲ್ಮೈ ಲಕ್ಷಣವಿದೆ. ಸುತ್ತಲೂ ತೆಳ್ಳನೆಯ ಉಂಗುರದ ವ್ಯವಸ್ಥೆಯಿದೆ. ಈ ಉಂಗುರ 6,000 ಕಿ.ಮೀ ಅಗಲ ಹಾಗೂ 30 ಕಿ.ಮೀ ದಪ್ಪ ಇದೆ.

ಸಂಹಿತಾ ಗ್ರಂಥದಲ್ಲಿ ಗುರುವಿನಿಂದ ಸಂವತ್ಸರವನ್ನು ಗಣಿಸುವ ಕ್ರಮ ಉಕ್ತವಾಗಿದೆ. ಗುರುವು ಯಾವ ನಕ್ಷತ್ರದಿಂದ ಉದಯವಾಗುವನೋ ಆ ನಕ್ಷತ್ರದಿಂದ ಕಾರ್ತಿಕಾದಿ

ವರ್ಷಕ್ರಮವು ನಿಗದಿತವಾಗಿದೆ. (ಕೃತ್ತಿಕಾ, ರೋಹಿಣಿ ಕಾರ್ತಿಕವರ್ಷ) ಅನಲ, ಪೀತ, ಹರಿತ, ಧೂಮ ಎನ್ನುವ ವರ್ಣಲಕ್ಷಣವು ಹೇಳಲ್ಪಟ್ಟಿದೆ. ಪ್ರಭವಾದಿ ಸಂವತ್ಸರದ ಗಣನೆಯೂ ಗುರುವಿನಿಂದ ಮಾಡುವ ಕ್ರಮ ಇಂದಿಗೂ (ಬಾರ್ಹಸ್ಪತ್ಯ ವರ್ಷ) ಉತ್ತರಭಾರತದಲ್ಲಿ ಪ್ರಚಲಿತವಾಗಿದೆ. ಹೋರಾಶಾಸ್ತ್ರದಂತೆ ಧನು ಹಾಗೂ ಮೀನ ಈತನ ಸ್ವಕ್ಷೇತ್ರ. ಧನುರಾಶಿಯು ಈತನ ಮೂಲ ತ್ರಿಕೋಣವೂ ಹೌದು. ಧನುವಿನ ಮೊದಲ 20 ಅಂಶ ಮೂಲ ತ್ರಿಕೋಣವಾಗಿದ್ದು ಮುಂದಿನ 10 ಅಂಶ ಸ್ವಕ್ಷೇತ್ರವಾಗಿದೆ. ಕರ್ಕಾಟಕ ಈತನ ಉಚ್ಚರಾಶಿ. ಮಕರ ನೀಚ ರಾಶಿಯಾಗಿದೆ. ಕರ್ಕಾಟಕದ 5ನೇ ಅಂಶ ಪರಮೋಚ್ಚ ಅಂಶವಾಗಿದ್ದು ಮಕರದ 5ನೇ ಅಂಶ ಪರಮನೀಚಾಂಶವಾಗಿದೆ. ಈತನು ಸಚಿವನು. ಮಂತ್ರಾಲೋಚನೆ, ನೀತಿಬೋಧನೆ ಈತನ ಧರ್ಮ. ಈತನಿಗೆ ಯವಕಂಟಕ ಎಂಬ ಉಪಗ್ರಹವಿದೆ. ದೇವಾಲಯ, ಧನನಿಕ್ಷೇಪಸ್ಥಾನ ಈತನ ಸಂಚಾರಪ್ರದೇಶ. ಗ್ರಾಮ ಸಂಚಾರಿಯು. ಈತನು 30 ವರ್ಷ ಋಗ್ವೇದಕ್ಕೆ ಅಧಿಪತಿಯು. ಜೀವಗ್ರಹನಾಗಿದ್ದಾನೆ. ಬಿಳಿ ಈತನ ವರ್ಣ. ಅರಶಿನ ವರ್ಣಕ್ಕೆ ಅಭಿಮಾನಿ. ಬೆಳ್ಳಿಯು ಈತನ ದ್ರವ್ಯ. ಇಂದ್ರ, ಈಶ್ವರ ಹಾಗೂ ಗ್ರಹರ ದೃಷ್ಟಿ ಭೇದದಿಂದ ಎಲ್ಲಾ ದೇವತೆಗಳ ಸಾನ್ನಿಧ್ಯದ ಸೂಚಕನೀತ ಸಿಂಹಲಗ್ನ, ರವಿಯೋಗ, ದೃಷ್ಟಿಯಿಂದ ಈಶ್ವರನ ಸೂಚಕ. (ಹೀಗೆ ಪ್ರತಿಯೊಂದನ್ನು ಊಹಿಸಬೇಕು) ಪುಷ್ಯರಾಗ ಈತನ ರತ್ನವಾಗಿದೆ. ಮಧ್ಯಮ ಪ್ರಮಾಣದ ಅತಿಗಟ್ಟಿಯೂ ಅಲ್ಲದ ಮೃದುವೂ ಅಲ್ಲದ ವಸ್ತ್ರ ಇವನದ್ದಾಗಿದೆ. ರೇಷ್ಮೆ, ಬಾಳೆನಾರು ಬಟ್ಟೆಗಳಿಗೆ ಕಾರಕನು. ಈಶಾನ್ಯ ದಿಕ್ಕಿಗೆ ಅಧಿಪತಿಯು. ಲಗ್ನದಲ್ಲಿದ್ದಾಗ ಈತನಿಗೆ ದಿಗ್ಬಲವಿದೆ. ಲಗ್ನಕೇಂದ್ರದಲ್ಲಿದ್ದಾಗ ಒಂದು ಲಕ್ಷ ದೋಷಗಳನ್ನು ನಾಶಪಡಿಸುತ್ತಾನೆ. ಕೇಂದ್ರಾಧಿಪತ್ಯ ಅಶುಭವೂ, ಕೇಂದ್ರಸ್ಥಿತಿ ಶುಭವೂ ಆಗಿದೆ. ಹೇಮಂತ ಋತುವಿಗೆ ಅಧಿಪತಿಯು. ಗೌತಮೀ ನದಿಯಿಂದ ವಿಂಧ್ಯಪರ್ವತದ ತನಕ ಇರುವ ಭೂಮಿಗೆ ಅಧಿಪತಿಯು. ಈತನು ಸತ್ವಪ್ರಧಾನ ಗ್ರಹನು. ಈತನ ರಶ್ಮಿ ಸಂಖ್ಯೆ 7. ಈತನು ತ, ಥ, ದ, ಧ, ನ ಎಂಬ ತ ವರ್ಗಕ್ಕೆ ಅಧಿಪತಿಯು. ಗುರುವಾರ ಪುಷ್ಯನಕ್ಷತ್ರದಿಂದ ಅಮೃತ ಸಿದ್ಧಿಯೋಗವೂ, ಗುರುವಾರ ಮೃಗಶಿರಾ ನಕ್ಷತ್ರದಿಂದ ಮೃತ್ಯುಯೋಗವೂ ಉಂಟಾಗುತ್ತದೆ. ಈತನು ಗೋಚರದಲ್ಲಿ ಜನ್ಮ, ತೃತೀಯ, ಚತುರ್ಥ, ಷಷ್ಠ, ಅಷ್ಟಮ, ದಶಮ ಹಾಗೂ ವ್ಯಯದಲ್ಲಿ ಅನಿಷ್ಟವನ್ನು ಉಂಟುಮಾಡುತ್ತಾನೆ. ತೃತೀಯ ಸ್ಥಾನವು ಅತಿದೋಷಪ್ರದವಾಗಿದೆ. ಗೋಚರದಲ್ಲಿ ರಾಶಿಯಲ್ಲಿ ಮಧ್ಯಭಾಗದ ಎರಡು ತಿಂಗಳು ಫಲನೀಡುವನು. ಗುರುವಾರದಲ್ಲಿ ಪಂಚಕ ದೋಷ ಇಲ್ಲ. (ಮೃತ್ಯು ಪಂಚಕವನ್ನು ಬಿಟ್ಟು) ಕ್ಷೇಮತಾರೆಗೆ ಅಧಿಪನು. ಇದರ ಫಲ ಧೈರ್ಯ. ಈತನು ನರಾಕೃತಿ ಉಳ್ಳವನು. ಆಕಾಶತತ್ತ್ವಕ್ಕೆ ಅಧಿಪತಿಯು. 'ವಸಾ' ಅರ್ಥಾತ್ ಕೊಬ್ಬಿಗೆ ಕಾರಕನು. ಸಿಹಿ ದ್ರವ್ಯ

ಹಾಗೂ ವರ್ಷಕ್ಕೆ ಅಧಿಪತಿಯು. ದ್ವಿತೀಯ, ಪಂಚಮ, ನವಮ, ದಶಮ ಏಕಾದಶಕ್ಕೆ ಕಾರಕನು. ಪಂಚಮದಲ್ಲಿ ನಿಷ್ಫಲನಾಗುವನು. ಕುಜನಿಂದ ಈತನ ಬಲ ಅಧಿಕವಾಗುವುದು. ಈತನಿಗೆ ಪಂಚಮ, ಸಪ್ತಮ, ನವಮದಲ್ಲಿ ಪೂರ್ಣದೃಷ್ಟಿ ಇದೆ. ಈತನು ಬ್ರಾಹ್ಮಣಗ್ರಹನು. ಈತನು ಉಭಯೋದಯ ಗ್ರಹನು (ಪೂರ್ವ ಹಾಗೂ ಪಶ್ಚಿಮಾಭಿಮುಖನು) ಪುರುಷಗ್ರಹನು. ಬಿಳಿಯಾದ ಶರೀರವುಳ್ಳವನು. ಈತನಿಗೆ ಮಂತ್ರಿ, ವಾಚಸ್ಪತಿ, ಗುರು, ದೇವಮಂತ್ರಿ, ಆಚಾರ್ಯ ಇಜ್ಯ, ಜೀವ, ಸುರಾಚಾರ್ಯ ಎಂಬ ಹೆಸರುಗಳಿವೆ. ಪುನರ್ವಸು, ವಿಶಾಖ, ಪೂರ್ವಾಭಾದ್ರ ನಕ್ಷತ್ರಕ್ಕೆ ಅಧಿಪತಿಯು. ಈತನ ದಶಾವರ್ಷ 16. ದೊಡ್ಡ ಕಾಯ, ಪಿಂಗಲವರ್ಣದ ಕೂದಲು. ಮಧುವಿನಂತಿರುವ ಕಣ್ಣು. ಕಫಮಯವಾದ ಶರೀರಿಯು. ಅಶ್ವತ್ಥವೃಕ್ಷ ಫಲಭರಿತವಾದ ವೃಕ್ಷಗಳಿಗೆ ಕಾರಕನು. ಗರ್ಭದಲ್ಲಿ ಅಂಕುರೋತ್ಪತ್ತಿಯಾಗುವ ತೃತೀಯ ಮಾಸಾಧಿಪತಿಯು. ಈತನು ಸೂರ್ಯನ ಸುತ್ತ ಭ್ರಮಿಸಲು ಪ್ರಾಯಃ 12 ವರ್ಷವನ್ನು, ಒಂದು ರಾಶಿಯನ್ನು ಭ್ರಮಿಸಲು 1 ವರ್ಷವನ್ನು ತೆಗೆದುಕೊಳ್ಳುವನು. ವರ, ಕನ್ಯಾ ಜನ್ಮರಾಶಿಯಿಂದ 2,7,5,9,11ನೇ ರಾಶಿಯಲ್ಲಿರುವಾಗ ಗುರುಬಲ ಇದೆ ಎನ್ನುವುದಾಗಿಯೂ, 1,3,6,10ರಲ್ಲಿರುವಾಗ ಪೂಜೆಯಿಂದ ಶುಭನೆಂದೂ, 4,8,12 ರಲ್ಲಿರುವಾಗ ಅನಿಷ್ಟಪ್ರದನೆಂದೂ ಪರಿಗಣಿಸಲ್ಪಡುವವನು. ಸಿಂಹಸ್ಥ ಗುರುವು ದೋಷಕಾರಿಯೆಂದೂ ವಿಶೇಷತಃ ಗೌಡದೇಶಕ್ಕೆ ದೋಷಪ್ರದನೆಂದೂ ಮುಹೂರ್ತಗ್ರಂಥಗಳಲ್ಲಿ ವರ್ಣಿಸಲ್ಪಟ್ಟಿದ್ದಾನೆ. ಗುರುವು ಕುಂಭರಾಶಿಯಲ್ಲಿರುವಾಗ ಕುಂಭಮೇಳವೆಂಬ ಪ್ರಸಿದ್ಧ ತೀರ್ಥೋತ್ಸವವು ಉತ್ತರಭಾರತದಲ್ಲಿ ನಡೆಯುತ್ತದೆ. ತುಲಾರಾಶಿಯಲ್ಲಿ ಗುರುರವಿಗಳಿದ್ದಾಗ ತಲಕಾವೇರಿಯ ತೀರ್ಥಸ್ನಾನವು ಪ್ರಸಿದ್ಧ. ಈ ಗುರುವಿಗೆ ರವಿ, ಚಂದ್ರ, ಕುಜರು ಮಿತ್ರರು ಬುಧ, ಶುಕ್ರರು ಶತ್ರುಗಳು. ಗುರು ಚಂದ್ರ ಕೇಂದ್ರಸ್ಥಿತಿಯಿಂದ ಗಜಕೇಸರಿಯೋಗವೂ, ಲಗ್ನದಲ್ಲಿದ್ದರೆ ಶುಭಯೋಗವೂ, ದಶಮದಲ್ಲಿದ್ದರೆ ಅಮಲಾಯೋಗವೂ ಉಂಟಾಗುವುದು. ಕೇಂದ್ರಕೋಣ, ಸ್ವಕ್ಷೇತ್ರ, ಉಚ್ಚ ಮೂಲತ್ರಿಕೋಣದಲ್ಲಿದ್ದರೆ ಹಂಸಯೋಗ ಉಂಟಾಗುತ್ತದೆ. ಭಾವ, ರಾಶಿ ಗ್ರಹಯೋಗದಿಂದ ಅನೇಕ ಪ್ರಸಿದ್ಧ ಯೋಗಗಳುಂಟಾಗುವುದು. ಗುರು, ಶುಕ್ರ ಕೇಂದ್ರಯೋಗ ಅತಿಮಾನುಷ ಯೋಗವಾಗಿದೆ. ಸಾಮಾನ್ಯ ವಿದ್ಯೆಗೆ ಬುಧನೂ, ಆಧ್ಯಾತ್ಮವಿದ್ಯೆಗೆ ಗುರುವೂ, ಸಾಹಿತ್ಯ-ಕಲೆಗೆ ಸಂಬಂಧಿಸಿದ ವಿದ್ಯೆಗೆ ಶುಕ್ರನು ಅಧಿಪತಿಯಾಗುವರು. ಗುರುವಿನ ದಶೆಯಲ್ಲಿ ಆತನು ಶುಭನಾಗಿದ್ದರೆ 'ಮಾನ್ಯನೂ' ಗುಣವಂತನೂ ಆಗುವನು. ಬುದ್ಧಿಯ ವಿಕಾಸ, ವರ್ಚಸ್ಸು, ಕಾಂತಿ, ಔನ್ನತ್ಯ, ಮಂತ್ರಸಿದ್ಧಿ, ನೈತಿಕತೆ, ಸ್ವಾಧ್ಯಾಯ, ಯಜ್ಞಯಾಗಾದಿಗಳ ದೀಕ್ಷೆ, ದೈವಿಕ ಕಾರ್ಯದಲ್ಲಿ ಆಸಕ್ತಿ, ಪುತ್ರೋತ್ಪತ್ತಿಯಿಂದ ಸಂತಸ ಆಗುವುದು. ಗುರುವು ಅನಿಷ್ಟ

ಸ್ಥಾನದಲ್ಲಿದ್ದರೆ ಶ್ರವಣರೋಗ, ವಿಧರ್ಮೀಯರ ವೈರ, ನಾಸ್ತಿಕತೆ, ಶ್ರಮ, ಆಯಾಸ, ಪುತ್ರನಾಶ, ವ್ಯಥೆ ಉಂಟಾಗುವುದು. ಗುರು+ಬುಧ, ಗುರು+ಶುಕ್ರ ವ್ಯಕ್ತಿಯನ್ನು ಧಾರ್ಮಿಕನನ್ನಾಗಿಯೂ ಬುದ್ಧಿಜೀವಿಯನ್ನಾಗಿಸಿದರೆ, ಗುರು+ಶನಿಯೋಗ ನೀಚವ್ಯಕ್ತಿತ್ವಕ್ಕೆ ಕಾರಣವಾಗುವುದು. ಗುರುವು ಲಗ್ನಾತ್ ಅಷ್ಟಮದಲ್ಲಿದ್ದರೆ ಅಸುರಯೋಗವೂ, ಗುರು ರಾಹು ಯೋಗದಿಂದ ಗುರುಚಂಡಾಲಯೋಗವೂ ಉಂಟಾಗುತ್ತದೆ. ಈತನು 120 ದಿನಗಳ ಕಾಲ ವಕ್ರನಾಗುವನು. ಈತನ ಸರಾಸರಿಗತಿ 5. ಸ್ತಂಭನಾಂಶ 116. ಹಸ್ತಸಾಮುದ್ರಿಕಾ ಶಾಸ್ತ್ರದಲ್ಲಿ ತರ್ಜನೀ ಬೆರಳಿನ ಕೆಳಭಾಗದಲ್ಲಿ ಗುರುಪರ್ವವಿದೆ. ಈ ಬೆರಳಿಗೆ ಪುಷ್ಯರಾಗವನ್ನು ಧರಿಸಬೇಕು. ಸಂಖ್ಯೆ 18. ವೇದ. ವಿವಿಧ ಮಂತ್ರ, ಮಾನವೀಯ ಮೌಲ್ಯ, ವೇದಾಂತ ವಿದ್ಯೆ. ಮಾಂಗಲ್ಯವಸ್ತು, ಆನೆ, ಕುದುರೆ, ಪುರೋಹಿತ, ಯಾಜ್ಞಿಕ, ಶಾಂತಿಕ ಪೌಷ್ಟಿಕ ಕರ್ಮಾಚರಣೆ, ಕರುಣೆ, ಸತ್ಯ, ಶುಚಿತ್ವ, ವ್ರತನಿಯಮ, ದಾನಧರ್ಮ ವಿದ್ಯಾದಾನ, ಔದಾರ್ಯ, ವ್ಯಾಕರಣ, ತರ್ಕಶಾಸ್ತ್ರ, ಮಧುರ ಪದಾರ್ಥ, ಜೇನು, ಯಜ್ಞೋಪಯೋಗಿ ವಸ್ತು, ಉಪವೀತ, ಬೀಜ, ಸಂತಾನ, ಜ್ಞಾನ, ಭಕ್ತಿ ವಾಕ್ಶಕ್ತಿ, ಪೂಜೆ, ನ್ಯಾಯಾಧೀಶ, ವೈರಾಗ್ಯ, ಪುಷ್ಪ, ದರ್ಪಣ ನ್ಯಾಯಸ್ಥಾನ, ನ್ಯಾಯವಾದಿ, ಕುಲಗುರು ವಿದ್ಯಾಗುರು. ಹಂಸ, ಕಡಲೆ, ಪಾರಿವಾಳ ಆಕಾಶಯಾನ, ಆಕಾಶವಾಣಿ, ಧಾನ್ಯ, ಫಲ, ದೂರವಾಣಿ, ಸನ್ಯಾಸಿ, ಮಠಾಧೀಶ, ಅಧ್ಯಾಪಕ, ಪ್ರವಚನಕಾರ, ತಂತ್ರಿ, ಪುರಾಣ, ಪೀತಾಂಬರ, ಬಂಗಾರ, ಆಶೀರ್ವಾದ, ಅನುಗ್ರಹ, ತಪಸ್ಸಿದ್ಧಿ, ತೀರ್ಥಯಾತ್ರೆಗಳಿಗೆ ಈತನು ಕಾರಕನಾಗುತ್ತಾನೆ. 19 ಸಾವಿರ ಗುರುಮಂತ್ರಜಪ, ಗುರುಪೂಜೆ, ಗುರುಶಾಂತಿ, ಕಡಲೆದಾನ, ಕಡಲೆ ಪಾಯಸದಾನ, ಪುಷ್ಯರಾಗ, ಪೀತಾಂಬರ ಹಾಗೂ ಹಳದಿ ಬಟ್ಟೆ ದಾನ, ವೈಷ್ಣವ ಮಂತ್ರಗಳ ಜಪ, ಶ್ರೀಸೂಕ್ತಪುರುಷಸೂಕ್ತ ಹೋಮ, ಕಾಮಧೇನು ಹೋಮ, ಪವಮಾನ ಹೋಮ. ಭಾಗವತ, ಹರಿವಂಶ ಪಾರಾಯಣ, ಸರ್ವಮೂಲ ಪಾರಾಯಣ, ಶ್ರೀಗುರುರಾಜರ, ರಾಘವೇಂದ್ರ ಸ್ವಾಮಿಗಳ ಸೇವೆ, ಗುರುಕ್ಷೇತ್ರಗಳ ಸಂದರ್ಶನ, ಮೃತ್ಯುಂಜಯ ಹೋಮ, ಸುಂದರಕಾಂಡ ಪಾರಾಯಣ, ವಾಯುಸ್ತುತಿ ಪುರಶ್ಚರಣೆ ಹೋಮ, ವಿಪ್ರಭೋಜನ, ದ್ವಾದಶಮೂರ್ತಿ ಆರಾಧನೆ, ನಾಮತ್ರಯ ಮಂತ್ರ ಹೋಮಗಳಿಂದ ಅನಿಷ್ಟ ಸ್ಥಾನ ಸ್ಥಿತನಾದ ಗುರುವು ಪ್ರೀತನಾಗುವನು. ಕರ್ಣರೋಗ ಸಂತಾನಹಾನಿ, ಮಧುಮೇಹ, ಬೊಜ್ಜು, ಗುಲ್ಮರೋಗ, ಕಫ, ಮೇಯರೋಗಗಳೂ, ದೇವಸ್ವ ಅಪಹಾರ, ಬ್ರಹ್ಮಶಾಪ, ಗುರುಶಾಪ, ಕೃಷ್ಣಾಪಚಾರ ದೋಷಗಳನ್ನು ಅನಿಷ್ಟ ಸ್ಥಾನಗತ ಗುರುವು ಸೂಚಿಸುವನು. ಮೇಲೆ ಹೇಳಿದ ಪ್ರಾಯಶ್ಚಿತ್ತಗಳಿಂದ ದೋಷಗಳು ಪರಿಹಾರವಾಗುವುವು. ಗುರುವು ಅಸ್ತನಾದಾಗ ಯಾವುದೇ ಶುಭಕಾರ್ಯಗಳು ನಡೆಯಲಾರವು. ಈತನು ಸಾಮಾನ್ಯವಾಗಿ 24 ದಿನ ಅಸ್ತನಾಗುವನು. ★

# ನಭೋಮಂಡಲದ ವಿಸ್ಮಯಗಳು

–ಶ್ರೀ ಜಿ. ಹೆಚ್. ಜಗನ್ನಾಥ್

ಒಮ್ಮೆ ಹೀಗೆ ಊಹಿಸಿಕೊಳ್ಳಿ ನಾವು ಪ್ರಪಂಚದ ಪವಿತ್ರ ಪರ್ವತ ಶ್ರೇಣಿಯಾದ ಹಾಗೂ ಶ್ರೀಕೃಷ್ಣನಿಗೆ ಪ್ರಿಯವಾದ ಹಿಮಾಲಯ ಪರ್ವತದ (ಸ್ಥಾವರಾಣಾಂ ಹಿಮಾಲಯಃ....ಗೀತೆ) ಮೇಲೆ ಇರುವ ಪವಿತ್ರ ಕ್ಷೇತ್ರ ವಿಶಾಲ ಬದರಿನಾಥನ ಸನ್ನಿಧಿಯಲ್ಲಿ ಇದ್ದೇವೆ. ಈ ಕ್ಷೇತ್ರವು ಶ್ರೀಮದಾನಂದತೀರ್ಥ ಭಗವತ್ಪಾದರಿಗೂ ಪ್ರಿಯವಾಗಿದೆ (ನೇದೃಶಂ ಸ್ಥಳಮಲಂ...ಮಧ್ವವಿಜಯ 6–47) ಇಲ್ಲಿ ಯಾವುದೇ ರಾತ್ರಿ ವೇಳೆಯಲ್ಲಿ, ಅಮಾವಾಸ್ಯೆ ಆಚೆ ಈಚಿನ, ಮೋಡರಹಿತ, ಚಂದ್ರನ ಬೆಳದಿಂಗಳ ಸ್ಪರ್ಶವೇ ಇಲ್ಲದ ಸ್ವಚ್ಛವಾದ ಆಗಸವನ್ನೊಮ್ಮೆ ತಲೆಎತ್ತಿ ನೋಡಿದಾಗ ಆಗುವುದು ಅಸಂಖ್ಯ ಅಗಣಿತ ನಕ್ಷತ್ರಗಳ ವಿರಾಟ್‌ದರ್ಶನ. ದೊಡ್ಡ ದೊಡ್ಡ ನಗರಗಳಲಿ ರಾತ್ರಿ ವೇಳೆ ಕೃತಕ ದೀಪಗಳ light pollution ನಿಂದಾಗಿ ನಕ್ಷತ್ರಗಳು ಅಸ್ಪಷ್ಟವಾಗಿ ಕಾಣುತ್ತವೆ. ಕೋಟ್ಯಂತರ ಕಿಲೋಮೀಟರ್ ದೂರದಲ್ಲಿರುವ ಅಗಣಿತ ತಾರೆಗಳ ವಿಸ್ತಾರ, ಹರವು, ಲಕ್ಷಾಂತರ ಜ್ಯೋತಿರ್ವರ್ಷಗಳಲ್ಲಿದ್ದು ಅಪಾರ ಅನಂತ ದ್ರವ್ಯರಾಶಿ ಹೊಂದಿ ಚಿತ್ರ–ವಿಚಿತ್ರ ಆಕಾರವರ್ಣಗಳಿಂದ ಕಂಗೊಳಿಸುವ ನೋಟ ವರ್ಣಾನಾತೀತ (ಒಂದು ಜ್ಯೋತಿರ್ವರ್ಷವೆಂದರೆ ಬೆಳಕಿನ ವೇಗವಾದ ಪ್ರತಿ ಸೆಕೆಂಡಿಗೆ 3 ಲಕ್ಷ ಕಿಲೋಮೀಟರ್ ವೇಗದಲ್ಲಿ ನಕ್ಷತ್ರಗಳ ಎಡೆಗೆ ಪ್ರಯಾಣ ಮಾಡಿದಾಗ ಒಂದು ವರ್ಷದಲ್ಲಿ ಕ್ರಮಿಸಿದ ಪ್ರಮಾಣ. ಪ್ರಾಯಃ ಈ ದೃಶ್ಯವನ್ನು ನೋಡಿಯೇ ಪಾಶ್ಚಿಮಾತ್ಯ ದಾರ್ಶನಿಕರ ಉದ್ಗಾರ "PHILOSOPHY BEINGS WITH WONDER" ಖಗೋಳ ವಿಜ್ಞಾನಿಗಳ ಪ್ರಕಾರ ಒಂದು 'ನಕ್ಷತ್ರ ಪುಂಜ' (Galaxy) ಎಂದರೆ ಅಗಣಿತ ನಕ್ಷತ್ರಗಳ ಒಂದು ಗುಂಪು. ಅಗಣಿತ ಎಂದರೂ ಸುಮಾರು 20ಕೋಟಿ ನಕ್ಷತ್ರಗಳು ಎಂಬುದು ಒಂದು ಊಹೆ ಮಾತ್ರ. ಇಂತಹ ಒಂದು ನಕ್ಷತ್ರ ಪುಂಜವನ್ನು ಭೂಮಿಯಿಂದ ನೋಡಿದಾಗ ಆಕಾಶದಲ್ಲಿ ಆಕ್ರಮಿಸಿಕೊಳ್ಳುವ ಜಾಗ ಎಷ್ಟು ಗೊತ್ತೇ? ಕೇವಲ ಒಂದು ರೂಪಾಯಿ ನಾಣ್ಯದ ಅಗಲದಷ್ಟು ಮಾತ್ರ!. ನಾವು ನೆಲದ ಮೇಲೆ ಒಂದು ಮೂಟೆ ರಾಗಿ ಕಾಳನ್ನು ಹರಡಿದಾಗ ಹೇಗೆ ಇಡೀ ನೆಲದ ಕಿಂಚಿತ್ತು ಭಾಗವೂ ಕಾಣುವುದಿಲ್ಲವೋ ಹಾಗೆಯೆ ಅಗಣಿತ ನಕ್ಷತ್ರಗಳು ಇಡೀ ನೀಲಿ ಆಕಾಶವನ್ನು ಮುಚ್ಚಿ ಬಿಡುತ್ತದೆ. ಹಾಗಾದರೆ ಈ ಒಂದೊಂದು ನಕ್ಷತ್ರ ಪುಂಜಗಳು ಇನ್ನೊಂದು ನಕ್ಷತ್ರ ಪುಂಜಗಳೊಡನೆ ಪರಸ್ಪರ ಡಿಕ್ಕಿ ಹೊಡೆಯದೆ ಇರುವುದಕ್ಕೆ ಕಾರಣವೇನು ಎಂಬುದಕ್ಕೆ ಶ್ರೀಕೃಷ್ಣನು ಭಗವದ್ಗೀತೆಯಲ್ಲಿ ಕೊಟ್ಟ

ಉತ್ತರ **'.......ಮಯಿ ಸರ್ವಮಿದಂ ಪ್ರೋತಂ ಸೂತ್ರೇ ಮಣಿಗಣಾ ಇವ'**. ಅಗಣಿತ ನಕ್ಷತ್ರಗಳಲ್ಲಿ ತನಗೆ ಪ್ರಿಯವಾದ ನಕ್ಷತ್ರ ಯಾವುದು ಎಂಬುದನ್ನು ಶ್ರೀಕೃಷ್ಣನು ಉದ್ಧವನಿಗೆ ಭಾಗವತ 11ನೇ ಸ್ಕಂಧದಲ್ಲಿ ಹೀಗೆ ಹೇಳಿದ್ದಾನೆ. ಮಕರರಾಶಿಯಲ್ಲಿ ಪ್ರಕಾಶಿಸುತ್ತಿರುವ – **'ನಕ್ಷತ್ರಾಣಾಂ ಅಭಿಜಿತೋಽಸ್ಮಿ'**. ಅಗಣಿತ ನಕ್ಷತ್ರಗಳಿಂದ ವ್ಯಾಪಿಸಿರುವ ಬ್ರಹ್ಮಾಂಡವನ್ನು ಭಗವಂತನಿಗೆ ಹೋಲಿಸಿದಾಗ ಇಡೀ ಬ್ರಹ್ಮಾಂಡವು ಅವನ ಪಾದದ ಕಿರು ಬೆರಳಿನ ಕೆಳಗೆ ಸಿಕ್ಕಿ ಹಾಕಿಕೊಂಡಿರುವ ಒಂದು ಸಣ್ಣ ಧೂಳಿನ ಕಣ. (ಸಂಮೂಳ್ಢಮಸ್ಯ ಪಾಂಸುರೇ...ವಿಷ್ಣು ಸೂಕ್ತ), ಇಂತಹ ಭಗವಂತ ಮೂರು ಕಾಲದಲ್ಲಿ ಮೂರು ರೂಪಗಳಿಂದ ಬ್ರಹ್ಮಾಂಡದ ನಿಯಾಮಕನಾಗಿದ್ದಾನೆ. ಇದನ್ನೇ ಶ್ರೀಜಗನ್ನಾಥ ದಾಸರು ತಮ್ಮ ಶ್ರೇಷ್ಠ ಕೃತಿ ಹರಿಕಥಾಮೃತಸಾರದಲ್ಲಿ ಹೀಗೆ ವರ್ಣಿಸಿದ್ದಾರೆ. **'ಪುರುಷರೂಪತ್ರಯನು ತಾನಾಗಿ....'** ಬ್ರಹ್ಮಾಂಡದ ಹೊರಗಿನ ರೂಪ, ಬ್ರಹ್ಮಾಂಡದ ಒಳಗಿನ ರೂಪ ಹಾಗೂ ಸಮಸ್ತ ಪಿಂಡಾಂಡಗಳ ಅಂತರ್ಯಾಮಿ ರೂಪ ಅಥವಾ ಸೃಷ್ಟಿ–ಸ್ಥಿತಿ–ಲಯಗಳ ನಿಯಾಮಕ ರೂಪ.

ಇನ್ನು ನಮ್ಮ ಭೂಮಿಯ ವಿಚಾರಕ್ಕೆ ಬರೋಣ. ಈ ಭೂಮಿಯ ಮೇಲೆ ಯಾವುದೇ ವಸ್ತುವಿನ ಭಾರಕ್ಕೂ ಅದರ ವೇಗಕ್ಕೂ ಸಂಬಂಧವಿರುತ್ತದೆ. ಮಾನವ ನಿರ್ಮಿತ ಭೂಚರ, ಜಲಚರ, ಖೇಚರ ವಾಹನಗಳ ವಿನ್ಯಾಸ, ನಿರ್ಮಾಣ. ಈ ಶತಮಾನದ ಅದ್ಭುತಗಳೇ ಸರಿ. ಆದರೆ ಭಗವತ್ ನಿರ್ಮಿತ ಭೂಮಿಯ ಭಾರ ಮತ್ತು ಅದರ ಚಲನೆಯ ವೇಗ, ಅಚಿಂತ್ಯಾದ್ಭುತ. ನಮ್ಮ ಭೂಮಿಯ ಭಾರ ವಿಜ್ಞಾನಿಗಳ ಪ್ರಕಾರ ಸುಮಾರು 6ಕೋಟಿ ಕೆ.ಜಿ. ಟನ್‌ಗಳು. ಅಂದರೆ ಸಂಖ್ಯೆ 6ರ ಪಕ್ಕದಲ್ಲಿ 21 ಸೊನ್ನೆಗಳನ್ನು ಬರೆಯಬೇಕು. ಭೂಮಿಯು ಸೂರ್ಯನಿಂದ ಸುಮಾರು 15ಕೋಟಿ ಕಿಲೋಮೀಟರ್ ದೂರದಲ್ಲಿ ಸೂರ್ಯನನ್ನು ಅಪ್ರದಕ್ಷಿಣೆ ಹಾಕುತ್ತಿದೆ. ಭೂಮಿಗೆ ಎರಡು ರೀತಿಯ ಗತಿ ಒಂದು ದಿನಗತಿ (Rotation) ಹಾಗು ಎರಡನೆಯದು ವಾರ್ಷಿಕ ಗತಿ (Revolution ) ಭೂಮಿ ತನ್ನ ಸ್ವಂತ ಕಕ್ಷೆಯ ಮೇಲೆ 24 ಗಂಟೆಗಳಲ್ಲಿ ತಿರುಗುತ್ತದೆ. ಇದೇ ದಿನರಾತ್ರಿಗಳಿಗೆ ಕಾರಣ.

ಕೋಟ್ಯಾಂತರ ಟನ್ ಭಾರವಿರುವ ಭೂಮಿ ಸೂರ್ಯನನ್ನು ಅಪ್ರದಕ್ಷಿಣೆ ಆಕಾರವಾಗಿ ಒಂದು ಸುತ್ತು ಬರಲು ವರ್ಷದಲ್ಲಿ ಕ್ರಮಿಸಬೇಕಾದ ದೂರದ ಪ್ರಮಾಣ ಸುಮಾರು 90 ಕಿಲೋಮೀಟರ್! ಇಷ್ಟು ಅಗಾಧ ಪ್ರಮಾಣದ ದೂರವನ್ನು ನಭೋಮಂಡಲದಲ್ಲಿ ಕ್ರಮಿಸಲು ಭೂಮಿ ತನ್ನ ಕಕ್ಷೆಯ ಮೇಲೆ ತಿರುಗುತ್ತಾ ಎರಡು ರೀತಿಯ ಚಲನೆಯಿಂದ ಸಾಗುವಾಗ ಭೂಮಿಯ ವೇಗ ಊಹಿಸಲು ಅಸಾಧ್ಯ. ಅದು ಎಷ್ಟೆಂದರೆ ಪ್ರತಿ ಗಂಟೆಗೆ ಒಂದು ಲಕ್ಷ ಕಿಲೋಮೀಟರು. ಈ ವಾರ್ಷಿಕ ಗತಿಯೇ ಆರು ಋತುಗಳಿಗೆ ಕಾರಣ. ಹಾಗಾದರೆ ಸ್ವತಃ

ತನ್ನಷ್ಟಕ್ಕೆ ತಾನೇ ಚಲಿಸಲಾಗದ ಭೂಮಿಗೆ ಚಾಲನೆ ಶಕ್ತಿಯನ್ನು ಕೊಟ್ಟವನಾರು ಎಂಬ ಪ್ರಶ್ನೆಗೆ ಉತ್ತರ **'ಅಗಂ ನಯತೀತಿ ಅಗ್ನಿಃ'** ಅಗ್ನಿಶಬ್ದ ವಾಚ್ಯ ಭಗವಂತ. ಪ್ರತಿಯೊಂದು ಪಿಂಡಾಂಡದ ವೈಶ್ವಾನರಾಗ್ನಿಯೇ ಸೂರ್ಯಾಂತರ್ಯಾಮಿಯಾಗಿ ಅಗ್ನಿವಾಚ್ಯನಾಗಿ ಭೂಮಿಗೆ ಎರಡು ರೀತಿಯ ಚಲನೆಯನ್ನು ಕೊಟ್ಟಿದ್ದಾನೆ. ನಾವು ರಾತ್ರಿವೇಳೆ ಎಂಟು ಗಂಟೆ ನಿದ್ರಿಸಿದಾಗ ಭೂಮಿಯು ಸುಮಾರು 8 ಲಕ್ಷ ಕಿಲೋಮೀಟರ್ ದೂರ ಕ್ರಮಿಸಿರುತ್ತದೆ ಎಂದು ತಿಳಿದಾಗ ಮೈ ರೋಮಾಂಚನವಾಗುತ್ತದೆ ಹಾಗೂ ಇಷ್ಟೇ ಸಮಯದಲ್ಲಿ ಪ್ರತಿ ಮನುಷ್ಯನ ಎದೆಬಡಿತ 34,560 ಬಾರಿ ಆಗಿರುತ್ತದೆ. (ನಿಮಿಷಕ್ಕೆ 72 ಭಾರಿ) ನಮ್ಮ ಪೂರ್ಣ ಅಬೋಧಾವಸ್ಥೆಯಾದ ನಿದ್ರಾವಸ್ಥೆಯಲ್ಲಿ ಇಷ್ಟೆಲ್ಲಾ ಅಚಿಂತ್ಯಾದ್ಭುತ ಕಾರುಬಾರು ಮಾಡುತ್ತಿರುವ ಬ್ರಹ್ಮಾಂಡ–ಪಿಂಡಾಂಡಗಳ ನಿಯಾಮಕತೆಗೆ ಅನಂತ ನಮನಗಳು. **'ತತ್ರತತ್ರಸ್ಥಿತೋ ವಿಷ್ಣುಃ ತತ್ ತತ್ ಶಕ್ತಿ ಪ್ರಬೋಧಕಃ । ಏಕಏವ ಮಹಾಶಕ್ತಿಃ ಕುರುತೇ ಸರ್ವಂ ಅಂಜಸಾ'** ಎಂಬ ಶ್ರೀಮದಾಚಾರ್ಯರ ವಾಕ್ಯ ಎಷ್ಟು ಸತ್ಯವಲ್ಲವೆ. ★

---

(33ನೇ ಪುಟದಿಂದ...)

ಅವನಿಗೆ ಕೃಷ್ಣನಲ್ಲಿ ಭಕ್ತಿ ಉಕ್ಕಿ, ಆತನ ವಿಶ್ವರೂಪವನ್ನು ಕಾಣಬೇಕೆಂಬ ಬಯಕೆ ಉಂಟಾಯಿತು. ಈ ಬಯಕೆಯ ಹಿಂದೆ ಇರುವ ಭಕ್ತಿಯನ್ನು ಕಂಡೇ ಅರ್ಜುನನಿಗೆ ಕೃಷ್ಣ ವಿಶ್ವರೂಪವನ್ನು ತೋರಿಸಿದ. ಆದ್ದರಿಂದಲೇ ಕೊನೆಗೆ ಕೃಷ್ಣ **'ಭಕ್ತ್ಯಾತು ಅನನ್ಯಯಾಶಕ್ಯಃ ಅಹಮೇವಂ ವಿಧೋರ್ಜುನ'** ಅನ್ನುತ್ತಾನೆ.

**(ಸಶೇಷ)**

---

(28ನೇ ಪುಟದಿಂದ...)

ದುಃಖರಹಿತವಾದ ಸುಖಮಯವಾದ ಒಂದು ಅವಸ್ಥೆ. ಅದನ್ನು ಪಡೆಯಬೇಕಾದರೆ ಭಗವಂತನ ಮಹಿಮೆಗಳನ್ನು ಸದಾಕಾಲ ಪಾಡುತ್ತಿರಬೇಕು. ಆ ರೀತಿ ಭಗವನ್ಮಹಿಮೆಗಳನ್ನು ಪಾಡಬೇಕಾದರೂ ಭಗವಂತನೇ ನಮ್ಮೊಳಗಿದ್ದು ಪ್ರೇರೇಪಿಸಬೇಕು. ಅದಕ್ಕೆ ಕನಕದಾಸರು "ಹೇ! ಮನ್ಮಥನಿಗೂ ತಂದೆಯಾದ ಭಗವಂತನೇ ನಿನ್ನ ಮಹಿಮೆಗಳನ್ನು ಸದಾಕಾಲ ನನ್ನ ಮುಖದಿಂದ ಪಾಡುವಂತೆ ನನ್ನೊಳಗಿದ್ದು ಪ್ರೇರೇಪಿಸು" ಎಂದು ಪ್ರಾರ್ಥಿಸಿದ್ದಾರೆ. ಇಂತಹ ಶ್ರೀಧರ ರೂಪಿ ಪರಮಾತ್ಮನ ಮಹಿಮೆಯನ್ನು ತಿಳಿದು ಅವನಲ್ಲಿ ನಿಶ್ಚಲವಾದ ಭಕ್ತಿಯನ್ನು ಮಾಡಿ ಭಗವಂತನ ಅನುಗ್ರಹಕ್ಕೆ ಪಾತ್ರರಾಗೋಣ. ★

ಪ್ರಶ್ನೋತ್ತರ-ಪದಬಂಧ

# ನೆನಪಿನ ಅಂಗಳ

-ವಿ॥ ಶಂಕರನಾರಾಯಣಾಚಾರ್ಯ

1) ನೀರನ್ನು ಕುಡಿಯದ ಜೀವಿ ಯಾವುದು?
2) ಬೆಕ್ಕು ಯಾವಾಗ ಬಾಲ ಅಲ್ಲಾಡಿಸುತ್ತದೆ?
3) ಹಕ್ಕಿಗಳಿಗೆ ಹಲ್ಲುಗಳಿವೆಯೇ?
4) ಜೇಡಕ್ಕೆ ಎಷ್ಟು ಕಾಲುಗಳಿವೆ?
5) ಚಿಟ್ಟೆಗೆ ಎಷ್ಟು ಕಾಲುಗಳಿವೆ?
6) ವ್ಯಾಸರು ಭಾಗವತವನ್ನು ಬರೆಯಲು ಪ್ರೇರಣೆ ನೀಡಿದವರಾರು?
7) ರಂತಿದೇವನ ತಂದೆಯ ಹೆಸರೇನು?
8) ‘ರಾಜಾ ಯಯಾತಿ’ ಯಾರಿಂದ ಯೌವ್ವನವನ್ನು ಪಡೆದ?
9) ಮುಚುಕುಂದನ ತಂದೆ ಯಾರು?
10) ಕೃಷ್ಣನು ಗೀತೆಯನ್ನು ಯಾರಿಗೆ ಉಪದೇಶಿಸಿದನು?

## ಪದ ಬಂಧದ ಉತ್ತರ

1) ಶೂರಸೇನ 2) ನೇಗಿಲು 3) ಸುಭದ್ರಾ 4) ಮೃತ ಪುತ್ರನನ್ನು ಜೀವಂತವಾಗಿ ಕೊಟ್ಟದ್ದು 5) 8ನೆಯದ್ದು 6) 8 ಮಂದಿ 7) ಒನಕೆ 8) ಅಭಿಮನ್ಯು-ಉತ್ತರೆ 9) ಅರ್ಜುನ 10) ಕುರುಕ್ಷೇತ್ರ

| | | | | | |
|---|---|---|---|---|---|
| 1 ಕ | 2 ಮ | ಲ | 3 ವ | 4 ದ | ನ |
| ರು | ದ | ■ | 5 ಚ | ರ | ■ |
| ಣಾ | ನ | ■ | ನ | 6 ಮ | ನ |
| ಸಾ | ಮೋ | ■ | 8 ಕ | 9 ಪ್ರ | ■ |
| 7 ಗ | ಹ | ನ | ವಿ | ಚಾ | 10 ರ |
| ರ | ನ | 11 ವಾ | ತೆ | ರ | 12 ವ |

## ಎಡದಿಂದ ಬಲಕ್ಕೆ:

1) ಕಲೆಯಿರುವ ತಂಬಿಗೆ (3)

2) ಗಡಗಡನೆ ನಡುಗಿಸುವ ವಿಷ್ಣುವಾಹನ (3)

5) ಎಲ್ಲಿಗೂ ಹೋಗದಿರುವ ಬಂಗಾರ (2)

7) ಇದು 'ಹಿಂದಿ'ಯ ದೃಷ್ಟಿ (3)

9) ಪಶ್ಚಿಮೇಶನ ಆನೆಯಿದು (7)

10) ಮರ ಹತ್ತಿದ ದುಂಬಿ (3)

12) ಪಂಚಾಂಗವಿದು! ಗಟ್ಟಿಬೇಕು! (2)

14) ಚಂದಿರ ರಾತ್ರಿಗೊಡೆಯ (4)




ಉತ್ತರ ಮುಂದಿನ ಸಂಚಿಕೆಯಲ್ಲಿ

## ಮೇಲಿನಿಂದ ಕೆಳಕ್ಕೆ:

1) ಹಕ್ಕಿಗಳ ಮಧುರ ದನಿ (4)

2) ಈತ ರಾಮನ ಮಗ (2)

3) ಆಕಾಶದಲ್ಲಿ ಹಾರಾಡುವವರಿಗೆ ಈಕೆ ಗೆಳತಿ (5)

4) ಮರುಗ ಬೇಡ! ಶಿವನ ವಾದ್ಯವಿದೆ (4)

6) ಯುದ್ಧದಲ್ಲಿ ಹೋರಾಡುವ ಶೂರ (4)

8) ಜುಳು ಜುಳು ಹರಿದ ನೀರು (2)

11) ತಂದೆಯೊಡನೆ ಆಗಮಿಸಿದ ಪುತ್ರ (2)

12) 'ಹಿಂದಿ'ಯ ನೀರು ತಾ (2)

13) ಶರಶಯ್ಯೆಯಲ್ಲಿದ್ದರೂ ಕೈಬಿಡದ ಕೀರ್ತಿ (2)